ತಿಂಗಳ ಪತ್ರಿಕೆ

ಆಗಸ್ಟ್ : 2000



ಅಚ್ಚ ಹೊಸದು!

ನಿಮಗೆ ಈ ತೊಂದರೆಗಳಿವೆಯೆ?

- ಬಡತನ?
- ಆರ್ಥಿಕ ಹಿನ್ನಡೆ?
- ನಿರುದ್ಯೋಗ?
- ಅತ್ಯಾಚಾರ?
- ಬರ?
- ವರದಕ್ಷಿಣೆ?
- ಅನಕ್ಷರತೆ?
- ರೋಗ?
- ಕೋಮುವಾದ?

ಶೀಘ್ರುವೇ ವಾಸಿಮಾಡಿಕೊಳ್ಳಿ

ಡಾ|| ವಾಜಪೇಯಿಯವರ

ಅಣುಮೂಲಾನಿಷ್ಟದಿಂದ

ತೆಗೆದುಕೊಳ್ಳುವ ವಿಧಾನ : ಒಂದೇ ಒಂದು ಸಲ


ಎಚ್ಚರಿಕೆ : ಹಣ ಹಿಂತಿರುಗಿಸುವುದಿಲ್ಲ.

ಮಾನಸ

ತಿಂಗಳ ಪತ್ರಿಕೆ

ಸಂಪುಟ : 15 ಸಂಚಿಕೆ : 8

ಆಗಸ್ಟ್: 2000



ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಪ್ರತಿವರ್ಷ ಬರುವ ಆಗಸ್ಟ್ ೬,೯ ಹಿರೋಶಿಮಾ, ನಾಗಸಾಕಿಗಳ ನೆನಪು ತರುತ್ತಲೆ ಇರುತ್ತದೆ. ಜಗತ್ತಿನಾದ್ಯಂತ ಹೆಚ್ಚುತ್ತಿರುವ ಶಸ್ತ್ರಾಸ್ತ್ರಗಳ ಪೈಪೋಟಿ, ಮಿಲಿಟರೀಕರಣವನ್ನು ಗಮನಿಸಿದಾಗ ಹಿರೋಶಿಮಾ, ನಾಗಾಸಾಕಿಗಳು ಬರೀ ನೆನಪಾಗಿ ಉಳಿದಿದೆ ಯಾವ ಪಾಠವನ್ನು ಕಲಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಅಣುಶಕ್ತಿಯನ್ನು ವಿದ್ಯುತ್‌ಗೆ ಬಳಸಲಿ, ಅಣ್ವಸ್ತ್ರಗಳಿಗೆ ಬಳಸಲಿ ಅದರ ಘೋರ ಪರಿಣಾಮಕ್ಕೆ ಹೆಚ್ಚು ಒಳಗಾಗುವವರು ಮಹಿಳೆಯರು.

ಅಣುಶಕ್ತಿಯಿಂದ ಹೆಚ್ಚಿನ ವಿದ್ಯುತ್, ಹೆಚ್ಚಿನ ಉದ್ಯೋಗಾವಕಾಶ ಎಂಬುದೆಲ್ಲ ಹಸಿ ಸುಳ್ಳು. ವಿದ್ಯುತ್ ಆಧಾರಿತ ಉದ್ದಿಮೆಗಳು ಹೆಚ್ಚು ಯಾಂತ್ರೀಕೃತವೇ ಹೊರತು ಹೆಚ್ಚಿನ ಜನರಿಗೆ ದುಡಿಯಲು ಅವಕಾಶ ನೀಡುವುದಿಲ್ಲ. ಅಣುಶಕ್ತಿಗೆ ಹೋಲಿಸಿದಾಗ ಸೌರಶಕ್ತಿ ಹೆಚ್ಚಿನ ಜನರಿಗೆ ದುಡಿಮೆಯ ಅವಕಾಶ ನೀಡುತ್ತದೆ. ಅಣುಶಕ್ತಿ ಬಳಸಿಕೊಳ್ಳುವ ಜನರ ಪ್ರಮಾಣ 2 : 1 ಆದರೆ ಸೌರಶಕ್ತಿಯ ಪ್ರಮಾಣ 9 : 1. ಅಲ್ಲದೆ ಅಣುಶಕ್ತಿಯ ಉತ್ಪಾದನೆ ಅತ್ಯಂತ ದುಬಾರಿಯದು ಮತ್ತು ಪ್ರಾರಂಭದ ಹಂತವಾದ ಯುರೇನಿಯಂ ಗಣಿಗಾರಿಕೆಯಿಂದಲೂ ಹಾನಿಕಾರಕ. ಬಿಹಾರಿನ ಜಾದೂಗಡ ಯುರೇನಿಯಂ ಗಣಿಗಾರಿಕೆಯ ಸುತ್ತಮುತ್ತ ವಿಕಲಾಂಗ ಶಿಶುಗಳ ಜನನ, ಗರ್ಭಪಾತ, ಪೋಲಿಯಾ ಇತ್ಯಾದಿ ರೋಗ ರುಜಿನಗಳು ಸಾಮಾನ್ಯವಾಗಿದೆ. ವಿಕೀರಣದ ದುಷ್ಪರಿಣಾಮಕ್ಕೆ ಹೆದರಿ ೧೯೮೫ರಲ್ಲಿ ಫಿನ್‌ಲ್ಯಾಂಡಿನ ೫೦೦೦ ಮಹಿಳೆಯರು ಇನ್ನೆಂದು ಗರ್ಭದರಿಸುವುದಿಲ್ಲವೆಂಬ ಪ್ರತಿಜ್ಞೆ ಕೈಗೊಂಡರು.



ವಿದ್ಯುತ್ ಉತ್ಪಾದನೆಯ ಸೋಗಿನಲ್ಲಿ ಅಣ್ವಸ್ತ್ರಗಳನ್ನು ತಯಾರಿಸುತ್ತಿರುವುದು ಗೌಪ್ಯವಾಗೇನೂ ಉಳಿದಿಲ್ಲ. ಇಡೀ ದೇಶದಲ್ಲಿ ಅಣುಶಕ್ತಿಯಿಂದ ಉತ್ಪಾದಿಸುತ್ತಿರುವ ವಿದ್ಯುತ್ ಕೇವಲ 2%. ಜಗತ್ತಿನ ಎಲ್ಲಾ ಮಿಲಿಟರಿ ಶಕ್ತಿಗಳಿಗೆ ಅಣ್ವಸ್ತ್ರಗಳು ಒಪ್ಪಿತ. ಸ್ಪರ್ಧೆ, ಆಕ್ರಮಣ, ಪ್ರಾಬಲ್ಯವನ್ನು ವೈಭವೀಕರಿಸುವ ಮಿಲಿಟರಿ ಶಕ್ತಿಗಳು ಕೊಲ್ಲಲು ಆಜ್ಞೆ ನೀಡಿ, ಹೇಗೆ ಕೊಲ್ಲಬೇಕೆಂಬುದನ್ನು ಯೋಜಿಸುತ್ತವೆ. ಈ ಶಕ್ತಿಗಳಿಗೆ ವಿನಾಶಕಾರಿ ಅಣ್ವಸ್ತ್ರಗಳು ಪ್ರತಿಷ್ಠೆಯ ಸಂಕೇತ. ಮಹಿಳೆಯರ ಹೋರಾಟದಿಂದಾಗಿ ಜಗತ್ತಿನಾದ್ಯಂತ ಮಿಲಿಟರಿ ಶಕ್ತಿಯು ನಡೆಸಿರುವ ಲೈಂಗಿಕ ದೌರ್ಜನ್ಯ ಬಯಲುಗೊಂಡಿದೆ. ಎರಡನೇ ಮಹಾ ಯುದ್ಧದ ಸಮಯದಲ್ಲಿ ಜಪಾನಿನ ಮಿಲಿಟರಿಯವರು ಏಶಿಯಾದ ಎರಡು ಲಕ್ಷ ಮಹಿಳೆಯರನ್ನು ಲೈಂಗಿಕ ದಾಸ್ಯಕ್ಕೆ ನೂಕಿದ ಹೇಯ ಕೃತ್ಯಕ್ಕೆ ಜಪಾನಿನ ಪ್ರಧಾನಿಯವರು ಬಹಿರಂಗವಾಗಿ ಕ್ಷಮೆ ಕೇಳಿದ್ದಾರೆ. ಗಡಿ ಪ್ರದೇಶಗಳಲ್ಲಿ ಸೇನೆಯವರಿಂದ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರಗಳು ದೇಶಪ್ರೇಮ, ಭದ್ರತೆಯ ಹೆಸರಿನಲ್ಲಿ ಮುಚ್ಚಿಹೋಗುತ್ತವೆ.

ಅಣುಶಕ್ತಿ, ಅಣ್ವಸ್ತ್ರಗಳ ವಿರೋಧಿ ಚಳವಳಿಯು ತೀವ್ರಗೊಳ್ಳಬೇಕಿದೆ. ಲಾಭಕೋರ ಬಂಡವಾಳಶಾಹಿ ವ್ಯವಸ್ಥೆಯ ಅಭಿವೃದ್ಧಿ ಮಾದರಿ ಮತ್ತು ಮಿಲಿಟರೀಕರಣದ ಹಿಂದಿರುವ ಪುರುಷಾಧಿಪತ್ಯದ ಮೌಲ್ಯವನ್ನು ಗುರುತಿಸಿ, ಎದುರಿಸುವ ಕೆಲಸ ಮಾಡಬೇಕಿದೆ. ಮತ್ತು ಇತರ ಸಾಮಾಜಿಕ ಹೋರಾಟಗಳ ಭಾಗವಾಗಿ ಕೆಲಸ ಮಾಡಬೇಕಿದೆ. ಆಗಲೇ ವಿನಾಶಕಾರಿ ಅಣುಶಕ್ತಿಯ ಹಿಡಿತದಿಂದ ಜೀವ ಸಂಕುಲವನ್ನು ಪಾರು ಮಾಡಲು ಸಾಧ್ಯ.

○

ಹಿರೋಶಿಮಾ, ನಾಗಾಸಾಕಿ ಒಂದೇ ಸಾಕು ಬಾಂಬುಗಳನ್ನು ಸಾಗುಹಾಕಿ

ಸಾಂತ್ವನ ಮಹಿಳೆಯರು

ನಮ್ಮನ್ನು ಸಾಂತ್ವನ ಮಹಿಳೆಯರು (Comfort women) ಎಂದು ಕರೆಯುತ್ತಾರೆ.

ನಾವು ಫಿಲಿಪೈನ್ಸ್‌ನ ಮಹಿಳೆಯರು. ನಮ್ಮ ಮನೆಯಿಂದ, ನಮ್ಮ ಕುಟುಂಬಗಳಿಂದ ನಮ್ಮನ್ನು ಬಲಾತ್ಕಾರವಾಗಿ ಎಳೆದೊಯ್ಯಲಾಯಿತು. ನಮ್ಮನ್ನು ಅವಮಾನಿಸಲಾಯಿತು, ಬಲಾತ್ಕರಿಸಲಾಯಿತು, ಹೊಡೆದು ಕಿರುಕುಳ ನೀಡಲಾಯಿತು, ಲೈಂಗಿಕ ದಾಸ್ಯಕ್ಕೆ ಒಳಪಡಿಸಲಾಯ್ತು.

ನಾವು ಹುಡುಗಿಯರು, ಯುವತಿಯರು. ನಮ್ಮ ತಂದೆ ತಾಯಿಂದಿರನ್ನು ನಮ್ಮ ಕಣ್ಣ ಮುಂದೆಯೇ ಕೊಲ್ಲಲಾಯಿತು. ಕೊಲ್ಲುವ ಮುನ್ನ ಅವರ ಕೈಗಳನ್ನು ಕಟ್ಟಿದ್ದರು, ಮೂಳೆಗಳನ್ನು ಮುರಿದಿದ್ದರು.

ನಾವು ಬಡರೈತ ಕುಟುಂಬಕ್ಕೆ ಸೇರಿದವರು, ನಗರ್ಧದ ಬಡಕುಟುಂಬಕ್ಕೆ ಸೇರಿದವರು, ಮೀನುಗಾರರ ಕುಟುಂಬದವರು. ಅವರೆಲ್ಲ ಯುದ್ಧದ ಉರಿಯಲ್ಲಿ ಬೆಂದವರು.

ಬಡ ಮಹಿಳೆಯರ ಘನತೆ, ಗೌರವಗಳನ್ನ ಜಪಾನಿನ ಮಿಲಿಟರಿ ಯೋಧರು ಕ್ರೂರವಾಗಿ ಹೊಸಕಿ ಹಾಕಿದರು.

ಯುದ್ಧದ ಕ್ರೌರ್ಯಕ್ಕೆ ಬಲಿಯಾದವರು ನಾವು, ಯುದ್ಧದಲ್ಲಿ ಬದುಕುಳಿದವರು ನಾವು.

ಮೌನವಾಗಿ ನಮ್ಮ ಗಾಯ, ನಿಟ್ಟುಸಿರು, ಕೋಪ, ನಮ್ಮ ಮೇಲಿನ ಅತ್ಯಾಚಾರವನ್ನು ದೀರ್ಘಕಾಲ ಮೌನವಾಗಿ ನುಂಗಿಕೊಂಡವರು ನಾವು. ಆ ಮೌನವನ್ನ ಅಲ್ಲಾಡಿಸುವ ದನಿಗಳು ನಾವು

ನಮ್ಮ ಕೋಪ, ನೋವಿನ ದನಿಯನ್ನು ಗಾಳಿಯಲ್ಲಿ ತುಂಬಿದವರು ನಾವು.

ನಮ್ಮ ಘನತೆ, ಸಮ್ಮಾನ, ನ್ಯಾಯಕ್ಕಾಗಿ ಕಿರುಚುವ ದನಿಗಳು ನಾವು. ನಾವು ಬಲಿಪಶುಗಳಷ್ಟೇ ಅಲ್ಲ, ಯುದ್ಧದಲ್ಲಿ ಬದುಕುಳಿದವರು ನಾವು, ಈಗ ನಮ್ಮ ಹಕ್ಕಿಗಾಗಿ ಹೋರಡುವ ಹೋರಾಟಗಾರರು ನಾವು.

ಕಾಸಿಗಾಗಿ ಕೈಚಾಚುವ ಭಿಕ್ಷುಕರಲ್ಲ ನಾವು. ಕರುಣೆಗೆ, ದಾನಕ್ಕೆ ಬೇಡುವ ದುರ್ದೈವಿಗಳು ನಾವಲ್ಲ.

ಹಣದ ಗಾಳ ಹಿಡಿದಿರುವ ಕೈಗಳನ್ನು ನಾವು ಬಲ್ಲೆವು. ಆ ಗಾಳ ಮತ್ತೊಮ್ಮೆ ನಮ್ಮನ್ನು ಸಿಕ್ಕಿಸಿ ಮೌನದ ಬೋನಿನೊಳಗೆ ನೂಕುವುದನ್ನು ನಾವು ಕಾಣಬಲ್ಲೆವು.

ನಾವು ಫಿಲಿಪೈನ್ಸ್‌ನ ಮಹಿಳೆಯರು, ಕಲೆಯನ್ನು ಹೊತ್ತವರು, ಊನಗೊಂಡವರು. ನಮ್ಮನ್ನು ಬಂಧಿಸಿದ, ಕಿರುಕುಳ ನೀಡಿದ, ಅತ್ಯಾಚಾರವೆಸಗಿದ, ಆಕ್ರಮಣ ಮಾಡಿದ ನೀಚರನ್ನು ಬಯಲಿಗೆಳೆಯಲು, ಶಿಕ್ಷಿಸಲು ಒತ್ತಾಯಿಸುವ ಧೈರ್ಯ ಮಾಡಿದವರು ನಾವು.

ನಾವು ಫಿಲಿಪೈನ್ಸ್‌ನ ಮಹಿಳೆಯರು, ಧೈರ್ಯವಂತರು, ಗಟ್ಟಿಗರು. ನಮ್ಮ ಕತೆಯನ್ನು ಕೇಳಿರೆಂದು, ಆಲಿಸಿರೆಂದು, ಬಂಡೆಗಳ ಮೇಲೆ ಕೊರೆಯಿರೆಂದು ಒತ್ತಾಯಿಸುವವರು ನಾವು. ಮತ್ತೆ ನಮ್ಮ ದನಿಯನ್ನು ಅಡಗಿಸಲು ಸಾಧ್ಯವಿಲ್ಲವೆಂಬುದನ್ನು ಈ ಜಗತ್ತು ನೆನಪ್ಪಿಟ್ಟುಕೊಳ್ಳುತ್ತದೆ.

ಇದು ಕಲ್ಪನೆಯಲ್ಲಿ ಹೆಣೆದ ಕತೆಯಲ್ಲ. ಜೀವಂತ ದನಿಗಳಿಂದ ಚಿಮ್ಮಿದ ಕಿಡಿಗಳು. ಎರಡನೆ ಮಹಾಯುದ್ಧದ ಸಮಯದಲ್ಲಿ ಜಪಾನಿನ ಸಾಮ್ರಾಜ್ಯಶಾಹಿ ಸೇನೆ ನಡೆಸಿದ ಕ್ರೂರ ಅನ್ಯಾಯವಿದು. ಇಡೀ ಸೇನೆಯನ್ನು ಬಳಸಿ, ವ್ಯವಸ್ಥಿತ ಸಂಚು ನಡೆಸಿ ಕೊರಿಯ ಮತ್ತು ಇನ್ನಿತರ ಆಕ್ರಮಿತ ಪ್ರದೇಶಗಳಿಂದ ಸುಮಾರು 100000 ದಿಂದ 250000 ಮಹಿಳೆಯರನ್ನು ಬಲಾತ್ಕಾರವಾಗಿ ಕದ್ದೊಯ್ಯಲಾಯಿತು. ಜಪಾನಿನ ಮಿಲಿಟರಿ ನಡೆಸಿದ ಲೈಂಗಿಕ ಗುಲಾಮಗಿರಿಯೊಂದಿಗೆ, ಸುಖದಾಣ (Comfort Station)ವೆಂದು ಕರೆಯಲಾಗುತ್ತಿದ್ದ ಸೇನಾ ವೇಶ್ಯಾಗೃಹಗಳ ಹಿಡಿತವೂ ಸೇರಿಕೊಂಡಿತ್ತು. 1937ರಲ್ಲಿ ಜಪಾನ್ ಚೈನಾವನ್ನು ಆಕ್ರಮಣ ಮಾಡಿದ ನಂತರದಲ್ಲಿ ಸೇನಾ ವೇಶ್ಯಾಗೃಹಗಳನ್ನು ವ್ಯವಸ್ಥಿತವಾಗಿ ನಡೆಸುವ ರೂಢಿಯನ್ನು ಅಧಿಕೃತವಾಗಿ ಜಾರಿಗೆ ತರಲಾಯ್ತು. ಈಶಾನ್ಯ ಚೈನಾ ಅಥವಾ ಮಂಚೂರಿಯ, ಚೈನಾದ ಇನ್ನಿತರ ಭಾಗಗಳಲ್ಲಿ ಫಿಲಿಪೈನ್ಸ್, ಕೊರಿಯಾ, ಸೌತ ಸೀ ಐಲಂಡ್ ಮತ್ತು ಇಂಡೋನೇಸಿಯಾ, ಮಲೇಶಿಯಾ ಎಲ್ಲಾ ಕಾವಲು ದಂಡುಗಳಲ್ಲಿ ವೇಶ್ಯಾಗೃಹಗಳನ್ನು ಜಾರಿಗೆ ತರಲಾಯ್ತು.

ಹೆಚ್ಚಿನ ಮಹಿಳೆಯರು 11 ರಿಂದ 20 ವಯಸ್ಸಿನವರಾಗಿದ್ದವರು. ಅವರನ್ನು ಬಲಾತ್ಕಾರವಾಗಿ ಬಂಧಿಸಿ ನಿರಂತರವಾಗಿ ಅತ್ಯಾಚಾರ ವೆಸಗಲಾಗಿತ್ತು. ಫಿಲಿಪ್ಪೈನ್ಸ್‌ನ ಅನೇಕ ಹುಡುಗಿಯರನ್ನು ನದಿಯ ಬಳಿ ಬಟ್ಟೆ ಒಗೆಯುತ್ತಿದ್ದಾಗ, ಹೊಲಗಳಲ್ಲಿ ಕೆಲಸ ಮಾಡುವಾಗ, ಮಾರುಕಟ್ಟೆಗೆ ಹೋಗುವಾಗ ಕದ್ದೊಯ್ಯಲಾಗಿತ್ತು. ವೇಶ್ಯಾಗೃಹಕ್ಕೆ ಕರೆದೊಯ್ಯುವ ಹಾದಿಯಲ್ಲಿ ಅತ್ಯಾಚಾರವೆಸಗಲಾಗಿತ್ತು. ಕೊರಿಯಾದ ಹೆಂಗಸರನ್ನು

ವಸಾಹತುಶಾಹಿ ಸರ್ಕಾರದ ಅಧಿಕಾರಿಗಳು ಒಳ್ಳೆಯ ಸಂಬಳ ಬರುವ ಫ್ಯಾಕ್ಟರಿಗಳಿಗೆ ಸೇರಿಸುವ ಆಸೆ ತೋರಿಸಿ ಕರೆದೊಯ್ದಿದ್ದರು. ಆ ಮಹಿಳೆಯರಾರಿಗೂ ತಾವು ಜಪಾನಿನ ಸಾಮ್ರಾಜ್ಯಶಾಹಿ ಸೇನೆಗೆ ಸಾಂತ್ವನ ಮಹಿಳೆಯರಾಗುತ್ತೇವೆಂಬ ಅರಿವೇ ಇರಲಿಲ್ಲ. ಕೆಲವರಂತೂ ಎಷ್ಟು ಸಣ್ಣ ಹುಡುಗಿಯರೆಂದರೆ ಅವರಿಗೆ ಸೆಕ್ಸ್‌ನ ಅರ್ಥವೆ ತಿಳಿದಿರಲಿಲ್ಲ.

ಇತಿಹಾಸಜ್ಞರ ಪ್ರಕಾರ ಯುದ್ಧ ಮುಗಿಯುವ ವೇಳೆಗೆ 30% ಗಿಂತ ಕಡಿಮೆ ಮಹಿಳೆಯರು ಉಳಿದಿದ್ದರು. ಯುದ್ಧ ಮುಗಿದ ಮೇಲೆ ಜಪಾನಿ ಯೋಧರು ಈ ಮಹಿಳೆಯರನ್ನು ತೊರೆದುಹೋದರು. ಕೆಲವು ಮಿಲಿಟರಿ ವಲಯಗಳಲ್ಲಿ ಸಾಂತ್ವನ ಮಹಿಳೆಯರ ತಲೆ ಕಡಿಯಲಾಯ್ತು, ಇನ್ನಿತರರಿಗೆ ಆತ್ಮಹತ್ಯೆ ಮಾಡಿಕೊಳ್ಳಿರೆಂದು ಆಜ್ಞೆ ಮಾಡಲಾಯ್ತು. ಬೇರೆ ದೇಶಗಳಲ್ಲಿ ಅವರನ್ನು ಕಂದಕಗಳಲ್ಲಿ ಹಾಕಿ ಕೊಲ್ಲಲಾಯ್ತು. ಬಿಟ್ಟುಹೋದ ಮಹಿಳೆಯರು ಸಾಹಸ ಪಟ್ಟು ತಮ್ಮ ಮನೆಗಳಿಗೆ ಬಂದರು.

ಅಂತರರಾಷ್ಟ್ರೀಯ ನಿಯಮವನ್ನು ಉಲ್ಲಂಘಿಸಿದ ಜಪಾನ್ ಸರ್ಕಾರ

ಏಶಿಯಾದ ಸಾಂತ್ವನ ಮಹಿಳೆಯರು ನೀಡಿದ ಸಾಕ್ಷ್ಯಗಳ ಪ್ರಕಾರ ಪ್ರತಿಯೊಬ್ಬ ಸಾಂತ್ವನ ಮಹಿಳೆಯ ಮೇಲೆ ಒಂದಕ್ಕಿಂದ ಹೆಚ್ಚಿನ ಅಪರಾಧವನ್ನೆಸಗಲಾಗಿತ್ತು. ಅತ್ಯಾಚಾರ, ಕೊಲೆ, ಬಲವಂತದ ದುಡಿಮೆ, ಕದ್ದೊಯ್ಯುವುದು, ಲೈಂಗಿಕ ದಾಸ್ಯ, ಕಿರುಕುಳ, ಜನಾಂಗೀಯ ಭೇದಭಾವ, ಸಾಮೂಹಿಕ ಕಗ್ಗೊಲೆ, ಬಲವಂತವಾಗಿ ಆತ್ಮಹತ್ಯೆ ಮಾಡಿಸುವಂತಹ ಅಪರಾಧಗಳು ಜರುಗಿರುವುದು ಸಾಕ್ಷಿಗಳಿಂದ ತಿಳಿಯುತ್ತದೆ. ಪೆಸಿಫಿಕ್ ಯುದ್ಧದಲ್ಲಿ ನೊಂದವರ ಅಸೋಸಿಯೇಷನ್ ಮತ್ತು ಅಪಹರಣಕ್ಕೊಳಪಟ್ಟ ಕುಟುಂಬಕ್ಕೆ ಸೇರಿದ ಸಾಂತ್ವನ ಮಹಿಳೆಯರು ಡಿಸೆಂಬರ್ 6, 1991ರಂದು ಮತ್ತು ಜಪಾನಿನ ಲೈಂಗಿಕ ದಾಸ್ಯಕ್ಕೆ ಬಲಿಯಾದ ಫಿಲಿಪೈನ್ಸ್ ಮಹಿಳೆಯರ ಅಸೋಸಿಯೇಷನ್‌ವರು ಏಪ್ರಿಲ್ 2, 1993ರಂದು ಜಪಾನ್ ಸರ್ಕಾರದ ವಿರುದ್ಧ ಟೋಕಿಯೊ ಜಿಲ್ಲಾ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಎರಡನೆ ಮಹಾಯುದ್ಧದಲ್ಲಿ ನಡೆಸಿದ ಅನ್ಯಾಯಗಳಿಗೆ ಯುದ್ಧಾನಂತರದ ಜವಾಬ್ದಾರಿ, ಪರಿಹಾರಕ್ಕೆ ಒತ್ತಾಯಿಸಿತು. ಈ ಎರಡೂ ಗುಂಪುಗಳು ಒತ್ತಾಯಿಸಿರುವ ಹಕ್ಕು ಬಾಧ್ಯತೆಗಳಿಗೆ ಬೇರೆ ಬೇರೆ ಕಾನೂನಿನ ಆಧಾರಗಳಿವೆ. ಜಪಾನ್ ಆಕ್ರಮಣ ಮಾಡಿದಾಗ ಕೊರಿಯಾ 30 ವರ್ಷಗಳಿಗಿಂತಲೂ ಹೆಚ್ಚಿನ ಕಾಲ ಜಪಾನಿನ ವಸಾಹತುವಾಗಿತ್ತು. ಭಿನ್ನ ಭಿನ್ನ ಐತಿಹಾಸಿಕ ಅನುಭವಗಳಿಂದಾಗಿ ಫಿಲಿಪೈನ್ಸ್ ಮತ್ತು ಕೊರಿಯಾದ ಮೊಕದ್ದಮೆಗಳಿಗೆ ಬೇರೆ ಬೇರೆ ಸೈದ್ಧಾಂತಿಕ ಚೌಕಟ್ಟುಗಳಿದ್ದರೂ ಬೇಡಿಕೆಗಳು ಮಾತ್ರ ಒಂದೆ ಆಗಿವೆ.

1. ಸಾಂತ್ವನ ಮಹಿಳೆಯರನ್ನು ಲೈಂಗಿಕ ದಾಸ್ಯಕ್ಕೆ ದೂಡಿದ ಅಪರಾಧವನ್ನು ಒಪ್ಪಿಕೊಳ್ಳಿ.
2. ಸಾಂತ್ವನ ಮಹಿಳೆಯರ ಮೇಲೆ ನಡೆಸಿದ ಅಪರಾಧವನ್ನು ಬಯಲುಗೊಳಿಸಿ.
3. ಮಿಲಿಟರಿಯ ಲೈಂಗಿಕ ದಾಸ್ಯಕ್ಕೆ ಒಳಗಾದ ಪ್ರತಿಯೊಬ್ಬ ಮಹಿಳೆಯಲ್ಲೂ ಕ್ಷಮಾಪಣೆ ಕೇಳಿ.
4. ಬಲಿಪಶುಗಳಾದ ಸಾಂತ್ವನ ಮಹಿಳೆಯರ ಹೆಸರಿನಲ್ಲಿ ಸ್ಮಾರಕ ನಿರ್ಮಿಸಿ.
5. ಅನ್ಯಾಯಕ್ಕೊಳಗಾದವರಿಗೆ ಮತ್ತವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಿ.
6. ಇತಿಹಾಸದ ಪುಸ್ತಕದಲ್ಲಿ ಮಿಲಿಟರಿ ನಡೆಸಿದ ಲೈಂಗಿಕ ದಾಸ್ಯದ ಅಪರಾಧವನ್ನು ದಾಖಲಿಸಿ ಅಪರಾಧಿಗಳನ್ನು ಶಿಕ್ಷಿಸಿ.

ಜಪಾನಿ ಸಾಮ್ರಾಜ್ಯಶಾಹಿ ಸೇನೆಯ ಹೇಗ್ ಒಪ್ಪಂದದ ಉಲ್ಲಂಘನೆಯನ್ನು ಅಂತರರಾಷ್ಟ್ರೀಯ ಮಿಲಿಟರಿ ನ್ಯಾಯಾಸ್ಥಾನದಲ್ಲಿ ಆಂಶಿಕವಾಗಿ ತೀರ್ಮಾನಿಸಲಾಯ್ತು. ಯುದ್ಧಾಪರಧಗಳಿಗೆ ಆಜ್ಞೆ, ಅವಕಾಶ ಮಾಡಿಕೊಟ್ಟು ಒಪ್ಪಂದವನ್ನು ಉಲ್ಲಂಘಿಸಿದ್ದಕ್ಕಾಗಿ ಜಪಾನಿ ಸಾಮ್ರಾಜ್ಯಶಾಹಿ ಸೇನೆಯ ಸದಸ್ಯರನ್ನು ಆರೋಪಿಸಲಾಯ್ತು. ಇಲ್ಲಿ ಬಂಧಿತರ ಮೇಲಿನ ಅನ್ಯಾಯಗಳ ಮೇಲೆ ಒತ್ತುನೀಡಲಾಯಿತು. ಆದರೆ ನಾಗರೀಕರ ಮೇಲೆ ಅನಾಹುತಗಳನ್ನು ಇನ್ನು ಸಂಪೂರ್ಣವಾಗಿ ಬಯಲು ಪಡಿಸಿಲ್ಲ.

ಹೇಗ್ ಒಪ್ಪಂದ ಉಲ್ಲಂಘನೆಯು ಶಿಕ್ಷಾರ್ಹ ಪರಿಚ್ಛೇಧ ಉಲ್ಲೇಖಿಸಿರುವ ನಿಯಮವನ್ನು ಉಲ್ಲಂಘಿಸುವ ಯುದ್ಧ ಮಗ್ನಪಕ್ಷ, ಮೊಕದ್ದಮ್ಮೆ ಒತ್ತಾಯಿಸಿದಲ್ಲಿ ಪರಿಹಾರವನ್ನು ನೀಡಬೇಕಾಗುತ್ತದೆ. ತನ್ನ ಸೇನಾಬಲಗಳ ವ್ಯಕ್ತಿಗಳು ಮಾಡುವ ಕೃತ್ಯಗಳಿಗೆ ಜವಾಬ್ದಾರಿ ಹೊರಬೇಕಾಗುತ್ತದೆ. ಈ ಅವಕಾಶ ಪ್ರಕಾರ ಜಪಾನಿ ಸರ್ಕಾರ, ಜಪಾನಿನ ಸಾಮ್ರಾಜ್ಯಶಾಹಿ ಸೇನೆಯು ಆಕ್ರಮಿತ ಪ್ರದೇಶಗಳಲ್ಲಿ ನಡೆಸಿದ ಕೊಲೆ, ಅತ್ಯಾಚಾರದ ಪ್ರಕರಣಗಳಿಗೆ ಪರಿಹಾರ ನೀಡಲು ಬದ್ಧವಾಗಬೇಕಾಗುತ್ತದೆ.

ಕೃಪೆ : ವಾರ್ ಕ್ರೈಮ್ಸ್ ಆನ್ ಏಶಿಯನ್ ವಿಮೆನ್

ಕನ್ನಡಕ್ಕೆ : ಸರಸ್ವತಿ ದು.

ಜಪಾನಿನ ಮಿಲಿಟರಿ ವ್ಯವಸ್ಥೆಯು ನಡೆಸಿದ ಹೇಯಕೃತ್ಯಕ್ಕೆ 1995ರಲ್ಲಿ ಜಪಾನಿನ ಪ್ರಧಾನಿಯು ಸಾರ್ವಜನಿಕವಾಗಿ ಸಾಂತ್ವನ ಮಹಿಳೆಯರ ಕ್ಷಮೆ ಕೇಳಿ ಬರೆದ ಪತ್ರ

ಎಲ್ಲಾ ಸಾಂತ್ವನ ಮಹಿಳೆಯರಿಗೂ ನನ್ನ ತಪ್ಪೊಪ್ಪಿಗೆ

ಜಪಾನ್ ಸರ್ಕಾರ ಮತ್ತು ಜಪಾನ್ ಜನತೆಯ ಸಹಕಾರದೊಂದಿಗೆ 'ಏಶಿಯನ್‌ಫಂಡ್' ಪ್ರಾರಂಭವಾಗುತ್ತಿರುವ ಸಂದರ್ಭದಲ್ಲಿ ಯುದ್ಧದ ಸಮಯದಲ್ಲಿ ಸಾಂತ್ವನ ಮಹಿಳೆಯರ ಮೇಲೆ ನಡೆದ ಅತ್ಯಾಚಾರಕ್ಕೆ ನಾವು ಜಪಾನಿಯರು ಪಶ್ಚಾತಾಪ ಪಡುತ್ತೇವೆ. ನನ್ನ ವೈಯಕ್ತಿಕ ಭಾವನೆಗಳನ್ನು ಇಲ್ಲಿ ತಿಳಿಸಲಿಚ್ಛಿಸುತ್ತೇನೆ.

ಜಪಾನಿನ ಮಿಲಿಟರಿ ಅಧಿಕಾರವು ಷಾಮೀಲಾಗಿದ್ದ ಸಾಂತ್ವನ ಮಹಿಳೆಯರು ಎಂಬ ವಿಷಯವು ಬಹುಸಂಖ್ಯಾ ಮಹಿಳೆಯರ ಘನತೆ, ಗೌರವದ ಮೇಲೆ ನಡೆದ ಘೋರ ಅವಮಾನವನ್ನು ತಿಳಿಸುತ್ತದೆ.

ಜಪಾನಿನ ಪ್ರಧಾನಿಯಾಗಿ ನಾನು, ಅಳತೆಗೆ ನಿಲುಕದ, ಧಾರುಣಯಾತನೆ ಅನುಭವಿಸಿ, ಮಾಯದ ದೈಹಿಕ, ಮಾನಸಿಕ ಗಾಯಗಳನ್ನನುಭವಿಸಿದ ಎಲ್ಲರಿಗೂ ಪ್ರಾಮಾಣಿಕವಾಗಿ, ವಿನಮ್ರನಾಗಿ ಕ್ಷಮೆಯಾಚಿಸುತ್ತೇನೆ.

ನಾವು ಭೂತದ ಭಾರದಿಂದ ಜಾರಿಕೊಳ್ಳಲಾಗುವುದಿಲ್ಲ ಹಾಗೆಯೇ ಭವಿಷ್ಯದ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ನಮ್ಮ ದೇಶ, ತನ್ನ ನೈತಿಕ ಹೊಣೆಯನ್ನು ನೋವಿನಿಂದ ಅರಿತುಕೊಂಡಿದೆ; ಪಶ್ಚಾತಾಪ, ತಪ್ಪೊಪ್ಪಿಗೆ ಭಾವನೆಗಳಿಂದ, ಮುಚ್ಚುಮರೆಯಿಲ್ಲದೆ ಭೂತದ ಇತಿಹಾಸವನ್ನು ಒಪ್ಪಿಕೊಳ್ಳುತ್ತದೆ. ಮತ್ತು ಈ ಭಾವನೆಗಳನ್ನು ನಿಖರವಾಗಿ ಮುಂದಿನ ಸಂತತಿಗೂ ತಲುಪಿಸುತ್ತೇವೆ.

ಮಹಿಳೆಯರ ಘನತೆ, ಗೌರವದ ಮೇಲಾಗುತ್ತಿರುವ ಹಿಂಸೆ, ಅನ್ಯಾಯಗಳನ್ನು ತೊಡೆದು ಹಾಕುವ ಕಾರ್ಯದಲ್ಲಿ ಜಪಾನ್ ಸಕ್ರಿಯವಾಗಿ ಭಾಗವಹಿಸಬೇಕು.

ಮುಂದಿನ ಜೀವನದಲ್ಲಿ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಶಾಂತಿ ಸಿಗಲೆಂದು ನನ್ನ ಹೃದಯಾಂತರಾಳದಿಂದ ಬೇಡಿಕೊಳ್ಳುತ್ತೇನೆ.

ಗೌರವಯುತವಾಗಿ ತಮ್ಮವ
ರ್‍ಯೂಟರೊ ಹಿಶಿಮೊಟೊ
ಜಪಾನ್ ಪ್ರಧಾನಮಂತ್ರಿ

ಏಶಿಯನ್ ವಿಮೆನ್ಸ್‌ಫಂಡ್ : 1995ರಲ್ಲಿ ಜಪಾನ್ ಸರ್ಕಾರ, ಜಪಾನಿನ ಮಿಲಿಟರಿ ದೌರ್ಜನ್ಯದಲ್ಲಿ ಬದುಕುಳಿದ ಸಾಂತ್ವನ ಮಹಿಳೆಯರಿಗಾಗಿ ಏಶಿಯನ್ ವಿಮೆನ್ಸ್ ಫಂಡ್ ಅನ್ನು ಸ್ಥಾಪಿಸಿತು. ಇದನ್ನು ಸರ್ಕಾರೇತರ ನಿಧಿಯನ್ನಾಗಿ ಸ್ಥಾಪಿಸಿದ್ದು ಜಪಾನಿ ಜನತೆ, ಕಾರ್ಪೋರೇಷನ್‌ಗಳು, ಸಾರ್ವಜನಿಕ ಉದ್ದಿಮೆಗಳು ನೀಡುವ ಕೊಡುಗೆ, ಸಹಾಯ ಧನವನ್ನೊಳಗೊಂಡಿದೆ. ಸಾಂತ್ವನ ಮಹಿಳೆಯರ ಹಿತರಕ್ಷಣೆಗಾಗಿ ಈ 'ಪಶ್ಚಾತಾಪದ ಹಣ'ವನ್ನು ಬಳಸಲಾಗುತ್ತಿದೆ. ಏಶಿಯನ್ ವಿಮೆನ್ಸ್‌ಫಂಡ್ ಅನ್ನು ಕೊರಿಯಾ ಫಿಲಿಪೈನ್, ತೈವಾನ್, ಇಂಡೋನೇಶಿಯಾದ ಬದುಕುಳಿದ ಸಾಂತ್ವನ ಮಹಿಳೆಯರು ಮತ್ತವರ ಬೆಂಬಲ ಗುಂಪುಗಳು ಕಟುವಾಗಿ ಟೀಕಿಸಿದವು. ಇದು, ಆಗಿರುವ ಅನಾಹುತಕ್ಕೆ ಪರಿಹಾರವೆಂಬಂತೆ ನೀಡುವ ದಾನವಾಗಿದೆ. ಈ ಕರುಣೆಯ ಹಣ ನಮ್ಮ ಘನತೆ, ಗೌರವ ತುಳಿದುಹಾಕುತ್ತಿದೆಯೇ ಹೊರತು, ಅನ್ಯಾಯಕ್ಕೆ ಪರಿಹಾರವನ್ನು ನೀಡುವುದಿಲ್ಲ ಎಂಬುದು ಅವರ ನಿಲುವು. ಅಲ್ಲದೆ ಜಪಾನಿ ಸರ್ಕಾರ ಕೊಡುಗೆಯಾಗಿ ನೀಡಿರುವ ಹಣವು, ಮಾನವತೆಯ ವಿರುದ್ಧ ತಾನು ನಡೆಸಿದ ಪಾಪಕಾರ್ಯದ ನೈತಿಕ ಹೊಣೆಯಿಂದ ನುಣುಚಿಕೊಳ್ಳಲು ಕೊಟ್ಟಿರುವುದಾಗಿದೆ ಎನ್ನುತ್ತಾರೆ.

ನಾವು ತೋಡಿದ ಕಂದಕಗಳೆ ನಮಗೆ ಸಮಾಧಿ ಆಗುವುದೇನೋ?

ಸಾಮ್ರಾಜ್ಯಶಾಹಿ ಜಪಾನ್ ಸೈನ್ಯ, 2ನೇ ವಿಶ್ವಯುದ್ಧದ ಸಮಯದಲ್ಲಿ ತನ್ನ ಸೇನೆಯ ಲೈಂಗಿಕ ತೃಷೆಗೆ 2 ಲಕ್ಷ ಏಶಿಯಾ ಮಹಿಳೆಯರನ್ನು ಬಳಸಿಕೊಂಡು ಅವರಿಗೆ 'ಸಾಂತ್ವನ ಮಹಿಳೆಯರು' (ಕಂಫರ್ಟ್ ವಿಮೆನ್) ಎಂದು ನಾಮಕರಣ ಮಾಡಿತು. ಇದರಲ್ಲಿ ಏಶಿಯಾ ಖಂಡದ ಫಿಲಿಪೈನ್, ಚೀನಾ, ಕೊರಿಯಾ, ಇಂಡೋನೇಶಿಯಾ ಮತ್ತು ಜಪಾನಿನ ಮಹಿಳೆಯರಿದ್ದಾರೆ.

ಅಳಿದುಳಿದ ಲೋಲಾಗಳು (ಫಿಲಿಪೈನ್ ಭಾಷೆಯಲ್ಲಿ ಅಜ್ಜಿಯರು) ಇಂದು ಮೌನ ಮುರಿದು ಪ್ರತಿಭಟಿಸತೊಡಗಿದ್ದಾರೆ. ಅಂತಹ ಹೋರಾಟದಲ್ಲಿ ಭಾಗಿಯಾದ ಒಬ್ಬ ಲೋಲಾಳ ಅನುಭವ ಇದು.

ನಾನು ತ್ರಿಸ್ಟೆಟಾ ಆಲ್‌ಕೂಬರ್. ನನಗೆ 72 ವರುಷ. ನಾನು ಹುಟ್ಟಿದ್ದು ಜುಲೈ 26, 1926ರಂದು, ಬೆಳೆದಿದ್ದು, ಬಾರಿಯಾ ಕೂಗಾನ್ ಎಂಬ ಹಳ್ಳಿ. ಇದು ಸಾನ್‌ಜೋಸ್‌ನಲ್ಲಿರುವ ಟಾಕ್ಲೂಬಾನ್ ಊರಿನ ಹತ್ತಿರವಿದೆ. ನನ್ನ ತಾಯಿ ಒಬ್ಬಳು ಧೋಬಿ ನನ್ನ ತಂದೆಗೆ ಯಾವುದೇ ಉದ್ಯೋಗವಿರಲಿಲ್ಲ. ನಾನು ಮನೆಗೆ ಹಿರಿಯ ಮಗಳಾದ್ದರಿಂದ ನನ್ನ ತಾಯಿಗೆ ಕೆಲಸದಲ್ಲಿ ನೆರವಾಗುತ್ತಿದ್ದೆ. ನನಗೆ ಇಬ್ಬರು ತಮ್ಮಂದಿರು ಮತ್ತು ಒಬ್ಬ ತಂಗಿಯಿದ್ದಳು. ನನಗಾಗ ಸುಮಾರು 16 ವರುಷವಿರಬಹುದು, ನನ್ನ ಹಳ್ಳಿಯಿಂದ 6 ಕಿ.ಮೀ. ದೂರದ ನಗರಕ್ಕೆ ಬೇರೆಯವರೊಬ್ಬರ ಕೆಲಸದ ಮೇಲೆ ನನ್ನ ತಮ್ಮನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೆ. ಆಗ ಅವನಿಗೆ 14 ವರುಷ. ನಾವು ಹಿಂತಿರುಗಿ ಬಾರಿಯಾಕೂಗಾನ್‌ಗೆ ಬಂದಾಗ ಹಳ್ಳಿಯ ಮುಕ್ಕಾಲು ವಾಸಿ ಜನರು ಮಾಯವಾಗಿದ್ದರು. ಆ ಹಳ್ಳಿಗೆ ಜಪಾನ್ ಸೈನಿಕರ ದಂಡು ಬಂದಿತ್ತು, ಅವರಿಗೆ ಹೆದರಿ ಜನರೆಲ್ಲಾ ಪರಾರಿಯಾಗಿದ್ದರು ಎಂದು ನಂತರ ತಿಳಿಯಿತು. ಜಪಾನ್ ಸೈನಿಕರು ಸಾನ್‌ಜೋಸ್ ನಗರವನ್ನು ತಂಗುದಾಣವಾಗಿ ಮಾಡಿಕೊಂಡಿದ್ದರು. ಕೈಯಲ್ಲಿ ತುಪಾಕಿ, ಕತ್ತಿ ಹಿಡಿದು ಓಡಾಡುತ್ತಿದ್ದ ಸೈನಿಕರು ನಮ್ಮಿಬ್ಬರನ್ನು ದರದರನೆ ಎಳೆದೊಯ್ದರು. ಸಾನ್‌ಜೋಸ್‌ನ ಸಮುದ್ರ ದಂಡೆಯ ಹತ್ತಿರವಿದ್ದ ವಿಮಾನ ನಿಲ್ಲುವ ಜಾಗಕ್ಕೆ ಕರೆದೊಯ್ದರು. ಅಲ್ಲಿ ನಮ್ಮಿಬ್ಬರನ್ನು ಅಗಲಿಸಿದರು. ನನ್ನನ್ನು ಗುಡಿಸಿಲಿನ ತರವಿದ್ದ ಒಂದು ಜಾಗಕ್ಕೆ ಒಯ್ದರು. ಅಲ್ಲಿ ಆಗಲೇ ಸುಮಾರು 30 ಮಹಿಳೆಯರನ್ನು ಕೂಡಿ ಹಾಕಿದ್ದರು. ನಾವಿದ್ದ ಗುಡಿಸಲಿಗೆ ಕಂಬ ಮತ್ತು ತಲೆಹೊದಿಕೆ ಮಾತ್ರವಿದ್ದು ಗೋಡೆಗಳನ್ನು ಕಂಬಿಯಿಂದ ಸುತ್ತಿ ಸುತ್ತಿ ಕಟ್ಟಲಾಗಿತ್ತು. ಬಿದಿರಿನ ಬಾಗಿಲಿದ್ದು ಚಿಲಕವಿತ್ತು. ನೆಲ ಬರೀ ಮರಳುಮಯವಾಗಿತ್ತು. ಅಲ್ಲಿದ್ದ ಎಲ್ಲ ಹೆಂಗಸರ ಪೈಕಿ ನಾನು ಮತ್ತು ಇನ್ನೊಬ್ಬ ಹುಡುಗಿ ಅತೀ ಕಿರಿಯವರಾಗಿದ್ದೆವು. ನಮ್ಮ ಗುಂಪಿನಲ್ಲಿ 40 ವರುಷದ ಮಹಿಳೆಯರು, ಮದುವೆಯಾದ ಗೃಹಿಣಿಯರಿದ್ದರು. ನನ್ನ ಹಳ್ಳಿಯಿಂದ ಮೂವರು ನಟ್ಟಿ, ಗುನ್‌ಯಾಂಗ್, ಮತ್ತು ಬಿಲಾ ಕೂಡ ಇದ್ದರು. ನಂತರ ಬಿಲಾ ಅಮೆರಿಕಾಗೆ ಹೋಗಿರುವಳೆಂದು ತಿಳಿಯಿತು.

ಗುಡಿಸಲನ್ನು ಸೈನಿಕರು ಹಗಲಿರುಳು ಬೇರೆ ಬೇರೆ ಪಾಳಿಯಲ್ಲಿ ಕಾವಲು ಕಾಯುತ್ತಿದ್ದರು. ಪಾಯಿಕಾನೆ, ಸ್ನಾನದ ಮನೆಯ ಅನುಕೂಲವಿರಲಿಲ್ಲ. ಶೌಚಾಲಯ ಕೆಲಸಗಳನ್ನು ಸಮುದ್ರದಲ್ಲಿ ಸೈನಿಕರ ಎದುರಿಗೆ ಮಾಡಿಕೊಳ್ಳಬೇಕಿತ್ತು.

ಬೆಳಗ್ಗಿನ ಜಾವವೇ ನಮಗೆ ಕರೆ ಬರುತ್ತಿತ್ತು. ನಾನು ಎಲ್ಲರೊಟ್ಟಿಗೆ ಕಂದಕ ತೋಡಿ, ರಾಶಿ ರಾಶಿ ಮರಳನ್ನು ಚೀಲಗಳಿಗೆ ತುಂಬಿಸಿ ಹಳ್ಳದ ಹತ್ತಿರ ಪೇರಿಸಿ ಇಡಬೇಕಿತ್ತು. ಈ ಕೆಲಸವನ್ನು ಬೆಳಗ್ಗೆಯಿಂದ ಸಂಜೆಯವರೆಗೆ ಸತತವಾಗಿ ಮಾಡಬೇಕಿತ್ತು. ಊಟೋಪಚಾರ ತೀರ ಕಳಪೆಯಾಗಿತ್ತು. ಸ್ವಲ್ಪ ಉಪ್ಪಿನೊಂದಿಗೆ ಒಂದು ಹಿಡಿ ಅನ್ನ ಮತ್ತು ಒಂದು ಹಿಡಿ ಹುರುಳಿಕಾಯಿ ಕೊಡುತ್ತಿದ್ದರು. ಅದು ಯಾವ ಮೂಲೆಗೂ ಸಾಲದೇ ಹಸಿವು ನೀರಡಿಕೆಯಿದ ಸತತವಾಗಿ ಬಳಲುತ್ತಿದ್ದೆ. ಇದೇ ತರದ ಬಲವಂತದ ದುಡಿಮೆಯಿಂದಾಗಿ ನನ್ನ ತಮ್ಮ ಹಸಿವು ನೀರಡಕೆಯಿಂದ ಬಳಲಿ ಅಸುನೀಗಿದನೆಂದು ನನ್ನ ಜೊತೆಯವರು ಹೇಳಿದರು. ಪಾದ್ರಿಯ ಆಶೀರ್ವಾದ ಸಹ ಇಲ್ಲದೆ ಅವನನ್ನು ಅಲ್ಲೇ ಸಮುದ್ರದಂಡೆಯಲ್ಲಿ ಮಣ್ಣು ಮಾಡಿದರೆಂದು ತಿಳಿದು ತುಂಬಾ ದುಃಖವಾಯಿತು. ಕೆಲಸದ ಮಧ್ಯೆ ಮಾತನಾಡಿದರೆ ನಮಗೆ ಹೊಡೆಯುತ್ತಿದ್ದರು.

ನನ್ನನ್ನು ಕರೆದುಕೊಂಡು ಹೋದ ಮೂರು ದಿನಗಳ ನಂತರ ನನ್ನ ಮೇಲೆ ಜಪಾನಿನ ಸೈನಿಕರು ಲೈಂಗಿಕ ಅತ್ಯಾಚಾರ ನಡೆಸಿದರು. ಆ ದಿನ ರಾತ್ರಿ ಜಪಾನಿನ ಸೈನಿಕರು ನಮ್ಮ ಗುಡಿಸಲಿಗೆ ಬಂದು ನಮ್ಮನ್ನೆಲ್ಲಾ ಹತ್ತಿರದ ಸಮುದ್ರ ದಂಡೆಗೆ ಕರೆದೊಯ್ದರು. ಅಲ್ಲಿ ಸುಮಾರು 40 ರಿಂದ 50 ಜಪಾನಿನ ಸೈನಿಕರು ನಾವು ಬರುವುದನ್ನು ಕಾಯುತ್ತಿದ್ದು, ತಕ್ಷಣವೇ ತೋಳಗಳಂತೆ ನಮ್ಮ ಮೇಲೆ ಎರಗಿ ಅಲ್ಲಿದ್ದ ಬಾಳೆಯ ಮತ್ತು ತಂಗಿನ ತೋಪಿನಲ್ಲಿ ಉರುಳಿಸಿ ಅತ್ಯಾಚಾರವೆಸಗಿದ್ದರು. ಮೊದಲ ಸಲ ನನ್ನ ಮೇಲೆ ಎರಗಿದಾಗ

ನಾನು ಪ್ರತಿಭಟಿಸಿದೆ. ನನ್ನ ಹೊಡೆದುರುಳಿಸಿದರು ಆಗ ನನ್ನ ಎಡಭುಜದ ಎಲುಬಿಗೆ ಏಟುಬಿದ್ದು ಮೂಳೆ ಟಕ್ಕನೆ ಮುರಿಯಿತು. ತುಪಾಕಿಯ ಮೊನೆಯಿಂದ ಕಿಬ್ಬೊಟ್ಟೆಗೆ ತಿವಿದಿದ್ದರಿಂದ ರಕ್ತ ಸುರಿಯುತ್ತಿದ್ದರೂ ಅತ್ಯಾಚಾರವನ್ನು ಮುಂದುವರೆಸಿದ. ನನ್ನನ್ನು ಗುಡಿಸಲಿಗೆ ವಾಪಸ್ಸು ಕರೆದೊಯ್ದಾಗ ಬೆಳಿಗ್ಗೆ 6 ಗಂಟೆಯಾಗಿತ್ತು. ಕಿಬ್ಬೊಟ್ಟೆಯ ಗಾಯಕ್ಕೆ, ಮುರಿದ ಎಡಭುಜದ ಎಲುಬಿಗೆ ಯಾವುದೇ ರೀತಿಯ ಔಷದೋಪಚಾರ ಸಿಗಲಿಲ್ಲ. ಮತ್ತೆ ಮರುದಿನ ಎಂದಿನಂತೆ ದುಡಿತ ಸಾಗಿತ್ತು. ಗಾಣದೆತ್ತಿನಂತೆ ದುಡಿಯುವುದನ್ನು ಬಿಟ್ಟು ನನಗೆ ಬೇರೆ ಏನೂ ಮಾಡಲಾಗಲಿಲ್ಲ. ಇದರಿಂದಾಗಿ ಈಗಲೂ ನನ್ನ ಎಡ ಭುಜದಲ್ಲಿ ಊನವಿದೆ. ಭಾರದ ವಸ್ತುವನ್ನು ಎತ್ತಲಾಗುವುದಿಲ್ಲ.

ಅಂದಿನಿಂದ ಪ್ರತಿರಾತ್ರಿ 8 ರಿಂದ 9 ಸೈನಿಕರಿಗೆ ನನ್ನ ದೇಹ ಆಹಾರವಾಗುತ್ತಿತ್ತು. ನೂರಾರು ಸೈನಿಕರಿಗೆ ನಮ್ಮ ದೇಹ ಹಂಚಲ್ಪಡುತ್ತಿತ್ತು. ಅವರು ಸರದಿಯಲ್ಲಿ ಒಬ್ಬೊಬ್ಬರೇ ಬಂದು ಕಾರ್ಯವೆಸಗಿ ಹೋಗುತ್ತಿದ್ದರು. ನಮ್ಮ ಮುಟ್ಟಿನ ದಿನಗಳಲ್ಲಿ ಕೂಡ ಬಿಡುವು ನೀಡುತ್ತಿರಲಿಲ್ಲ. ಉಟ್ಟಬಟ್ಟೆಯಲ್ಲಿ ಋತುಸ್ರಾವದ ರಕ್ತವನ್ನು ಒರೆಸಿಕೊ ಎಂದು ಅಬ್ಬರಿಸಿ ಮುಂದುವರೆಯುತ್ತಿದ್ದರು.

ನಾನು ಕಿರಿಯವಳಾದ್ದರಿಂದ ಲೈಂಗಿಕತೆಯ ಯಾವುದೇ ಅನುಭವವಿರಲಿಲ್ಲ. ಈ ರೀತಿಯ ಲೈಂಗಿಕ ಅತ್ಯಾಚಾರ ಸತತವಾಗಿ ನಡೆದಿದ್ದು ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಜಪಾನಿನ ಸೈನಿಕರ ಟೋಪಿ, ಸಮವಸ್ತ್ರ ಮತ್ತು ಶೂಸು ಕಂಡರೆ ಭಯದಿಂದ ಎದೆ ನಡುಗುತ್ತಿತ್ತು.

ನನಗೆ ತಪ್ಪಿಸಿಕೊಳ್ಳುವ ಆಸೆಯಿತ್ತು ಆದರೆ ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ನಾವು ತೋಡಿದ ಕಂದಕಗಳೇ ನಮಗೆ ಸಮಾಧಿ ಆಗುವುದೇನೋ ಎಂದನಿಸುತ್ತಿತ್ತು. ನನ್ನ ತಾಯಿಯನ್ನು ಕಾಣುವ ಹಂಬಲ ಬಲವಾಗಿತ್ತು. ಈ ರೀತಿಯ ಬವಣೆ ಸುಮಾರು 2 ವರುಷದವರೆಗೆ ಅಂದರೆ 1942 ಇಂದ 1944ರ ಕೊನೆಯವರೆಗೆ ನಡೆದಿತ್ತು. ಅಮೆರಿಕನ್ನರು ವಿಮಾನ ಧಾಳಿ ಶುರುಮಾಡಿದರು. ಎದುರಿಸಲು ಜಪಾನ್ ಸೈನ್ಯ ಸಮುದ್ರ ದಂಡೆಯಲ್ಲಿ ಯುದ್ಧಕ್ಕೆ ಸಜ್ಜಾಗುತ್ತಿತ್ತು. ಪಹರೆ ಕಾಯುವ ಸೈನಿಕರೂ ಇರಲಿಲ್ಲ. ನಾವು ತಕ್ಷಣವೇ ಕಂಬದ ಅಡಿಯಲ್ಲಿ ಹಳ್ಳ ತೋಡಿ ಆ ಜಾಗದಿಂದ ಕಂಬಿಕಿತ್ತೆವು.

ನಾನು ತಪ್ಪಿಸಿಕೊಂಡು ಸಾನ್‌ಜೋಸ್‌ಗೆ ಬಂದಾಗ ನನ್ನ ತಾಯಿ ಅಲ್ಲಿರಲೇ ಇಲ್ಲ. ಅಲ್ಲೇ ನಗರದಲ್ಲಿ ತರಕಾರಿ ಮಾರಿ ಜೀವಿಸುತ್ತಿದ್ದೆ. ಜೊತೆಗೆ ನನ್ನ ಅಮ್ಮನನ್ನು ಹುಡುಕುತ್ತಿದ್ದೆ. ಕೊನೆಗೆ ನನ್ನ ಅಮ್ಮ-ತಮ್ಮ ತಂಗಿ ಸಿಕ್ಕರು. ಲೈಂಗಿಕ ಅತ್ಯಾಚಾರಕ್ಕೆ ಒಳಗಾದವಳು ಎಂದು ಜನ ಎಲ್ಲಿ ಹೀಯಾಳಿಸುವರೋ ಎಂಬ ಅವಮಾನದಿಂದ ಹಳ್ಳಿಗೆ ಮರಳಿ ಹೋಗಲೇ ಇಲ್ಲ.

ಪಿಲಿಪಿನಾ ಎಂಬುವನ ಜೊತೆಯಲ್ಲಿ ಬದುಕುತ್ತಿದ್ದೆ. ಮದುವೆಯಾಗಬೇಕು ಎನ್ನುವಷ್ಟರಲ್ಲಿ ನನ್ನ ಗತಜೀವನದ ವಿಷಯ ತಿಳಿದು ಆತ ಹೇಳದೇ ಕೇಳದೇ ಬಿಟ್ಟುಹೋದ. ಆಗ ನಾನು ಬಸಿರಿಯಾಗಿದ್ದೆ. ನನಗೆ 1946 ಜೂನ್ 10ರಂದು ಗಂಡು ಮಗು ಹುಟ್ಟಿತು. ಹತ್ತುವರುಷದ ತರುವಾಯ ನಾನು ಜೀಸಸ್‌ನನ್ನು ಮದುವೆಯಾದೆ. ನಾನು ನನ್ನ ಗಂಡನಿಗೆ ಮದುವೆಯ ಮೊದಲೇ ಎಲ್ಲ ವಿಷಯವನ್ನು ವಿವರವಾಗಿ ಹೇಳಿದೆ. ಆತ ನನ್ನ ಅರ್ಥಮಾಡಿಕೊಂಡ. ನಮಗೆ ಮಕ್ಕಳಾಗಲೇ ಇಲ್ಲ. ನನ್ನ ಗಂಡ ಪಿಲಿಪೈನ್ ಕಂಫರ್ಟ ವಿಮೆನ್ ಟಾಸ್ಕ್ ಫೋರ್ಸ್‌ಗೆ ವಿಷಯ ಬಹಿರಂಗ ಪಡಿಸಲು ಮತ್ತು ಅವರ ವಿಳಾಸ ಹುಡುಕುವಲ್ಲಿ ನನಗೆ ಸಹಾಯ ಮಾಡಿದ.

ನನಗೆ ತೀವ್ರ ರುಮ್ಯಾಟಿಸಂ ಮತ್ತು ಡಯಾಬಿಟಿಕ್ ಖಾಯಿಲೆ ಇದೆ. ಪ್ರತಿದಿನ ಔಷದಿ ಸೇವಿಸಲೇಬೇಕು. ನಾನು ಬಹಳ ನಿಧಾನವಾಗಿ ನಡೆಯುತ್ತೇನೆ. ಬಹುಶಃ ಸ್ವಲ್ಪಕಾಲವಾದ ಮೇಲೆ ನಾನು ನಡೆಯಲಾರೆ.

ಪಿಲಿಪೈನ್ ಕಂಫರ್ಟ್ ವಿಮೆನ್ ಟಾಸ್ಕ್ ಫೋರ್ಸ್‌ನೊಡನೆ ಕೈ ಜೋಡಿಸಿ ನನ್ನಂತೆ ಹಲವಾರು ಪಿಲಿಪೈನ್ ಮಹಿಳೆಯರಿಗೆ ಅನ್ಯಾಯ ಮಾಡಿದ ಜಪಾನ್ ಸರ್ಕಾರದ ವಿರುದ್ಧ ವಕಾಲತ್ತು ಹಾಕಲು ನಿರ್ಧರಿಸಿದೆ. ನನಗೆ ಈಗ 72 ವರುಷ. ನಮಗೆ ಆದ ಅಪಮಾನ, ಹಿಂಸೆ, ಅತ್ಯಾಚಾರವನ್ನು ಜಪಾನ್ ಸರ್ಕಾರ ಒಪ್ಪಿಕೊಳ್ಳಬೇಕು ಮತ್ತು ಅದಕ್ಕೆ ತಕ್ಕ ಪರಿಹಾರ ನೀಡಬೇಕು ಮತ್ತು ನಮಗೆ ಮಾಡಿದ ಅವಮಾನಕ್ಕೆ ಜಪಾನ್ ಸರಕಾರ ಕ್ಷಮೆ ಕೇಳಬೇಕೆಂಬುದೇ ನಮ್ಮ ಒತ್ತಾಯ.

ಕನ್ನಡಕ್ಕೆ : ಸವಿತ ಎ.

(ಕೃಪೆ : ವಾರ್ ಕ್ರೈಮ್ಸ್ ಆನ್ ಏಶಿಯನ್ ವಿಮೆನ್)

ಹೋ ಆ ಕ್ಷಣ! ದೊಡ್ಡದೊಂದು ಸುತ್ತಿಗೆಯಲ್ಲಿ ಗುದ್ದಿ ಕುದಿವ ಎಣ್ಣೆಯಲ್ಲಿ ಹಾಕಿದಂತಾಯ್ತು.... ಉತ್ತರಕ್ಕೆ ದೂಡಿ ಎಸೆದಂತಾಯ್ತು. ಹಕ್ಕುಗಳೆಲ್ಲ ಅದಲುಬದಲಾದಂತಾಯ್ತು.

- ಹಿರೋಶಿಮಾದ ಜೂನಿಯರ್ ಕಾಲೇಜ್ ವಿದ್ಯಾರ್ಥಿ

ನಾಗಾಸಾಕಿಯಿಂದ ಪತ್ರ :

ಡಾ. ಮರಿಕೊ ಕಿಟಾನೊ

ಪ್ರಿಯ ಪಾಕಿಸ್ತಾನೀಯರೇ.......

ಪಾಕಿಸ್ತಾನದಲ್ಲಿ ಅಣುಪರೀಕ್ಷೆ (ನ್ಯೂಕ್ಲಿಯರ್ ಟೆಸ್ಟ್)ಯ ನಂತರ ವಿಜಯೋತ್ಸಾಹ ಆಚರಿಸುತ್ತಿದ್ದ ಮುಖಗಳನ್ನು ನೋಡಿ ನನಗೆ ಉಮ್ಮಳಿಸಿದ ಸಂಕಟವಾಗಿದೆ. ನಾಚಿಕೆಯಿಲ್ಲದ ಮುಗ್ಧ ಮುಖಗಳಿವು. ಅಣುಅಸ್ತ್ರಗಳಿಂದಾಗುವ ಅವಘಡಗಳ ಬಗ್ಗೆ ಯೋಚನೆಯನ್ನಾಗಲೀ ಅಥವಾ ಖುದ್ದಾ ನೋಡಿದ ಅನುಭವವಿಲ್ಲದ ಮುಖಗಳಿವು. ನಾನು ಇದನ್ನು ಸ್ವತಃ ನೋಡಿದ್ದೇನೆ. ನಾಗಾಸ್ಸಾಕಿಯ ಬಾಂಬ್ ದಾಳಿಯಲ್ಲಿ ಬದುಕುಳಿದವಳ ಮೊಮ್ಮಗಳು ನಾನು. ಅದರ ಗುರುತಾಗಿ ನನ್ನ ಪಾದಗಳು ವಿಕಾರವಾಗಿವೆ. ಒಂದು ಕಣ್ಣಿಲ್ಲ ಹಾಗೂ ನನ್ನ ಎಡಗೈ ಚಲನೆಯನ್ನೇ ಕಳೆದುಕೊಂಡಿದೆ. ನನ್ನಜ್ಜಿಯಿಂದ ನನ್ನಮ್ಮ ಕೂಡ ಅನುವಂಶೀಯವಾಗಿ ವಿಕಲಾಂಗವನ್ನು ಬಳುವಳಿಯಾಗಿ ಪಡೆದಿದ್ದಳು. ಅಣುಬಾಂಬ್‌ನ ಈ ಅದ್ಭುತ ಚಮತ್ಕಾರಕ್ಕೆ ಧನ್ಯವಾದಗಳು, ಅದನ್ನೇ ಇಂದು ಭಾರತ-ಪಾಕಿಸ್ತಾನಗಳೆರಡೂ ಉದ್ರಿಕ್ತವಾಗಿ ಆಚರಿಸುತ್ತಿವೆ.

ವಿವೇಕವುಳ್ಳ ಯಾವುದೇ ಮನುಷ್ಯ ಅದು ಹೇಗೆ ತಾನೆ ಸ್ಫೋಟಗೊಳ್ಳುವ ಅಣುಅಸ್ತ್ರಗಳು ರಕ್ಷಣೆ ಕೊಡುವುವೆಂದು ನಂಬಲು ಸಾಧ್ಯ? ಟಿಕ್ ಟಿಕ್ ಎನ್ನುವ ಬಾಂಬ್‌ನ ಮೇಲೆ ಕುಳಿತಿರುವುದು ರಕ್ಷಣೆಯೇ? (ಚರ್ನೊಬೈಲ್‌ನ ಜನರಲ್ಲಿ ಇದಕ್ಕೆ ಉತ್ತರ ಖಂಡಿತಾ ಇದೆ) ಅಣುಯುದ್ಧದ ಅಂಚಿನಲ್ಲಿ ಕುಳಿತಿರುವುದು ರಕ್ಷಣೆ ಒದಗಿಸುವುದೇ? ಖಂಡಿತಾ ಇಲ್ಲ. ಹತ್ತು ವರ್ಷ ನಿರಂಕುಶ ಪ್ರಭುತ್ವದ ಕಹಿಉಂಡ ಪಾಕಿಸ್ತಾನ, ಹೀಗೆಂದೂ ಮಾಡಿರದ ಪಾಕಿಸ್ತಾನ ಇದಕ್ಕಾಗಿ ಹೆಚ್ಚಿನ ಬೆಲೆ ತೆರಬೇಕಾಗುವುದು ನಿಶ್ಚಯ. ನಾನಿಲ್ಲಿ ನೋಡುತ್ತಿರುವುದು ರಸ್ತೆಗಳಲ್ಲಿ ಒಂದು ಹೊತ್ತಿನ ಊಟಕ್ಕಾಗಿ ಭಿಕ್ಷೆ ಎತ್ತುತ್ತಿರುವ ಮಕ್ಕಳು, ಪೌಷ್ಟಿಕಾಂಶದ ಕೊರತೆಯಿಂದ ಬಳಲಿದ ಮಕ್ಕಳನ್ನು ಸೊಂಟದಲ್ಲಿ ಹೊತ್ತು ಬೇಡುವ ಮಹಿಳೆ, ಗಟಾರಗಳಲ್ಲಿ ಬಿದ್ದು ಸಾಯುತ್ತಿರುವ ವಯೋವೃದ್ಧರನ್ನು.

ಅವರು ಸಾಯುತ್ತಲೆ ಇರುತ್ತಾರೆ. ಪ್ರಾಶಸ್ತ್ಯದ ಪಟ್ಟಿಯಿಂದ ಇವರನ್ನು ಪಾಕಿಸ್ತಾನ ಸರ್ಕಾರ ಕೆಳಗೆ ದೂಡಿದೆ. ಇದಕ್ಕೆ ಬದಲಾಗಿ, ಸ್ವಾರ್ಥ ಹಾಗೂ ಆಡಂಬರದಿಂದ ಭಾರತಕ್ಕಿಂತ ಸ್ವಲ್ಪ ಹೆಚ್ಚೆಂದು ತೋರಿಸುವ ಆಟಕ್ಕೆ ದೇಶದ ಬೊಕ್ಕಸವನ್ನೇ ಉಪಯೋಗಿಸುತ್ತಿರುವುದು ಹಾಸ್ಯಸ್ಪದ. ಅಣುಬಾಂಬ್ ಖಂಡಿತವಾಗಿ ಹಸಿದ ಕಂದಮ್ಮಗಳ ತಟ್ಟೆಗೆ ಆಹಾರವನ್ನಂತೂ ಹಾಕುವುದಿಲ್ಲ.

ಡಾಕ್ಟರೇಟ್ ಪದವಿಗಾಗಿ ನಾನು ಇಸ್ಲಾಂ ಧರ್ಮವನ್ನು ಓದಿದ್ದೇನೆ. ಅದರಿಂದ ಮನುಷ್ಯರು ಜೀವಿಗಳಲ್ಲೇ ಉತ್ತಮರೆಂದು ನಾನು ಕಲಿತಿದ್ದೆ. ಹಾಗೆಂದು ನಂಬಲು ಈಗ ನನಗೆ ಭಯವಾಗುತ್ತಿದೆ. ಭೂಮಿಯಲ್ಲಿ ಇರುಹ ಇತರೆ ಚರಾಚರಗಳ ಪೈಕಿ ಮನುಷ್ಯ ವಿಕಸನಗೊಂಡವನಲ್ಲ! ನಾವು ಹುಟ್ಟಾ ಅನಾಗರೀಕರು, ಹಾಗೆಯೇ ಇರುತ್ತೇವೆ. ಎಷ್ಟೇ ಬಗೆಯ ನಾಗರೀಕತೆಯ ಪರದೆಗಳನ್ನು ಹೊದ್ದುಕೊಂಡರೂ ಸಹ ಭೂಮಿಯ ಮೇಲಿನ ಜೀವ ಜಂತುಗಳ ಪೈಕಿ ಮನುಷ್ಯ ಜೀವಿ ಅಷ್ಟೇ, ತನ್ನ ಜನಾಂಗದವರನ್ನೆ ಕೊಲ್ಲಲು ಹಲವಾರು ಕುಟಿಲ ಮಾರ್ಗಗಳನ್ನು ಕಂಡುಹಿಡಿದಿರುವುದು. ಸರ್ವನಾಶಕಾರಿ ಬಾಂಬ್‌ಗಳನ್ನು ಹೆಚ್ಚೆಚ್ಚು ಮಾಡಿದಷ್ಟು ಹೆಚ್ಚು ಪ್ರತಿಷ್ಠಿತರಾಗುತ್ತೇವೆ. ಜನರನ್ನು ಕೊಲ್ಲುವುದರಲ್ಲೇ ನಮಗೆ ಸುಖವಿದೆ.

ಮರೆಯುವುದು ನಮಗೆಷ್ಟು ಸಲೀಸು. ನಮ್ಮ ಪೂರ್ವಜರು ಮಾಡಿದ ತಪ್ಪಿನಿಂದ ಆದ ಪರಿಣಾಮವನ್ನು ನೆನಪಿನಲ್ಲಿಡದೇ ಅದೇ ತಪ್ಪನ್ನು ಪೀಳಿಗೆಯಿಂದ ಪೀಳಿಗೆಗೆ ಮಾಡುತ್ತಾ ಬರುತ್ತಿದ್ದೇವೆ. ನಾಝಿಗಳ ಕೈಯಲ್ಲಿ ಕ್ರೌರ್ಯವನ್ನು ಅನುಭವಿಸಿದ ಯಹೂದ್ಯರು (Jews) ಅದನ್ನೇ ಪ್ಯಾಲೆಸ್ಟೀನರ ಮೇಲೆಸಗಿದರು. ಹಾಗೇ ಬೋಸ್ನಿಯದಲ್ಲೂ ಕೂಡ. ಅಲ್ಪಸಂಖ್ಯಾತ ಕ್ರಿಶ್ಚಿಯನ್ನರನ್ನು ಪಾಕಿಸ್ತಾನ ಕೆಟ್ಟದಾಗಿ ನಡೆಸಿಕೊಂಡಿರುವುದನ್ನು ಮರೆಯಲಾಗುವುದಿಲ್ಲ. ಹಿರೋಶಿಮಾ ಹಾಗೂ ನನ್ನೂರಾದ ನಾಗಸಾಕಿಯನ್ನು ಮರೆತು ಪ್ರಪಂಚ ಕಣ್ಮುಚ್ಚಿ ಅಣ್ವಸ್ತ್ರ ಪೈಪೋಟಿ ನಡೆಸುತ್ತಿದೆ. ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಮೇಲೆ ಕೀಳಾದ ದೌರ್ಜನ್ಯ ಮಾಡಬಲ್ಲನೆಂಬುದು ಸತ್ಯ, ಏಕೆಂದರೆ ಒಂದೊಮ್ಮೆ ಅದು ನನಗೂ ಆಗಬಹುದೆಂದು ಯೋಚಿಸುವುದಿಲ್ಲ.

ಯಾಕೆ ಜಪಾನ್ ಮಾತ್ರ ಈ ಪೈಪೋಟಿಯಲ್ಲಿ ಭಾಗಿಯಾಗಿಲ್ಲವೆಂದರೆ, ಅಣುಶಕ್ತಿಯ ಭೀಕರತೆಯನ್ನು ನಾವು ಮನೆಯಲ್ಲೇ ಅನುಭವಿಸಿದ್ದೇವೆ; ನಮ್ಮ ಪ್ರೀತಿ ಪಾತ್ರರು ನಮ್ಮೆದುರಿನಲ್ಲೇ ಉರಿದು ಕರಕಲಾಗಿರುವುದನ್ನು ನಾವು ನೋಡಿದ್ದೇವೆ. ನಮ್ಮ ಮನೆಗಳು

ಮರಳಿನ ಮನೆಯಂತೆ ಕುಸಿದು ಹೋಗಿದ್ದನ್ನು ನೋಡಿದ್ದೇವೆ. ಆದರೆ ಹಿರೋಷಿಮಾ ಹಾಗೂ ನಾಗಸಾಕಿಯಲ್ಲಿ ತಮ್ಮದೇನೂ ತಪ್ಪಿಲ್ಲದೆ ಹುಟ್ಟುವ ನವಜಾತ ದೃಷ್ಟಿಹೀನ ವಿಕಲಾಂಗ ಹಸುಳೆಗಳನ್ನು ಭಾರತೀಯರಾಗಲೀ, ಪಾಕಿಸ್ತಾನಿಯರಾಗಲೀ ನೋಡಿಲ್ಲ. ಆದ್ದರಿಂದಲೆ ನೀವು ಸಂಭ್ರಮಿಸುವುದು. ನನ್ನ ಪ್ರಾರ್ಥನೆ ಇಷ್ಟೇ, ಪಾಕಿಸ್ತಾನದ ಮಹಿಳೆಯೊಬ್ಬಳು ಮುಂದೊಂದು ದಿನ ಹೊಸದಾಗಿ ಹುಟ್ಟಿದ ತನ್ನ ಕಂದನ ಕಣ್ಣಿರುವ ಜಾಗದಲ್ಲಿ ತಣ್ಣಗಿನ, ಎರಡು ಖಾಲಿ, ನೀಲಿ ಚುಕ್ಕೆಗಳನ್ನು ನೋಡದಿರಲೆಂಬುದೇ ಆಗಿದೆ. ನನ್ನ ಓಡಾಟ ಬಹಳ ಮಿತಿಯಲ್ಲಿದೆ. ನಾನು ಯಾರನ್ನೂ ತಲುಪದ ಸ್ಥಿತಿಯಲ್ಲಿರುವೆ. ಪಾಕಿಸ್ತಾನದಲ್ಲಿ ಹೆಚ್ಚು ಪ್ರಭಾವವುಳ್ಳ ನಿಮ್ಮ ಪತ್ರಿಕೆಗೆ ಬರೆಯುತ್ತಿದ್ದೇನೆ. ಕೊಂಚವಾದರೂ, ಬದಲಾವಣೆ ತರುವಲ್ಲಿ ನಂಬಿಕೆ ಇಟ್ಟಿರುವ ಯಾರಿಗಾದರೂ, ಎಲ್ಲಿಗಾದರೂ ಈ ಬರಹದ ಪ್ರತಿಗಳನ್ನು ಕಳುಹಿಸಿ ಎಂಬುದು ನನ್ನ ಕಳಕಳಿಯ ಬೇಡಿಕೆಯಷ್ಟೇ ಅಲ್ಲ ಒತ್ತಾಯ ಕೂಡ. ಶಾಂತಿಯ ಅರಿವು ಮೂಡಿಸುವಲ್ಲಿ ಎಲ್ಲ ಜನರನ್ನು ಒಟ್ಟುಗೂಡಿಸುವುದೇ ನನ್ನ ಹೆಬ್ಬಯಕೆ. ನೀವು ಬದಲಾವಣೆ ತರಬಲ್ಲಿರಿ.

ಕನ್ನಡಕ್ಕೆ : ಬಿ. ಎನ್. ಶಾರದ

ಡಾ|| ಕಿಟಾನೊ ಧಾರ್ಮಿಕ ಅಧ್ಯಯನದಲ್ಲಿ ಒಸಾಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದಿದ್ದಾರೆ. ಪಾಕಿಸ್ತಾನ ಅಣುಸ್ಫೋಟಾ ಪರೀಕ್ಷೆ ನಡೆಸಿದ ಸಮಯದಲ್ಲಿ ಡಾ|| ಕಿಟಾನೊ ಲಾಹೋರಕ್ಕೆ ಭೇಟಿ ಕೊಟ್ಟಿದ್ದರು.

ಪಾಕಿಸ್ತಾನ ಅಣುಯುದ್ಧದ ನಂತರ



ಭಾರತ ಅಣುಯುದ್ಧದ ನಂತರ



ಹಿರೋಶಿಮಾ ಹೊಗೆಯಲ್ಲಿ ಕನ್ನಡತಿಯರು



ಆಗಸ್ಟ್ ಮೊದಲ ವಾರ ಬರುತ್ತಲೇ ನಮಗೆ ಹಿರೋಶಿಮಾ ನಾಗಾಸಾಕಿಗಳ ದುರ್ದಿನಗಳ ನೆನಪು ಎದುರಾಗುತ್ತದೆ. ಅಲ್ಲಿಂದ ಆರಂಭವಾದ ಆ ಕರಾಳ ಪರಮಾಣು ಚರಿತ್ರೆ ಬೆಳೆಯುತ್ತ ಬೆಳೆಯುತ್ತ ಹೇಗೆ ನಮ್ಮ ಕಾಲ ಬುಡಕ್ಕೂ ಬಂದಿದೆ ಎಂಬುದನ್ನು ನೆನಪಿಸಿಕೊಳ್ಳುವ ಸಂದರ್ಭ ಇದು.

ಭಾರತದ ಇತರೆಲ್ಲ ರಾಜ್ಯಗಳಿಗಿಂತ ಕರ್ನಾಟಕಕ್ಕೆ ಪರಮಾಣು ಶಾಪ ತೀವ್ರವಾಗಿ ತಟ್ಟಿದೆ. ಏಕೆಂದರೆ, ಇಲ್ಲಿ 'ಪರಮಾಣು ಚಕ್ರ'ದ ಎಲ್ಲ ಅಂಗಗಳನ್ನೂ ತೆರೆದಿಡಲಾಗಿದೆ. ಅಂದರೆ, ಯೂರೇನಿಯಂ ಅದಿರಿನ ಗಣಿಗಾರಿಕೆ, ಸಂಸ್ಕರಣ, ಕೈಗಾದಲ್ಲಿ ಅದನ್ನು ಉರಿಸಿ ಶಕ್ತಿ ಉತ್ಪಾದನೆ, ಮೈಸೂರಿನ ರತ್ನಹಳ್ಳಿ ಎಂಬಲ್ಲಿ ಅದರ ಬೂದಿಯ ಸಂವರ್ಧನೆ, ಮತ್ತೆ ಕೈಗಾದಲ್ಲಿ ಅದರ ಬಿಸಿಬೂದಿಯನ್ನು ನೆಲದೊಳಕ್ಕೆ ಹೂತಿಡುವುದು ಹೀಗೆ ನೆಲದಿಂದ ಅಗೆದು ಮತ್ತೆ ನೆಲಕ್ಕೆ ಹೂಳುವವರೆಗಿನ ಎಲ್ಲ ಕ್ರಿಯೆಗಳೂ ನಡೆಯುತ್ತಿವೆ. (ಗಣಿಗಾರಿಕೆ ಈಗ ನಿಂತಿದೆ; ಆದರೆ ಅದರ ತ್ಯಾಜ್ಯಗಳೆಲ್ಲ ಅಲ್ಲಲ್ಲಿ ಹಾಗೇ ಬಿದ್ದಿವೆ.)

ಈ ಒಂದೊಂದು ಕ್ರಿಯೆಯಲ್ಲೂ ಕಣ್ಣಿಗೆ ಕಾಣಿಸದ ವಿಕಿರಣ ವಸ್ತುಗಳು ಹೊರಬಿದ್ದು ಗಾಳಿಗೆ, ನೀರಿಗೆ, ಮಣ್ಣಿಗೆ, ಸಸ್ಯಸಂಕುಲಕ್ಕೆ ಸೇರ್ಪಡೆಯಾಗುತ್ತದೆ. ಆ ಮೂಲಕ ನಮ್ಮ ಶರೀರಕ್ಕೂ.

ಮಹಿಳೆಯರಿಗೆ ಪರಮಾಣು ವಿಕಿರಣ ಅನ್ನೋದು ಬಹುದೊಡ್ಡ ಶಾಪವಾಗಿದೆ. 1985ರಲ್ಲಿ ಫಿನ್‌ಲ್ಯಾಂಡಿನ 5000 ಮಹಿಳೆಯರು, ತಾವು ಇನ್ನೆಂದೂ ಗರ್ಭ ಧರಿಸುವುದಿಲ್ಲ ಎಂದು ಪ್ರತಿಜ್ಞೆ ಕೈಗೊಂಡರು. ವಿಶೇಷವಾಗಿ ಸಮೃದ್ಧ ಪೌಷ್ಟಿಕ ಆಹಾರ ಸಿಗದೆ ನಮ್ಮ ದೇಶದ ಬಡ ಮಹಿಳೆಯರು ಬಲು ಶೀಘ್ರವಾಗಿ ವಿಕಿರಣದ ನೂರೊಂದು ಕಿರುಕುಳಗಳಿಗೆ ತುತ್ತಾಗುತ್ತಾರೆ.

ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ರಷ್ಯದ ಮಾಸ್ಕೊದ ಸಮೀಪ 'ಮುಸ್ಲಿಮೋವಾ' ಎಂಬಲ್ಲಿ, ಟೇಚಾ ನದಿಯ ದಂಡೆಯ ಮೇಲೆ 'ಮಾಯಾಕ್ ಪರಮಾಣು ಸ್ಥಾವರ' ಇದೆ. ಇಲ್ಲಿಂದ ಹೊರಬಿದ್ದ ಅಣು ಕಲ್ಮಷ ಅಲ್ಲಿ ಸುತ್ತಲಿನ 124 ಸಹಸ್ರ ಜನರಿಗೆ ವಿವಿಧ ಬಗೆಯ ಕಾಯಿಲೆಗಳನ್ನು ಉಂಟು ಮಾಡಿದೆ. ನೆನಪಿಡಿ, ಈ ಸ್ಥಾವರ ಚೆರ್ನೊಬಲ್ ಥರಾ ಸ್ಫೋಟ ಆಗಿಲ್ಲ. ಮುಸ್ಲಿಮೋವಾ ಊರಿನ ಅರ್ಧಕ್ಕರ್ಧ ಹೆಂಗಸರು ಬಂಜೆಯರು. ಇನ್ನುಳಿದವರಿಗೆ ಜನಿಸುವ ಪ್ರತಿ ಮೂರು ಮಕ್ಕಳಲ್ಲಿ ಒಂದು ಮಗು ವಿಕಲಾಂಗ. ಜನರು ರೋಗನಿರೋಧಕ ಶಕ್ತಿಯನ್ನೇ ಕಳೆದುಕೊಂಡು ರಕ್ತದ ಕ್ಯಾನ್ಸರ್, ಮೂಳೆ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಗರ್ಭನಾಳದ ಕ್ಯಾನ್ಸರ್‌ನಂಥ ರೋಗಕ್ಕೆ ತುತ್ತಾಗಿದ್ದಾರೆ.

935 ಮಂದಿ 'ವಿಕಿರಣ ಏಯ್ಡ್ಸ್' ಎಂಬ ವಿಚಿತ್ರ ರೋಗಕ್ಕೆ ತುತ್ತಾಗಿದ್ದಾರೆ. ದೂರದ ಮಾತೇಕೆ, ನಮ್ಮಲ್ಲೂ ರಾಜಸ್ಥಾನದ ರಾವತ್‌ಭಾಟಾ ಮತ್ತು ಬಿಹಾರದ ಜಾದುಗುಡ ಎಂಬಲ್ಲಿ ಎಂಥ ಕರಾಳ ಚರಿತ್ರೆಗಳು ಹೂತಿವೆ. ರಾವತ್‌ಭಾಟಾ ಪರಮಾಣು ಸ್ಥಾವರದ ಸುತ್ತಲಿನ ನಾಲ್ಕು ಹಳ್ಳಿಗಳಲ್ಲಿ ವರ್ಷ ವರ್ಷವೂ ಕಾಯಿಲೆಗಳು ಹೆಚ್ಚುತ್ತಿವೆ.

ವಿಕಲಾಂಗ ಶಿಶುಗಳ ಜನನ, ಗರ್ಭಪಾತ, ಪೋಲಿಯೊ, ಕುತ್ತಿಗೆಯ ಮೇಲೆ ಬಾವು, ಸಂಧಿವಾತ ಇತ್ಯಾದಿ. ಸಾಕಷ್ಟು ಪೋಷಕಾಂಶ ಸಿಗದ ಮಹಿಳೆ ಮತ್ತು ಮಕ್ಕಳಲ್ಲಿ ವಿಕಿರಣದಿಂದಾಗಿ ಏನೆಲ್ಲ ಬಗೆಯ ಕಾಯಿಲೆಗಳು ಬರುತ್ತಿವೆ ಎಂದು ಅಲ್ಲಿ ಸಮೀಕ್ಷೆ ನಡೆಸಿದ ವೈದ್ಯ ಡಾ|| ಸಂಘಮಿತ್ರಾ ಗಡೇಕರ್ ದಾಖಲಿಸಿದ್ದಾರೆ.

ಇನ್ನು ಬಿಹಾರದ ಜಾದುಗುಡದ ಬಗ್ಗೆ ಮತ್ತೆ ಹೇಳಬೇಕಿಲ್ಲ. ಇಲ್ಲಿ ಯೂರೇನಿಯಂ ಗಣಿಗಾರಿಕೆ ನಡೆಯುತ್ತಿದೆ. ಸುತ್ತಲಿನ ಗುಡ್ಡಗಾಡು ಜನರ ಬದುಕು ನರಕವಾಗಿದೆ. ಅಲ್ಲೂ ಅಂಗವಿಕಲ ಶಿಶುಗಳ ಜನನ, ಬಂಜೆತನ, ನೂರೊಂದು ರೋಗ ರುಜಿನೆಗಳು.

ಇವನ್ನೆಲ್ಲ ಯಾಕೆ ಹೇಳಬೇಕೆಂದರೆ, ನಮ್ಮಲ್ಲೂ ಕೈಗಾ ಸುತ್ತಮುತ್ತ ಸಾಕಷ್ಟು ಸಂಖ್ಯೆಯ ಗುಡ್ಡಗಾಡು ಜನಾಂಗ ಇದೆ. ಅವರೂ ಆರೋಗ್ಯವಂತರೇನಲ್ಲ. ಎಲ್ಲ ಬಗೆಯ ಪೋಷಕಾಂಶಗಳು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಕೈಗಾ ಈಗ ವಿದ್ಯುತ್ ಉತ್ಪಾದನೆ ಆರಂಭಿಸಿದೆ. ಮುಂದಿನ ವರ್ಷ ಇನ್ನೊಂದು ಘಟಕ ಆರಂಭವಾಗಲಿದೆ. ಮತ್ತೆ ಎರಡು ಹೊಸ ಘಟಕಗಳ ಸ್ಥಾಪನೆಗೆ ಸಿದ್ಧತೆ ನಡೆಸಲಾಗಿದೆ. ಅಲ್ಲೇ ಇಂಧನ ಉರಿಸುತ್ತಾರೆ. ಗಾಳಿಗುಂಟ ಅಗೋಚರ ವಿಕಿರಣ ಮೋಡಗಳು ಸುತ್ತಲಿನ ಪರಿಸರಕ್ಕೆ ಹಬ್ಬಲಿದೆ.

ಅಲ್ಲಿನ ಮುಗ್ಧರಿಗಂತೂ ಏನೂ ಗೊತ್ತಿಲ್ಲ. ನಾವು ಸುಶಿಕ್ಷಿತ ಜನ ಏನು ಮಾಡುತ್ತೇವೆ? . ಬೆಂಗಳೂರಿನ ಕೆಲವು ಮಿತ್ರರು, ಕೈಗಾ ಸುತ್ತಲಿನ ಕೆಲವು ಸಂಘಸಂಸ್ಥೆಗಳ ಜತೆಗೂಡಿ, ಅಲ್ಲಿ ಜನರ ಆರೋಗ್ಯ ಸಮೀಕ್ಷೆ ನಡೆಸಿದ್ದಾರೆ. ಅದು ಕೇವಲ ದಾಖಲೆಗಷ್ಟೆ. ಪರಮಾಣು ಸ್ಥಾವರ ಕೆಲಸ ಆರಂಭಿಸುವ ಮೊದಲು ಅಲ್ಲಿನ ಜನರ ಆರೋಗ್ಯ ಹೀಗ್ಗೀಗಿತ್ತು ಎಂಬುದು ದಾಖಲಾದರೆ, ಮುಂದೆ 25 ವರ್ಷಗಳ ನಂತರ ಏನೇನಾಯಿತು ಎಂಬುದರ ಸಮೀಕ್ಷೆ ಮಾಡಿ, ಆಗ ಪರಮಾಣು ಇಲಾಖೆಯ ಕರಾಳ ಕೆಲಸಗಳನ್ನು ಸಾಕ್ಷಿ ಸಮೇತ ಹೇಳಬಹುದು. ಜಗತ್ತಿನಲ್ಲಿ ಬೇರೆಲ್ಲೂ ಹೀಗೆ 'ಹೊಸ್ತಿಲು ಮಟ್ಟದ ಸಮೀಕ್ಷೆ' ನಡೆದಿರಲಿಲ್ಲ. ರಾವತ್‌ಭಾಟಾದಲ್ಲಿ ವಿಕಲಾಂಗ ಮಕ್ಕಳು ಜನಿಸುತ್ತಿದ್ದಾರೆ ಎಂದರೆ, 'ಅದಕ್ಕೂ ಪರಮಾಣು ಸ್ಥಾವರಕ್ಕೂ ಸಂಬಂಧವೇ ಇಲ್ಲ' ಎಂದು ಇಲಾಖೆಯ ತಜ್ಞರು ಹೇಳುತ್ತಾರೆ. ಕೈಗಾದಲ್ಲಿ ಹಾಗಾಗಬಾರದಲ್ಲ?

ಸಮೀಕ್ಷೆಯೇನೊ ಮುಗಿದಿದೆ. ಆದರೆ, ಅದೇ ಅಂತಿಮ ಕೆಲಸವಲ್ಲ. ನಿಜವಾದ ಕೆಲಸ ಈಗ ಆರಂಭವಾಗಬೇಕು. ಮುಗ್ಧರು, ಅಶಿಕ್ಷಿತರು ಹಾಗೂ ಹೋರಾಟದ ಸಂಘಟನೆ ಮಾಡಿಕೊಳ್ಳಲಾರದ ದುರ್ಬಲರ ನಡುವೆಯೇ ಈ ಸ್ಥಾವರ ಅವಿತಿದೆ. ಅಲ್ಲಿನ ಆಸುಪಾಸಿನ ಪ್ರತಿ ಗರ್ಭಿಣಿಯನ್ನೂ, ಪ್ರತಿ ಪ್ರಸೂತಿಯನ್ನೂ, ಪ್ರತಿ ಮಗುವನ್ನೂ ನಾವು ವಿಶೇಷ ಕಾಳಜಿಯಿಂದ ನೋಡಬೇಕು. ಒಂದಾದರೂ ವಿಲಕ್ಷಣ ಜನನದ ವರದಿ ಬಂದರೆ ಎಲ್ಲ ಒಂದಾಗಿ ದನಿ ಎತ್ತಬೇಕು.

ವರದಿ ಬಂದ ಮೇಲೆ ದನಿ ಎತ್ತುವುದಕ್ಕಿಂತ ಅಂಥ ಘಟನೆ ಸಂಭವಿಸದ ಹಾಗೆ ತಡೆಯುವುದು ಇನ್ನೂ ಉತ್ತಮ. ಅಂದರೆ, ಗ್ರಾಮೀಣ ಮಹಿಳೆಯರಿಗೆ ಸರಕಾರ ವಿಶೇಷ ಸವಲತ್ತು ನೀಡುವಂತೆ ಒತ್ತಾಯಿಸಬೇಕು. ಅದರಲ್ಲೂ ಗರ್ಭಿಣಿಯರಿಗೆ ಆರೋಗ್ಯ ಪರೀಕ್ಷಾ ವ್ಯವಸ್ಥೆ, ಹಾಗೂ ವಿಶೇಷ ಪೋಷಕಾಂಶ ಪೂರೈಕೆಯ ವ್ಯವಸ್ಥೆ ಮಾದರಿಯ ಮಟ್ಟದ್ದಾಗುವಂತೆ ನೋಡಿಕೊಳ್ಳಬೇಕು. ಮಹಿಳಾ ಮತ್ತು ಶಿಶುಕಲ್ಯಾಣ ಇಲಾಖೆಯವರು ಅಲ್ಲಿ ವಿಶೇಷ ಕಣ್ಗಾವಲು ಇಡುವಂತೆ ಒತ್ತಾಯಿಸಬೇಕು. ಸರಕಾರಿ ಯೋಜನೆಗಳ ಪ್ರಕಾರ ನಾಡಿನ ಎಲ್ಲ ಹಳ್ಳಿಯಲ್ಲೂ ಈ ವ್ಯವಸ್ಥೆ ಇರಬೇಕಿತ್ತು. ಆದರೆ ಎಲ್ಲೆಲ್ಲೂ ದುರವಸ್ಥೆಯೇ ಇದೆ. ಕೈಗಾ ಸುತ್ತಮುತ್ತಲಾದರೂ ಈ ಯೋಜನೆಗಳು ಕಟ್ಟುನಿಟ್ಟಾಗಿ ಜಾರಿಗೆ ಬರುವ ಹಾಗೆ ಮಾಡಬಾರದೆ?

ಈ ವ್ಯವಸ್ಥೆಗೆಂದು ಪರಮಾಣು ಇಲಾಖೆ ವಿಶೇಷ ಧನ ಸಹಾಯ ನೀಡುತ್ತದೆಯೆ? ಇಲ್ಲ. ಪರಮಾಣು ಸ್ಫೋಟ ಸಂಭವಿಸಿದರೆ ಮಾತ್ರ, ಜನರ ತುರ್ತು ಚಿಕಿತ್ಸೆಗಾಗಿ ಹಣ ನೀಡುತ್ತದಂತೆ. ಅದೂ ಕೇವಲ ಪರಮಾಣು ಸ್ಥಾವರದ ಸುತ್ತಲಿನ 1.3 ಕಿಲೋಮೀಟರ್ ಸುತ್ತಲಿನವರೆಗೆ ಮಾತ್ರ. (ಈ ವಿಚಿತ್ರ ನಂಬರು ಹ್ಯಾಗೆ ಬಂತು ಗೊತ್ತೆ? ಬ್ರಿಟನ್ನಿನಲ್ಲಿ 1 ಮೈಲು ಸುತ್ತಳತೆ ಎಂಬುದನ್ನು ನಮ್ಮ ತಜ್ಞರು ಎರವಲು ತಂದು ಅದನ್ನೇ ಕಿಲೋಮೀಟರಿಗೆ ಪರಿವರ್ತಿಸಿದ್ದಾರೆ. ಎಂಥ ಸ್ವತಂತ್ರ ಬುದ್ಧಿ!) ಆದರಾಚಿನ ಜನರ ಯೋಗಕ್ಷೇಮವನ್ನು ಕರ್ನಾಟಕ ಸರಕಾರವೇ ನೋಡಿಕೊಳ್ಳಬೇಕಂತೆ. 'ಅದಕ್ಕೆಂದು ಆಗಲೇ ನಾವು ನಾಲ್ಕು ಕೋಟಿ ರೂಪಾಯಿಗಳನ್ನು ಕರ್ನಾಟಕ ಸರಕಾರದ ಖಜಾನೆಗೆ ಜಮಾ ಮಾಡಿದ್ದೇವೆ' ಎಂದು ಕೈಗಾದ ನಿರ್ದೇಶಕರು ಹೇಳಿದ್ದಾರೆ.

ಹಾಗೆ ಸರಕಾರಿ ಖಜಾನೆಯಲ್ಲಿ ಜಮಾ ಇಡುವ ಬದಲು, ಸ್ಥಳೀಯ ಜನರ ಒಂದು ಟ್ರಸ್ಟ್ ಮಾಡಿ ಇಷ್ಟು ಹಣ ಇಟ್ಟು ಅದರ ಬಡ್ಡಿಯಲ್ಲಿ - ಅಂದರೆ ವರ್ಷಕ್ಕೆ ಕನಿಷ್ಠ 40 ಲಕ್ಷ ರೂಪಾಯಿ ಗರ್ಭಿಣಿಯರ ಪೋಷಕಾಂಶ ವೃದ್ಧಿಗೆ, ಹೆರಿಗೆಗೆ,

ಶಿಶುಪಾಲನೆಗೆ ಖರ್ಚು ಮಾಡೋಣ ಎಂದರೆ, ಅದಕ್ಕೆ ಪರಮಾಣು ಇಲಾಖೆ ಒಪ್ಪುತ್ತಿಲ್ಲ. ಅಂಥ ನಿಯಮಾವಳಿ ತಮ್ಮಲ್ಲಿಲ್ಲ ಎನ್ನುತ್ತಾರೆ.

ಕೈಗಾದಿಂದ ಸೂಸಿ ಬರುವ ವಿದ್ಯುತ್ ಶಕ್ತಿಯ ಬೆಳಕು ನಮಗೆಲ್ಲ ಬೇಕು. ಆ ಬೆಳಕಿನಲ್ಲಿ ನಮ್ಮ ಮಕ್ಕಳನ್ನು ಓದಿಸುತ್ತೇವೆ. ಇನ್ನೇನೆಲ್ಲ ಮಾಡುತ್ತೇವೆ. ಆ ಕೈಗಾ ಸ್ಥಾವರದಿಂದಾಗಿ ಕಷ್ಟ ಕೋಟಲೆಯಲ್ಲಿ ಬದುಕಬೇಕಾದ ಮುಗ್ಧ ಜನಾಂಗಕ್ಕೆ ನಮ್ಮ ಸುಶಿಕ್ಷಿತ ಸಮಾಜ ಕೊಡಬಹುದಾದ ಒಂದು ಪುಟ್ಟ ಕಾಣಿಕೆಯೆಂದರೇ ಇದೇ. ಅವರನ್ನು ಸುದೃಢರನ್ನಾಗಿ ಮಾಡಲು ಏನೇನು ಮಾರ್ಗಗಳಿವೆಯೆಂದು ನೋಡೋಣ. ನಿಮ್ಮದೇನಾದರೂ ಸಲಹೆ, ಸಹಕಾರ ಇದ್ದರೆ, ಬೆಂಗಳೂರಿನ 'CANE' ಹೆಸರಿನ ಪುಟ್ಟ ಸಂಘಟನೆಗೆ ತಿಳಿಸಬಹುದು. ಪ್ರತಿ ಗುರುವಾರ ಈ ಸಂಘದ ಸದಸ್ಯರು ಕುಮಾರಪಾರ್ಕ್‌ನ ಗಾಂಧೀ ಭವನದಲ್ಲಿ ಸಂಜೆ ಸಭೆ ಸೇರುತ್ತಾರೆ. ಹೆಚ್ಚಿನ ಮಾಹಿತಿಗೆ ನಂಬರಿಗೆ ಫೋನ್ ಮಾಡಬಹುದು. ಮಿಸ್ ತೃಪ್ತಿ: 3592276

ನಾಗೇಶ ಹೆಗಡೆ
(ಸಹಾಯಕ ಸಂಪಾದಕ, ಪ್ರಜಾವಾಣಿ)



ನೂರಾರು ಜನ ಅಸನೊ ಸೆಂಟೈ ಪಾರ್ಕಿನಲ್ಲಿ ಆಶ್ರಯ ಪಡೆದರೂ ಸ್ವಲ್ಪ ಸಮಯದ ಹಿಂದಷ್ಟೆ ಬೆಂಕಿಯ ಜ್ವಾಲೆಗಳಿಂದ ತಪ್ಪಿಸಿಕೊಂಡು ಪಾರ್ಕಿಗೆ ಬಂದಿದ್ದರು. ಆದರೆ ಉರಿಯುತ್ತಾ ಬರುತ್ತಿದ್ದ ಬೆಂಕಿ ಅವರೆಲ್ಲರನ್ನು ನಿಧಾನವಾಗಿ ನದಿ ತೀರದ ತುದಿಯನ್ನು ತಲುಪುವವರೆಗೂ ದೂಡಿತು.

ನದಿ 100 ಮೀ. ಅಗಲವಿದ್ದರೂ, ಬೆಂಕಿಯ ಜ್ವಾಲೆಗಳು ನದಿಯನ್ನೂ ದಾಟಿ ಪಾರ್ಕಿಗೆ ಹಬ್ಬಿತು. ಅಲ್ಲಿದ್ದ ಪೈನ್ ಮರಗಳಿಗೆಲ್ಲ ಬೆಂಕಿ ಹೊತ್ತಿಕೊಂಡಿತು. ಪಾರ್ಕಿನಲ್ಲಿ ಉಳಿದರೆ ಉರಿದು ಹೋಗುತ್ತಿದ್ದರು ನದಿಗೆ ಧುಮುಕಿದರೆ ಜಲಸಮಾಧಿಯಾಗುತ್ತಿದ್ದರು. ದಿಕ್ಕೆಟ್ಟ ಜನರ ಆಕುಚೀರಾಟಗಳು ನನಗೆ ಕೇಳುತ್ತಿತ್ತು. ಕೆಲವೇ ಕ್ಷಣಗಳಲ್ಲಿ ಅಲ್ಲಿದ್ದ ಜನರೆಲ್ಲ ದಾಳದ ಕಾಯಿಗಳಂತೆ ಆಳವಾದ ನೀರೊಳಗೆ ಬೀಳತೊಡಗಿದರು. ಬಹಳಷ್ಟು ಜನ ಮುಳುಗಿ ಹೋದರು.

-ಮಿಚಿಹಿ ಕೊ ಹಚಿಯ
"ಹಿರೋಶಿಮಿಯಿಂದ"

ಭಾರತದಲ್ಲಿ ಅಣ್ವಸ್ತ್ರ ನಿರ್ಮೂಲನೆ


ನವೆಂಬರ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಸಮಾವೇಶಕ್ಕೆ ಹಿನ್ನೆಲೆಯಾಗಿ ಪ್ರಫುಲ್ ಬಿದ್ವಾಯಿಯವರು ಬರೆದಿರುವ ಲೇಖನವನ್ನು ಮಾನಸ ಓದುಗರಿಗಾಗಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದೇವೆ. ಲೇಖಕರು, ಪತ್ರಕರ್ತರೂ ಆಗಿರುವ ಪ್ರಫುಲ್ ಬಿದ್ವಾಯಿಯವರು ರಾಷ್ಟ್ರೀಯ ಅಂತರರಾಷ್ಟ್ರೀಯ ಅಣ್ವಸ್ತ್ರ ನಿರ್ಮೂಲನಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಬಂದಿದ್ದಾರೆ. ಅಣುಶಕ್ತಿ, ಅಣ್ವಸ್ತ್ರಗಳನ್ನು ಕುರಿತಂತೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ರಾಷ್ಟ್ರೀಯ ದೈನಿಕಗಳಲ್ಲಿ ಲೇಖನಗಳನ್ನು ಬರೆಯುತ್ತಾರೆ.

ಏಕೆ ಬೇಕು?

1998ರ ಮೇ 11 ರಿಂದ 13ರೊಳಗೆ ಭಾರತ ಸಿಡಿಸಿದ ಅಣುಬಾಂಬ್‌ಗಳು, ಅನೈತಿಕ ಹಾಗೂ ರಾಜಕೀಯ ಅವಿವೇಕ. ಎಲ್ಲರೂ ಖಂಡಿಸಬೇಕಾದ ವಿಷಯ. ಅಣುಬಾಂಬ್‌ಗಳು ಸರ್ವನಾಶಕಾರಿ ಹಾಗಾಗಿ ಅವು ಅನೈತಿಕ. ನಾಶ ಪಡಿಸುವುದೆ ಬಾಂಬಿನ ಗುಣ ಯಾರು ಅದನ್ನು ಬಳಸುತ್ತಾರೆಂಬುದರ ಮೇಲೆ ಅವುಗಳ ಗುಣ ನಿರ್ಧರಿತವಾಗುವುದಿಲ್ಲ. ವೈರಿಗಳಾರು ಶತ್ರುಗಳು ಯಾರೆಂಬುದನ್ನು ಲೆಕ್ಕಿಸದೆ ಇನ್ನು ಹುಟ್ಟದೆ ಹೊಟ್ಟೆಯೊಳಗಿರುವ ಭ್ರೂಣವನ್ನು ಬಿಡದೆ ನಿರ್ನಾಮ ಮಾಡುವ ಗುಣ ಬಾಂಬಿನದು. ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಮೂಲಕ ಇಡೀ ಜೀವ ಸಂಕುಲವನ್ನೇ ನಾಶಮಾಡುತ್ತವೆ. ವಿನಾಶಕಾರಿಯಾದ ಇನ್ನಿತರ ಜೈವಿಕ, ರಾಸಾಯನಿಕ ಶಸ್ತ್ರಾಸ್ತ್ರಗಳಿಗಿಂತಲೂ ಅಣುಬಾಂಬ್‌ಗಳು ಅಪಾಯಕಾರಿ.

ಅಣ್ವಸ್ತ್ರಗಳನ್ನು ಕೊನೆಗಾಣಿಸಲೂ ನಡೆಸಬೇಕಾಗಿರುವ ಹೋರಾಟವು ಅತ್ಯಂತ ತುರ್ತಿನದು. ಇದೊಂದು ಕಾಲನ ವಿರುದ್ಧದ ಓಟವಾಗಿದೆ. ಹಿರೋಶಿಮಾ ನಾಗಾಸಾಕಿ ಘಟನೆಗಳ ನಂತರ ಅಣುಬಾಂಬ್ ಪ್ರಯೋಗವಾಗಿಲ್ಲವೆಂಬುದು ನಿಜವಾದರೂ ಇತ್ತೀಚಿನ ಬೆಳವಣಿಗೆಗಳು ಆಘಾತಕಾರಿಯಾಗಿವೆ. ಅಪಾಯದ ಸೂಚನೆ ನೀಡುತ್ತಿವೆ. ಭಾರತ ಪಾಕಿಸ್ತಾನಗಳ ಅಣುಬಾಂಬ್ ಪ್ರಯೋಗ ಉಪಖಂಡದಲ್ಲಿ ಅಪಾಯಕಾರಿ ಸ್ಥಿತಿಯನ್ನುಂಟು ಮಾಡಿದೆ. ಇದರಿಂದಾಗಿ ಜಾಗತೀಕ ಅಣ್ವಸ್ತ್ರ ನಿಷೇಧ ಚಳುವಳಿಗೆ ಪೆಟ್ಟು ಬಿದ್ದಿದೆ. ಅಪಾಯದ ಪರಿಸ್ಥಿತಿಯಲ್ಲಿ, ಶೀಸೆಯಿಂದ ಹೊರಬಂದಿರುವ ನ್ಯೂಕ್ಲಿಯರ್ ಭೂತವನ್ನು ಮತ್ತೆ ಒಳ ಹಾಕಿ ಮುಚ್ಚಲು ಸಾಧ್ಯವಿಲ್ಲ ಎನ್ನುವವರನ್ನು ಕಡೆಗಣಿಸಿ ಶಾಂತಿ, ನ್ಯಾಯ ಸಮಾನತೆ, ಸ್ವಾತಂತ್ರ್ಯ, ಏಳಿಗೆಗಳೆಂಬ ಗುರಿಗೆ ಬದ್ಧರಾಗಿರುವ ಎಲ್ಲರೂ ವಿಶ್ವ ಅಣ್ವಸ್ತ್ರ ನಿರ್ಮೂಲನೆಗೆ ಹೋರಾಡಬೇಕು.

ಭದ್ರತೆಯ ಹೆಸರಿನಲ್ಲಿ ಬಾಂಬ್ ಅನ್ನು ಸಮರ್ಥಿಸಿಕೊಳ್ಳುವ ಕೆಲವೇ ಕೆಲವು ದೇಶಗಳಿಂದಾಗಿ ಶಾಶ್ವತ ಅಣ್ವಸ್ತ್ರ ನಿರ್ಮೂಲನೆ



ಇನ್ನೂ ಸಾಧ್ಯವಾಗಿಲ್ಲ. ನಿಜವಾದ ರಾಷ್ಟ್ರೀಯ ಭದ್ರತೆ ಸಾಧ್ಯವಾಗುವುದೇ ಅಂತರರಾಷ್ಟ್ರೀಯ ಅಣ್ವಸ್ತ್ರ ಮುಕ್ತ ಭದ್ರತೆಯಿಂದಾಗಿ ಭದ್ರತೆಯ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿರುವ ಅಣುಬಾಂಬ್‌ಗಳು ಸುಳ್ಳು, ಅನೈತಿಕ ರಾಷ್ಟ್ರಾಭಿಮಾನವನ್ನು ಬೆಳಸಿ, ಆರ್ಥಿಕ, ರಾಜಕೀಯ, ಸಾಮಾಜಿಕ ದಿವಾಳಿತನಕ್ಕೆ ಕಾರಣವಾಗುತ್ತವೆ. ಭಾರತದಂತಹ ದೇಶದಲ್ಲಿ ಅಣ್ವಸ್ತ್ರಗಳ ತಯಾರಿಕೆ, ನಿರ್ವಹಣೆ ವೆಚ್ಚ ಇತ್ಯಾದಿಗೆ ಸುರಿಯುತ್ತಿರುವ ಹಣದಿಂದಾಗಿ ಜನರ ಮೂಲಭೂತ ಅಗತ್ಯಗಳಿಗಾಗಿ ಮಾಡಬೇಕಾಗಿರುವ ಖರ್ಚಿನ ಮೇಲೆ ಹೊಡೆತ ಬೀಳುತ್ತಿದೆ. ಈ ಅಣ್ವಸ್ತ್ರಗಳ ಯುಗವು ಹೆಚ್ಚುತ್ತಿರುವ ಜಾತೀಯತೆ, ಕೋಮುವಾದ, ಲಿಂಗತಾರತಮ್ಯ, ಬಡತನ, ಅನಕ್ಷರತೆ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ನೀಡುವುದಿಲ್ಲ.

ಅಣ್ವಸ್ತ್ರಯುಗವು ಸ್ವಭಾವತಹ ಗುಪ್ತ ಹಾಗು Elitist ಗುಣಹೊಂದಿದೆ ಅಂತಯೇ ಅದು ಪ್ರಜಾಪ್ರಭುತ್ವ ವಿರೋಧಿ.

ಇದು ನಿತ್ಯ ಜೀವನವನ್ನು ಮಿಲಿಟರೀಕರಣಗೊಳಿಸಿಬಿಡುತ್ತದೆ. ಅಲ್ಲದೆ ಗಂಡಸುತನದ ಆಕ್ರಮಣಶೀಲ ಸಿದ್ಧಾಂತಗಳನ್ನು ಎತ್ತಿಹಿಡಿವ ಮೂಲಕ ಸ್ತ್ರೀವಿರೋಧಿ, ಮಕ್ಕಳ ವಿರೋಧಿ ಮನೋಭಾವನೆ, ಆಚರಣೆಗಳನ್ನು ಜಾರಿಗೆ ತರುತ್ತದೆ. ಬಾಂಬ್‌ನೊಂದಿಗೆ ಬದುಕುವುದು, ಬಾಂಬ್ ಅನ್ನು ಪ್ರೇಮಿಸುವುದು ನಮ್ಮನ್ನು ಒಂದು ದೇಶವಾಗಿ, ನೈತಿಕ ಜೀವಿಗಳಾಗಿ, ಹೀನಾಯಿಸಿ ಕೊಂಡಂತೆ.

ಭಾರತದಲ್ಲಿ ತಯಾರಾಗಿರುವ ಅಣ್ವಸ್ತ್ರಗಳು, ಅಣುಬಾಂಬ್‌ಗಳು ಈಗಿರುವ ನ್ಯೂಕ್ಲಿಯರ್ ವ್ಯವಸ್ಥೆಯಲ್ಲಿ ಸುರಕ್ಷತೆಯೇ ಇಲ್ಲದಿರುವುದು, ಮಾನವ ಹಕ್ಕುಗಳ ಬಗೆಗಿನ ತಾತ್ಸರ, ಸ್ಥಳೀಯ ಪರಿಸರದ ನಾಶ, ಸಾರ್ವಜನಿಕ ಪಾರದರ್ಶಕತೆಯ ಹೆಸರೇ ಇಲ್ಲದಿರುವುದು, ಈಗಾಗಲೆ ಹಲವಾರು ಜನರ ಸಾವಿಗೆ, ನೋವಿಗೆ ಕಾರಣವಾಗಿದೆ. ಈಗಾಗಲೆ ಹಾನಿಗೊಳಗಾಗಿರುವವರಿಗೆ ತಕ್ಷಣವೇ ಪರಿಹಾರ ನೀಡಬೇಕು. ಮುಂದೆ ಯಾರು ಹಾನಿಗೊಳಗಾಗಬಾರದು. ಭಾರತದ ಅಣುಸಂಬಂಧಿ ಚಟುವಟಿಕೆಯ ಮುಸುಕಿನಲ್ಲಿ ನಡೆಸುವ ಮಿಲಿಟರಿ ಅಣ್ವಸ್ತ್ರ ತಯಾರಿಕೆಯನ್ನು ಗುರುತಿಸಿ ವಿರೋಧಿಸಿದ್ದೇ ಎಷ್ಟರ ಮಟ್ಟಿಗೆ ಪಾರದರ್ಶಕತೆ ಇತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ. ಸರ್ಕಾರ ಪಾರದರ್ಶಕತೆ, ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಬದಲು ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಈ ಎಲ್ಲಾ ಕಾರಣಗಳಿಗಾಗಿ ದೇಶಾದ್ಯಂತ ಜಾರಿಯಲ್ಲಿರುವ ಅಣ್ವಸ್ತ್ರ ನಿರ್ಮೂಲನ ಹೋರಾಟಗಳು ಒಂದಾಗಿ ಕೆಲವು ಮೂಲಭೂತ ಬೇಡಿಕೆಗಳಿಗೆ ಸರ್ಕಾರವನ್ನು ಒತ್ತಾಯಿಸಿಬೇಕು. ಆ ಮೂಲಕ ಸದ್ಯದ ಅಣ್ವಸ್ತ್ರೀಕರಣದ ಹಾದಿಯನ್ನು ಬಿಟ್ಟು, ಉತ್ತಮ ಸುರಕ್ಷತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಸ್ಥಾಪಿಸಲು ಕೇಳಬೇಕು.

ಚಳುವಳಿ ಕಟ್ಟುವುದು

1. ರಾಜಕೀಯ ದೃಷ್ಟಿಕೋನಗಳು

ನ್ಯೂಕ್ಲಿಯರ್ ವಿರೋಧಿ ಚಳವಳಿಯ ಜಾಗತಿಕ ಇತಿಹಾಸ, ಅದು ಬೆಳದುಕೊಂಡು ಉಳಿದುಕೊಂಡು ಬಂದಿರುವುದು ಕೆಲವು ವಿಷಯವನ್ನು ಸ್ಪಷ್ಟಪಡಿಸಿದೆ. ಅದೆಂದರೆ ಎಲ್ಲೆಡೆಯೂ ಮೂರು ವಿಧವಾದ ಬಿಕ್ಕಟ್ಟುಗಳನ್ನು ಬದಿಗೊತ್ತಲು ಸಾಧ್ಯವಿಲ್ಲ ಎಂಬುದು. ಅವು ಯಾವುವೆಂದರೆ ಮೊದಲನೆಯದು ಶಸ್ತ್ರಾಸ್ತ್ರಗಳ ನಿಯಂತ್ರಣ ಮತ್ತು ನಿಷೇಧ - ಭಾಗಶಃ ಬೇಡಿಕೆ ಕ್ರಮಗಳು ಮತ್ತು ಸಂಪೂರ್ಣ ಬೇಡಿಕೆ, ಕ್ರಮಗಳ ನಡುವಿನ ಬಿಕ್ಕಟ್ಟು. ಎರಡನೆಯದು ಅಣ್ವಸ್ತ್ರ ಮತ್ತು ಅಣುಶಕ್ತಿಯ ನಡುವಿನ ಬಿಕ್ಕಟ್ಟು ಮೂರನೆಯದು ಅಣ್ವಸ್ತ್ರ ವಿರೋಧಿ ಹೋರಾಟ ಮತ್ತು ಶಾಂತಿಗಾಗಿ ಹೋರಾಟ.

ಈ ಎಲ್ಲಾ ಬಿಕ್ಕಟ್ಟುಗಳನ್ನು ಬದಿಗೊತ್ತುವ ಅಥವಾ ಮುಚ್ಚಿಹಾಕುವ ಪ್ರಯತ್ನ ಮಾಡುವ ಬದಲು ಅವುಗಳನ್ನು ಸೃಜನಾತ್ಮಕವಾಗಿ ಬಳಸಿಕೊಂಡು ಸಂಘಟನಾತ್ಮಕ, ರಾಜಕೀಯ ಶಕ್ತಿಯ ಮೂಲಗಳಾಗಿ ಪರಿವರ್ತಿಸುವ ಪ್ರಯತ್ನಬೇಕು. ನ್ಯೂಕ್ಲಿಯರ್ ಮಿಲಿಟರೀಕರಣವನ್ನು ವಿರೋಧಿಸುವ ಅಣ್ವಸ್ತ್ರ ನಿರ್ಮೂಲನೆ ಮತ್ತು ಶಾಂತಿಯ ಹುಡುಕಾಟವು ಮಿಲಿಟರೀಕರಣ ಕುರಿತ ವಿಷಯಗಳನ್ನು ಪ್ರಸ್ತಾಪಿಸುವುದು ಸಹಜ. ಹಾಗೆಯೇ ನ್ಯೂಕ್ಲಿಯರ್ ಶಾಂತಿಗಾಗಿನ ಹುಡುಕಾಟವು ಪ್ರಸ್ತಾಪಿಸುವ ಶಾಂತಿಯು, ಗಡಿಭದ್ರತೆಯಂತಹ ತಕ್ಷಣದ ಕಾಳಜಿಯಾಚೆಗಿನ ಸಾಮಾಜಿಕ ನ್ಯಾಯ, ಅಭಿವೃದ್ಧಿ, ಸಮಾನತೆ ಮತ್ತಿನ್ನಿತರ ಮಾನವೀಯ ಭದ್ರತೆಯನ್ನು ಒಳಗೊಳ್ಳುತ್ತದೆ. ಇಂತಹ ನೇತ್ಯಾತ್ಮಕ ರೂಪಗಳನ್ನು ಪಡೆದುಕೊಂಡಾಗಲೇ ಶಾಂತಿಯ ವಿಷಯಕ್ಕೆ ಹೆಚ್ಚಿನ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ, ಉಳಿಯುವ ಬಲ ಸಿಗುವುದು.

ಈ ಮೂರೂ ಬಿಕ್ಕಟ್ಟುಗಳ ಜೊತೆಗೆ, ಬಹುಮುಖ್ಯ ಸಂಪನ್ಮೂಲವಾಗುವ ಮತ್ತೊಂದು ಬಿಕ್ಕಟ್ಟೆಂದರೆ ಭಯ! ಅಣ್ವಸ್ತ್ರ ನಿರ್ಮೂಲನ ಚಳುವಳಿಯನ್ನು ಕಟ್ಟಲು ಪ್ರೇರಕಶಕ್ತಿಯಾಗಿ ಕೆಲಸಮಾಡಿ ಇದು ಮಾನವೀಯತೆಯನ್ನು ಉಳಿಸಿಕೊಳ್ಳಬೇಕೆನ್ನುವ ಮೂಲ ಆಶಯವೇ ಆಗಿದೆ. ಇದು ಅಣ್ವಸ್ತ್ರ ನಿರ್ಮೂಲನಾ ಚಳುವಳಿಗೆ ಪ್ರಬಲಶಕ್ತಿಯಾಗುತ್ತದೆ. ಇದಕ್ಕೆ ಸಾಕ್ಷಿ ಎಂದರೆ ಇತಿಹಾಸದಲ್ಲಿನ ಬೃಹತ್ ಪ್ರತಿಭಟನೆಗಳು, ಜನ ಸಂಘಟನೆಗಳು ಆದರೆ ಭಯ ಹೆಚ್ಚು ಕಾಲ ಚಳುವಳಿಯನ್ನು ಹಿಡಿದಿಟ್ಟು ಕೊಳ್ಳಲಾಗಿಲ್ಲ. ಆ ಕ್ಷಣದ ಆತಂಕಗಳು ದೂರವಾದೊಡನೆ ಚಳುವಳಿಯು ಕಸುವನ್ನು ಕಳೆದುಕೊಂಡು ಬಿಡುತ್ತದೆ. ಶಾಂತಿ ಚಳುವಳಿಯನ್ನು ಕಾಯ್ದುಕೊಳ್ಳಬೇಕಾದರೆ ನ್ಯೂಕ್ಲಿಯರ್ ವಿಷಯಕ್ಕಷ್ಟೇ ಸಿಮೀತವಾಗಬಾರದು. ಅಣ್ವಸ್ತ್ರಗಳ ವಿರುದ್ಧ ಹೋರಾಡಬೇಕೆಂದರೆ ಅಣ್ವಸ್ತ್ರದ ವಿರುದ್ಧವಷ್ಟೇ ಹೋರಾಡಿದರೆ ಸಾಲದು. ಶಾಂತಿಗಾಗಿ ಯಶಸ್ವಿಯಾಗಿ ಹೋರಾಡಬೇಕೆಂದರೆ ಶಾಂತಿಯನ್ನು ತಿಕ್ಕಾಟದ ಗೈರುಹಾಜರಿ ಎಂಬಂತಹ ಸಂಕುಚಿತ, ಖಾಲಿ ಮನೋಭಾವನೆಯಾಚೆ ನೋಡಿ ಅದಕ್ಕಾಗಿ ಹೋರಾಡುವುದು. ಇದರರ್ಥ ಅಣ್ವಸ್ತ್ರ ನಿರ್ಮೂಲನದ ಹೋರಾಟದ ಜೊತೆಯಲ್ಲಿಯೇ ಅನ್ಯಾಯಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳಲ್ಲಿ ಸಹ ಭಾಗಿಯಾಗಬೇಕು. ಈ ಎರಡೂ ಹೋರಾಟಗಳ ನಡುವಿನ ಸಂಬಂಧ ಸಂಕೀರ್ಣವಾಗಿರುವುದರಿಂದ ಯಾವುದೇ ತೀವ್ರತರ ನಿಲುವು ತೆಗೆದುಕೊಳ್ಳುವುದು ಸರಿಯಲ್ಲ. ಸಂಪೂರ್ಣ ಅಣ್ವಸ್ತ್ರ ನಿರ್ಮೂಲನೆ ಸಾಧ್ಯವಾಗದ ಹೊರತು ಮಿಲಿಟರೀಕರಣ ಮತ್ತು ಯುದ್ಧ ಮುಕ್ತ ಜಗತ್ತಿನ

ಬಗ್ಗೆ ಯೋಚಿಸುವುದು ಕಷ್ಟ ಸಾಧ್ಯ ಹಾಗೂ ಸರಿಯೂ ಅಲ್ಲ. ಬಡತನ, ಅನ್ಯಾಯ, ಅಸಮಾನತೆಯನ್ನು ತೊಡೆದು ಹಾಕದೆ (ಸಂಪೂರ್ಣವಾಗಿ ಅಲ್ಲದಿದ್ದರೂ) ಅಣ್ವಸ್ತ್ರ ನಿರ್ಮೂಲನೆ ಹೊಂದುವುದು ಸಾಧ್ಯವಿಲ್ಲ. 21ನೆ ಶತಮಾನದೊಳಗೆ ಇತರೇ ಮಾನವ ವಿರೋಧಿ ವಿಷಯಗಳನ್ನು ಸಂಪೂರ್ಣವಾಗಿಯೋ, ಭಾಗಶಃವಾಗಿಯೋ ನಿರ್ಮೂಲನೆ ಮಾಡಲಾಗದೆ ಇರಬಹುದು. ಆದರೆ 21ನೆ ಶತಮಾನದ ಅಂತ್ಯದೊಳಗೆ ನಾವು ಅಣ್ವಸ್ತ್ರಗಳನ್ನು ನಿರ್ಮೂಲನೆ ಮಾಡಬೇಕು.

ಸಂಘಟನೆ

ಮೇಲೆ ತಿಳಿಸಿರುವ ವಿಷಯಗಳ ಹಿನ್ನೆಲೆಯಲ್ಲಿ ಸಂಘಟನೆಯು ರೂಪುಗೊಳ್ಳಬೇಕು. ಜೊತೆಯಲ್ಲಿಯೇ ಭಿನ್ನಾಭಿಪ್ರಾಯಗಳ (ಅಣುಶಕ್ತಿ, ಮಿಲಿಟರೀಕರಣ, ಶಾಂತಿ) ನಡುವೆಯೂ ಹೆಚ್ಚೆಚ್ಚು ಜನರನ್ನು ಭದ್ರವಾಗಿ ಒಗ್ಗೂಡಿಸುವ ಚಳುವಳಿಯ ಚೌಕಟ್ಟು ನಮಗೆ ಬೇಕಾಗಿದೆ. ಆ ರೀತಿಯ ಒಗ್ಗಟ್ಟನ್ನು ಸಾಧಿಸುವುದು ಇನ್ನಿತರ ಯಾವುದೇ ಸ್ಥಳೀಯ, ತಳಮಟ್ಟದ-ಹೋರಾಟಗಳ ಕಸುವನ್ನು ಹಾನಿಗೊಳಿಸಬಾರದು. ಆ ನಿಟ್ಟಿನಲ್ಲಿ ರಾಷ್ಟ್ರೀಯ ಸಮಾವೇಶವು ಚಳುವಳಿಯ ಚೌಕಟ್ಟಿನೆಡೆಗೆ ಪ್ರಮುಖ ಹೆಜ್ಜೆಯಾಗಿದೆ.

ಭಾರತದ ನಿಶ್ಯಸ್ತ್ರೀಕರಣ ಚಳುವಳಿಯು ಅಂತರರಾಷ್ಟ್ರೀಯ ಅಣ್ವಸ್ತ್ರ ನಿರ್ಮೂಲನಾ ಚಳುವಳಿಯೊಂದಿಗೆ ಸಂಪರ್ಕ ಹೊಂದುವುದಲ್ಲದೆ ಅದರ ಭಾಗವಾಗಬೇಕೆಂಬುದನ್ನು ಮನಗಾಣಬೇಕು. ಹಾಗೆಯೇ ವಿಶೇಷ ಪ್ರಯತ್ನಗಳ ಮೂಲಕ ನಮ್ಮ ನೆರೆಹೊರೆಯ ದೇಶಗಳಲ್ಲಿನ ಶಾಂತಿ ಮತ್ತು ನಿಶ್ಯಸ್ತ್ರೀಕರಣ ಬೇಕೆನ್ನುವ ಮನೋಭಾವನೆಗಳೊಂದಿಗೆ ಸಂಪರ್ಕ ಸಾಧಿಸುವ, ಮತ್ತು ಅಣ್ವಸ್ತ್ರ ಮುಕ್ತ ವಿಶ್ವಕ್ಕಾಗಿ ನಡೆಯುತ್ತಿರುವ ಜಾಗತೀಕ ಚರ್ಚೆಗಳು, ಪ್ರಯತ್ನಗಳ ಜೊತೆ ಸೇರಬೇಕು. ಹಾಗೆ ಮಾಡುವ ಮೂಲಕ ವಿಶ್ವಶಾಂತಿಗೆ ಧಕ್ಕೆಯಾಗಿರುವ ಪಂಚ 'ಮಹಾ' ಅಣ್ವಸ್ತ್ರ ರಾಷ್ಟ್ರಗಳನ್ನು ಪ್ರಶ್ನಿಸಲು ಸಾಧ್ಯ. ಈ ನಿಟ್ಟಿನಲ್ಲಿ ಸಂಪೂರ್ಣ ಅಣ್ವಸ್ತ್ರ ನಿಷೇಧ ಮತ್ತು ನಿಶ್ಯಸ್ತ್ರೀಕರಣದ ಹೋರಾಟಗಳನ್ನು ಕೇವಲ ಶಸ್ತ್ರಾಸ್ತ್ರ ಹೆಚ್ಚಳವನ್ನು ಕಡಿಮೆಗೊಳಿಸುವುದಕ್ಕಷ್ಟೆ ಬಿಟ್ಟುಕೊಡದರಂತೆ ನೋಡಿಕೊಳ್ಳುವ ಎಚ್ಚರವಿರಬೇಕು.

ಭಾರತದ ಸಂದರ್ಭಕ್ಕೆ ವಿಶೇಷವಾಗಿರುವ ಮೂರು ಇನ್ನಿತರ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳುವ ಅಗತ್ಯವಿದೆ. ಮೊದಲನೆಯದಾಗಿ ಚಳುವಳಿಯನ್ನು ಕಟ್ಟಬೇಕೆನ್ನುವ ಹಲವಾರು ವ್ಯಕ್ತಿಗಳು ಮತ್ತು ಪ್ರಮುಖ ನಾಗರೀಕರಲ್ಲದೆ ಇನ್ನೆರೆಡು ರೀತಿಯ ನ್ಯೂಕ್ಲಿಯರ್ ವಿರೋಧಿ ಗುಂಪುಗಳು (ವಿವಿಧ ಗುಂಪುಗಳ ಒಕ್ಕೂಟಗಳು ಸೇರಿ ನಂತೆ) ದೇಶಾದ್ಯಂತ ಇವೆ. ಅವುಗಳಲ್ಲಿ ಕೆಲವು ಮಾತ್ರ ಅಣ್ವಸ್ತ್ರ ನಿರ್ಮೂಲನೆಗಷ್ಟೆ ಮುಖ್ಯವಾದ ಒತ್ತುಕೊಟ್ಟು ಕೆಲಸ ಮಾಡುತ್ತಿವೆ. ಇನ್ನು ಕೆಲವು ಅಣುಶಕ್ತಿಗೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತವೆ. ಇನ್ನು ಅನೇಕ ಅಣ್ವಸ್ತ್ರ ವಿರೋಧಿ ಗುಂಪುಗಳು ವಿವಿಧ ವಿಷಯಗಳನ್ನು ಕುರಿತು ಕೆಲಸ ಮಾಡುತ್ತಿದ್ದು ಅವುಗಳ ಆಸಕ್ತಿ, ಚಟುವಟಿಕೆಗಳು, ಅಣ್ವಸ್ತ್ರ, ಅಣುಶಕ್ತಿ ವಿಷಯದಿಂದ ಬೇರೆಯಾಗಿಯೇ ಇರುವಂತಹವುಗಳು. ಇದು ವಿಜ್ಞಾನ ಗುಂಪುಗಳಿಂದ ಹಿಡಿದು, ಅಭಿವೃದ್ಧಿ ಕಾರ್ಯಕ್ರಮದಲ್ಲಿ ತೊಡಗಿಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳಿಂದ ಹಿಡಿದು ದೊಡ್ಡ ಚಳುವಳಿಗಳ ರಚನೆಗಳನ್ನು ಒಳಗೊಳ್ಳುತ್ತದೆ. ಇವು ದೇಶದ ವಿವಿದೆಡೆಯ ಜನರಿಗೆ ಆಗುತ್ತಿರುವ ನಿರ್ದಿಷ್ಟ ಅನ್ಯಾಯಗಳ ವಿರುದ್ಧ ಹೋರಾಟ ನಡೆಸುತ್ತಿವೆ. ಈ ಗುಂಪುಗಳು ಪೋಕ್ರಾನ್ 2ರ ನಂತರ ಅಣ್ವಸ್ತ್ರ/ಅಣುಶಕ್ತಿಗೆ ಸಂಬಂಧಿಸಿದ ವಿಷಯಗಳನ್ನು ತೆಗೆದುಕೊಳ್ಳುವುದು ಮುಖ್ಯವೆಂದು ಪರಿಗಣಿಸಿವೆ.

ಎರಡನೆಯದಾಗಿ ಚಳುವಳಿಯು ಪೋಕ್ರಾನ್ 2ನ್ನು ವಿರೋಧಿಸಿದ ಬುದ್ಧಿಜೀವಿಗಳು, ರಾಜಕೀಯ ಪಕ್ಷಗಳ ಅನುಯಾಯಿಗಳು, ನಾಯಕರುಗಳು ಇವರುಗಳೊಂದಿಗೆ ಸಂವಾದ ಬೆಳಸಬೇಕು. ಈ ಸಂವಾದವು ರಾಷ್ಟ್ರೀಯ, ವಲಯ ಮತ್ತು ಜಾಗತಿಕ ಮಟ್ಟದಲ್ಲಿನ ಅಣ್ವಸ್ತ್ರ ನಿರ್ಮೂಲನ ಕಾರ್ಯಕ್ರಮವನ್ನು ಮತ್ತು ಅಣ್ವಸ್ತ್ರ ಪರೀಕ್ಷೆ ಮತ್ತು ಶಸ್ತ್ರೀಕರಣವನ್ನು ನಿಲ್ಲಿಸುವ ಅಗತ್ಯದ ಮೇಲೆ ಕೇಂದ್ರಿಕೃತವಾಗಿರಬೇಕು. ಎಲ್ಲಾ ಭಿನ್ನಾಭಿಪ್ರಾಯಗಳನ್ನು ಸೌಹಾರ್ದಯುತವಾಗಿ ಚರ್ಚಿಸುವ ವಾತಾವರಣವನ್ನು ಚಳುವಳಿಯು ನಿರಂತರವಾಗಿ ಪ್ರೋತ್ಸಾಹಿಸಬೇಕು ಜೊತೆಗೆ ಎಲ್ಲವನ್ನು ಒಟ್ಟಿಗೆ ತರುವ ಸಾಮಾನ್ಯ ವೇದಿಕೆಯಾಗಿಯೂ ಉಳಿಯಬೇಕು.

ಮೂರನೆಯದಾಗಿ, ಒಂದು ದೊಡ್ಡ ಚಳುವಳಿಯನ್ನು ಅಣ್ವಸ್ತ್ರ ವಿಷಯವನ್ನೇ ಆಧರಿಸಿ ಕಟ್ಟಬೇಕೆಂದರೆ, ಅದಕ್ಕೆ ಅಗತ್ಯವಾದ ನಿಯಮವೊಂದಿರಬೇಕು. ಆ ನಿಯಮ ಏನೆಂದರೆ ಜನಸಮೂಹದ ಮೇಲೆ ನಡೆಯಲಿರುವ ನ್ಯೂಕ್ಲಿಯರ್ ದಾಳಿಯ ಅಪಾಯದ ಅರಿವಿರುವುದು. ಅಂತಹ ಸ್ಥಿತಿ ಸಧ್ಯದಲ್ಲಿಲ್ಲ ಹಾಗೂ ಸುಲಭವಾಗಿ ಘಟಿಸುವುದೂ ಇಲ್ಲ. ತುರ್ತಿನ ನಿಜಸ್ಥಿತಿ ಮತ್ತು ಅಣ್ವಸ್ತ್ರಗಳ ವಿಷಯವನ್ನು ನೋಡುವುದರ ಪ್ರಾಮುಖ್ಯತೆ ಮತ್ತು ವಿಷಯ ಕುರಿತು ಇರುವ ನಿಜವಾದ ಗ್ರಹಿಕೆ ಮತ್ತು ಅದರ ಪ್ರಾಮುಖ್ಯತೆ, ತನ್ನೊಳಗೆ ಹಾಗೂ ಇತರ ಅನ್ಯಾಯ ಅಪಾಯದ ಜ್ವಲಂತ ವಿಷಯಗಳಿಗೆ ಸಂಬಂಧಪಟ್ಟಂತೆ. ನ್ಯೂಕ್ಲಿಯರ್ ಅಪಾಯ ಕುರಿತಂತೆ ಹೆಚ್ಚಿನ ಅರಿವು ಮೂಡಿಸುವುದು,

ಅಣ್ವಸ್ತ್ರಗಳನ್ನು ವಿರೋಧಿಸಲು ಸಾರ್ವಜನಿಕರ ದೃಢನಿಶ್ಚಯತೆಯನ್ನು ಹೆಚ್ಚಿಸುವುದು ನಮ್ಮ ಕರ್ತವ್ಯವಾಗಿದೆ.

ಅಣ್ವಸ್ತ್ರ ವಿಷಯ ಕುರಿತು ಕನಿಷ್ಟ ರಾಜಕೀಯ ಒಪ್ಪಂದಕ್ಕೆ ಒತ್ತಾಯಿಸುವುದು ಒಗ್ಗಟ್ಟಿಗೆ ವಿಶಾಲವಾದ ಆದರೆ ದೃಢವಾದ ತಳಹದಿಯನ್ನು ನೀಡುತ್ತದೆ. ಇದು ಪ್ರಾರಂಭಕ್ಕೆ ಅಂದರೆ ರಾಷ್ಟ್ರೀಯ ಸಮಾವೇಶದಲ್ಲಿ ಅಣ್ವಸ್ತ್ರ ಮತ್ತು ಸಂಬಂಧಪಟ್ಟ ಸುರಕ್ಷತೆ ಮತ್ತು ಪಾರದರ್ಶಕತೆ ವಿಷಯವನ್ನಾಧಿರಿಸಿರಬೇಕು. ಒಂದು ಒಪ್ಪಿತ ಬೇಡಿಕೆಗಳ ರೂಪ ಪಡೆದುಕೊಳ್ಳಬೇಕು. ಭಾರತ ಸರ್ಕಾರವನ್ನುದ್ದೇಶಿಸಲ್ಪಟ್ಟ ಆ ಬೇಡಿಕೆಗಳ ಸುತ್ತಲೇ ಜನರನ್ನು ಒಗ್ಗೂಡಿಸುವುದು ಸಾಧ್ಯವಾಗುತ್ತದೆ.


ಅಣ್ವಸ್ತ್ರಕ್ಕೆ ಸಂಬಂಧಿಸಿದ ಇತರ ವಿಷಯಗಳಾದ ಅಣುಶಕ್ತಿ, ಮಿಲಿಟರೀಕರಣಕ್ಕೆ ತಡೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳನ್ನು ಕುರಿತ ಚರ್ಚೆಗಳನ್ನು ನಿಯಮಬದ್ಧಗೊಳಿಸಲು ಒತ್ತಾಯಿಸಬೇಕು. ಇದರ ಉದ್ದೇಶ ನಾವೆಷ್ಟು ಪ್ರಜಾಸತ್ಯಾತ್ಮಕವಾಗಿದ್ದೇವೆಂದು ತೋರಿಸಿಕೊಳ್ಳುವುದಕ್ಕಲ್ಲ ಬದಲಿಗೆ ವಿಷಯ ಕುರಿತು ಆಳವಾಗಿ ಅರ್ಥೈಸುವ ಪ್ರಕ್ರಿಯೆಯನ್ನು ಶುರು ಮಾಡಲು, ಒಪ್ಪಂದಗಳ ವ್ಯಾಪ್ತಿಯನ್ನು ವಿಶಾಲಗೊಳಿಸಲು ಮತ್ತು ಹಲವಾರು ವಿಧದಲ್ಲಿ ಹೋರಾಟಗಳ, ಜನರ ಒಗ್ಗಟ್ಟಿನ ನಡುವೆ ಸಂಪರ್ಕ ಕಲ್ಪಿಸುವುದಾಗಿದೆ.

ರಾಷ್ಟ್ರೀಯ ಸಮಾವೇಶದಲ್ಲಿ ವ್ಯವಸ್ಥಿತವಾದ ಚರ್ಚೆ ನಡೆಸುವ ಮೂಲಕ ನಮಗಿರುವ ಅನೇಕ ಸಂಪನ್ಮೂಲ, ಸಾಮರ್ಥ್ಯಗಳ ಸ್ಪಷ್ಟ ಚಿತ್ರಣ ಸಿಗಬಹುದು. ಇದು ಸ್ಥಳೀಯ ಮಟ್ಟದಲ್ಲಿ ಹೆಚ್ಚಿನ ಚಟುವಟಿಕೆಗೆ ಕಾರಣವಾಗುತ್ತದೆ. ಪರಸ್ಪರರ ಕ್ರಮಗಳಿಗೆ ಪೂರಕವಾಗುವ ಹಾಗೂ ಪರಸ್ಪರ ಅನುಭವಗಳಿಂದ ಹೆಚ್ಚು ತಿಳುವಳಿಕೆ ಪಡೆಯಲು ಸಾಧ್ಯವಾಗುತ್ತದೆ.

ನಮ್ಮ ಸಾಮಾನ್ಯ ಕಾರ್ಯಕ್ರಮಗಳು

ಭಾರತದ ಅಣ್ವಸ್ತ್ರಗಳ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ಕೇಳುವುದು ಸಧ್ಯಕ್ಕೆ ಸುಲಭ, ವಿವಾದರಹಿತ ಮತ್ತು ಎಲ್ಲರನ್ನು ಒಗ್ಗೂಡಿಸುವ ಬೇಡಿಕೆಯಾಗಿದೆ. ಈ ಬೇಡಿಕೆ ಒಳಗೊಂಡಿರುವ ಕೆಲವು ಅಂಶಗಳೆಂದರೆ :

* ಅಣ್ವಸ್ತ್ರಗಳನ್ನು ಒಟ್ಟು ಮಾಡಬಾರದು.
* ಕ್ಷಿಪಣಿಗಳನ್ನು ಅಣ್ವಸ್ತ್ರ ಸಿಡಿಸಲು ಬಳಸಬಾರದು.
* ಅಣ್ವಸ್ತ್ರಗಳ ಸ್ಥಾಪನೆ, ಪ್ರಸರಣೆಯನ್ನು ನಿಲ್ಲಿಸಬೇಕು.
* ಅಣ್ವಸ್ತ್ರಗಳನ್ನು ಒಯ್ಯುವಂತಹ ವಿಮಾನಗಳು ಬೇಡ.
* ಸ್ವಯಂಚಾಲಿತ ಕ್ಷಿಪಣಿಗಳ (Ballistic Missile) ಪರೀಕ್ಷೆಗಳು ನಿಲ್ಲಬೇಕು.



* ಸ್ಫೋಟಕ ಪರೀಕ್ಷೆಗಳು ನಿಲ್ಲಬೇಕು.
* ಉಪ-ದೋಷ ಪರೀಕ್ಷಕ ಪರೀಕ್ಷೆ ನಿಲ್ಲಬೇಕು.
* ಶಸ್ತ್ರಾಸ್ತ್ರಗಳ (ಮಿಲಿಟರಿ ಅಥವಾ ನಾಗರಿಕ ಉದ್ದೇಶವಿರುವ) ತಯಾರಿಕೆ ನಿಲ್ಲಬೇಕು.
* ಟ್ರೈಟಿಯಂ (ಹೈಡ್ರೋಜನ್ ಬಾಂಬ್‌ನಲಿ ಬಳಸುವ ರಾಸಾಯನಿಕ) ಉತ್ಪಾದನೆ, ಅಥವಾ ಶೇಖರಣೆ ನಿಲ್ಲಬೇಕು.
* ಸ್ಥಗಿತಗೊಳಿಸಿರುವುದರ ಸತ್ಯತೆ, ಸಫಲತೆಯನ್ನು ಜನರಿಗೆ ಮನದಟ್ಟು ಮಾಡುವ ಹೊಣೆ.
* ಅಂತರಾಷ್ಟ್ರೀಯ ಮಟ್ಟದ ಅತ್ಯುನ್ನತ ಸುರಕ್ಷಾ ಕ್ರಮಗಳನ್ನು ಶಕ್ತಿ ಉತ್ಪಾದನೆಯ ಎಲ್ಲಾ ಅಂಶಗಳಲ್ಲೂ ಜಾರಿಗೊಳಿಸಿರುವುದನ್ನು ಅಣುಶಕ್ತಿ ವಿಭಾಗವು ದೃಢಪಡಿಸಬೇಕು.
* ಸಂಪೂರ್ಣ ಪಾರದರ್ಶಕತೆ ಮತ್ತು ಅಣುಶಕ್ತಿ ವಿಭಾಗದ ಕಾರ್ಯನಿರ್ವಹಣೆಯನ್ನು ತಪಾಸಣೆ ಮಾಡುವ ಸ್ವತಂತ್ರ್ಯ ವ್ಯವಸ್ಥೆ ಮತ್ತು ಸಂಪೂರ್ಣ ಸಾರ್ವಜನಿಕ ಹೊಣೆಗಾರಿಕೆ ಇರಬೇಕು.
* ಜನರ ಆರೋಗ್ಯ ಮತ್ತವರ ಪರಿಸರದ ಮೇಲಾಗಿರುವ ಹಾನಿಗೆ ಸೂಕ್ತ ಪರಿಹಾರ, ಸುಧಾರಣೆಗಳನ್ನು ನೀಡಬೇಕು.

ಪೋಕ್ರಾನ್ 2ರ ನಂತರದ ಪರಿಣಾಮಗಳು

2ನೇ ಬಾರಿ ಪೋಕ್ರಾನ್‌ನಲ್ಲಿ ಅಣುಬಾಂಬ್ ಪರೀಕ್ಷೆ ನಡೆಸಿ ಎರಡು ವರ್ಷಗಳಾದವು. ಅನೇಕ ಸರ್ಕಾರಿ ಅಧಿಕಾರಿಗಳು, ಭಾರತ ಇನ್ನು ಮುಂದೆ ಅಣ್ವಸ್ತ್ರಗಳ ನಿರ್ಮಾಣ, ಅಳವಡಿಕೆಯಲ್ಲಿ ತೊಡಗಿಸಿಕೊಳ್ಳುವುದೆಂದು ಹೇಳಿಕೆ ನೀಡಿದ್ದಾರೆ. ಮಾಮೂಲಿನಂತೆ ರಾಷ್ಟ್ರದ ಭದ್ರತೆಗಾಗಿ ಎಂಬ ಸಮರ್ಥನೆ ನೀಡಿದ್ದಾರೆ. ಅಂತೆಯೇ 1999 ಆಗಸ್ಟ್‌ನಲ್ಲಿ ರಾಷ್ಟ್ರೀಯ ಭದ್ರತಾ ಸಲಹಾ ಸಮಿತಿ (National Security Advisory Board)ಯು ನ್ಯೂಕ್ಲಿಯರ್ ಕರಡನ್ನು (Draft nuclear Doctrine) ಪ್ರಕಟಿಸಿದ್ದು ಆಶ್ಚರ್ಯದ ವಿಷಯವೇನಲ್ಲ. (ನ್ಯೂಕ್ಲಿಯರ್ ಕರಡನ್ನು ಕುರಿತಂತೆ ಮಾನಸದ ಜನವರಿ ಸಂಚಿಕೆಯಲ್ಲಿ ವಿವರವಾಗಿ ಪ್ರಕಟಿಸಿದ್ದೇವೆ) DNDಯ ಮುಖ್ಯ ಉದ್ದೇಶವೇ ಅಣ್ವಸ್ತ್ರಗಳನ್ನು ಸಮರ್ಥಿಸಿಕೊಳ್ಳುವುದಾಗಿದೆ. ಕನಿಷ್ಟ ರೂಪದ್ದು ಎಂದು ಹೇಳುತ್ತಲೆ ಪ್ರಬಲ ಅಣ್ವಸ್ತ್ರ ಪಡೆ (ಭೂಮಿ, ಗಾಳಿ, ಸಮುದ್ರ ಮೂರರಲ್ಲೂ ಪ್ರಯೋಗಿಸುವಂತಹ)ಯನ್ನು ನಿರ್ಮಿಸುವುದು ಕರಡಿನ ಉದ್ದೇಶ. ಕನಿಷ್ಟ ಬೆದರಿಕೆಯ ತಂತ್ರವಾಗಿ ಅಣ್ವಸ್ತ್ರಗಳನ್ನು ನಿರ್ಮಿಸುವ ಬಗ್ಗೆ ಕೆಲ ವಿಷಯಗಳನ್ನು ಗಮನಿಸಬೇಕಾಗತ್ತದೆ. ಈ ಬೆದರಿಕೆ ತಂತ್ರವನ್ನು ಭಾರತ ಪಾಕಿಸ್ತಾನಗಳ ವಿಶ್ಲೇಷಕರುಗಳು ಎತ್ತಿಹಿಡಿಯುತ್ತಾರೆ. ಇಲ್ಲಿ ಬೆದರಿಕೆ ತಂತ್ರವೆಂದರೆ ಒಂದು ರಾಷ್ಟ್ರವು ಬೃಹತ್ ಅಣ್ವಸ್ತ್ರ ಪಡೆಯನ್ನು ಹೊಂದಿರುವಾಗ ಮತ್ತೊಂದು ರಾಷ್ಟ್ರವು ಪ್ರತ್ಯಾಕ್ರಮಣದ ಭಯದಿಂದ ಆಕ್ರಮಣ ಮಾಡಲು ಬರುವುದಿಲ್ಲ ಎಂಬುದಾಗಿದೆ. ಈ ತಂತ್ರ ದೋಷ ಪೂರಿತವಾಗಿದೆ. ಈ ತಂತ್ರವು ಮೊದಲಿಗೆ ಆಜ್ಞೆ, ಹತೋಟಿ, ಇಂಟಲಿಜೆನ್ಸಿ, ಸಂವಹನದಲ್ಲಿ ತಪ್ಪಾಗಿ ಉಂಟಾಗುವ ಅನಾಹುತಗಳನ್ನು ಪರಿಗಣಿಸುವುದಿಲ್ಲ. ಎರಡನೆಯದಾಗಿ ಅಣ್ವಸ್ತ್ರ ಸಾಮರ್ಥ್ಯ ಪಡೆಯಬೇಕೆನ್ನುವ ಪೈಪೋಟಿಯನ್ನು ಗಮನಿಸುವುದಿಲ್ಲ. 1977 ಮತ್ತು 1984ರಲ್ಲಿ ಅಮೆರಿಕದಲ್ಲಿ ಮುನ್ಸೂಚನೆ ನೀಡುವ ವ್ಯವಸ್ಥೆಯು ಆಕ್ರಮಣವಾಗಬಹುದೆಂಬ 20000 ಸುಳ್ಳು ಎಚ್ಚರಿಕೆಗಳನ್ನು ನೀಡಿತು. ಆ ಎಚ್ಚರಿಕೆಗಳಲ್ಲಿ 1000ವನ್ನು ಗಂಭೀರವಾಗಿ ಪರಿಗಣಿಸಿ ಅಣುಬಾಂಬ್‌ಗಳನ್ನು ಸಿಡಿಸಿಲು ಸಿದ್ಧಗೊಳಿಸಲಾಗಿತ್ತು. ಈ ಹಿನ್ನಲೆಯಲ್ಲಿ ನೋಡಿದಾಗ, ಭಾರತ DNDಯಲ್ಲಿ ತಾನು ಮೊದಲು ಪ್ರಯೋಗಿಸುವುದಿಲ್ಲವೆಂದು ಹೇಳಿರುವುದಕ್ಕೆ ಅರ್ಥವಿಲ್ಲ.

DNDಯಲ್ಲಿ ತಿಳಿಸಿರುವ 400ಕ್ಕಿಂತ ಹೆಚ್ಚಿನ ಅಣ್ವಸ್ತ್ರಗಳ ನಿರ್ಮಾಣ ಅತ್ಯಂತ ದುಬಾರಿಯಾಗಲಿದೆ. 70000 ರಿಂದ 700000 ಕೋಟಿಯಾಗಬಹುದೆಂದು NSAB ಸದಸ್ಯರೊಬ್ಬರು ಅಂದಾಜು ಮಾಡಿದ್ದಾರೆ. ಈ ಬೃಹತ್ ಮೊತ್ತದಿಂದ ಹೊಡೆತ ಬೀಳುವುದು ಮೂಲಭೂತ ಮಾನವ ಅಗತ್ಯಗಳ ಮೇಲೆ. ಕಳೆದೆರೆಡು ವರ್ಷಗಳಿಂದ ಬಡ್ಜೆಟ್‌ನಲ್ಲಿ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಇಲಾಖೆ (Defence research & development organisation) ಅಣುಶಕ್ತಿ ಇಲಾಖೆ (Dept. of Atomicenergy) ಬಾಹ್ಯಾಕಾಶ ಇಲಾಖೆ (Dept. of Space)ಗಳಿಗೆ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಈ ವರ್ಷದ ರಕ್ಷಣಾ ಬಡ್ಜೆಟ್ ಅನ್ನು 13000 ಕೋಟಿಗೆ ಏರಿಸಲಾಗಿದೆ. ಈ ರೀತಿಯ ರಕ್ಷಣಾ ಬಡ್ಜೆಟ್‌ನ ಹೆಚ್ಚಳದ ಜೊತೆಗೆ ಆರ್ಥಿಕ ಉದಾರೀಕರಣದಿಂದಾಗಿ ದೇಶವು ದಟ್ಟದಾರಿದ್ರ್ಯದ ಸ್ಥಿತಿ ತಲುಪುವುದು.

DND ಅಲ್ಲದೆ ಕೇಂದ್ರ ಸರ್ಕಾರವು ಬೃಹತ್ ಅಣ್ವಸ್ತ್ರ ಕಾರ್ಯಕ್ರಮಕ್ಕೆ ಸಜ್ಜಾಗುತ್ತಿರುವುದು ಕೆಲ ವಿಷಯಗಳನ್ನು ಗಮನಿಸಿದಾಗ ತಿಳಿಯುತ್ತದೆ. ಉದಾಹರಣೆಗೆ ಬಾಬಾ ಅಣುಶಕ್ತಿ ಕೇಂದ್ರ ಮತ್ತು ದೇಶದ ಇತರೆ ಅಣ್ವಸ್ತ್ರ ಮತ್ತು ಅಣುಶಕ್ತಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಸುರಕ್ಷಾ ಕ್ರಮಗಳನ್ನು ನೋಡಿಕೊಳ್ಳುವ ಅಧಿಕಾರವನ್ನು Atomic energy regulatory Board ಹೊಂದಿತ್ತು. ಆ ಅಧಿಕಾರವನ್ನು ಅಣುಶಕ್ತಿ ಇಲಾಖೆಯು ಹಿಂತೆಗೆದುಕೊಂಡಿದೆ. ಇದಕ್ಕೆ ನೀಡಿರುವ ಕಾರಣ 'ರಾಷ್ಟ್ರೀಯ ಭದ್ರತೆ.' AERBಯನ್ನು 1983ರಲ್ಲಿ ಸಂವಿಧಾನದ ಆದೇಶಕ್ಕನುಗುಣವಾಗಿ ಸ್ಥಾಪಿಸಲಾಗಿತ್ತು. ದೇಶದಲ್ಲಿ ಅಣುಸ್ಥಾವರಗಳ ನಿಯಂತ್ರಣ ಮತ್ತು ಸುರಕ್ಷಿತ ಕಾರ್ಯ ನಿರ್ವಹಣೆ ಅಧಿಕಾರವನ್ನು AERBಗೆ ನೀಡಲಾಗಿದೆ. AERBಯ ಹಿಂದಿನ ಮುಖ್ಯಸ್ಥ ಎ. ಗೋಪಾಲಕೃಷ್ಣನ್ ಅವರು ಕಳೆದ ವರ್ಷ ಮುಖ್ಯ ಮಾಹಿತಿಯೊಂದನ್ನು ಬಹಿರಂಗ ಗೊಳಿಸಿದರು. 1995ರಲ್ಲಿ AERBಯು ಪಟ್ಟಿಯೊಂದನ್ನು ಸಿದ್ಧಪಡಿಸಿ ಅದರಲ್ಲಿ ಅಣುಸ್ಥಾವರ ಸ್ಥಾಪನೆಗೆ ಸಂಬಂಧಿಸಿದ ಸುಮಾರು 100 ನ್ಯೂನತೆಗಳನ್ನು ತಿಳಿಸಲಾಗಿತ್ತು. ಅವುಗಳಲ್ಲಿ ಕೆಲವು ಯೂರೇನಿಯಂ ಪರಿಷ್ಕರಣ ಘಟಕಗಳು, ಹಳೆಯ ಅಣುಸ್ಥಾವರಗಳಲ್ಲಿರುವ ಸುರಕ್ಷತೆಯ ಮಟ್ಟವು ಎಷ್ಟು ಕೆಳಮಟ್ಟದ್ದೆಂದರೆ ಜಪಾನಿನ ತೊಕೈಮುರಾ ಯರೇನಿಯಂ

ಸ್ಥಾವರದಲ್ಲಿ ಆದಂತಹ ಗಂಭೀರ ಅಪಘಾತಗಳು ಆಗಬಹುದೆಂದು ಗೋಪಾಲಕೃಷ್ಣನ್ ಹೇಳಿದ್ದಾರೆ. ಅವರ ಪ್ರಕಾರ ಅಣುಶಕ್ತಿ ಇಲಾಖೆಯ ಕಾರ್ಯ ಚಟುವಟಿಕೆಗಳು ಅತ್ಯಂತ ಗೌಪ್ಯವಾಗಿ ನಡೆಯುವುದು ಮತ್ತು AERB ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಇದ್ದ ಅಡ್ಡಿಯು ಈ ಸ್ಥಿತಿಗೆ ಕಾರಣವೆಂದಿದ್ದಾರೆ. ಯಾವುದೇ ಘಟನೆ ಅಥವಾ ಮಾಹಿತಿಯನ್ನು Official secret actನಡಿ ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ಮುಚ್ಚಿ ಹಾಕುವ ಅಧಿಕಾರ ಉಳ್ಳ ಅಣುಶಕ್ತಿ ಇಲಾಖೆಯಡಿ AERB ಕೆಲಸ ಮಾಡುತ್ತದೆ. ನಾಗರೀಕ ಹಕ್ಕುಗಳ ಒಕ್ಕೂಟವು ಒತ್ತಾಯ ಮಾಡಿದರೂ ಸಹ AERBಯ ವರದಿಯನ್ನು ಅಣುಶಕ್ತಿ ಇಲಾಖೆ ತಳ್ಳಿಹಾಕಿದೆ. ವರದಿಯು ನ್ಯೂಕ್ಲಿಯರ್ ರಿಯಾಕ್ಟರು* ಗಳಲ್ಲಿನ ಸುರಕ್ಷತೆಗಾಗಿ ಅನೇಕ ಸಲಹೆ, ಬದಲಾವಣೆಗಳನ್ನು ಸೂಚಿಸಿತ್ತು. ಅಣ್ವಸ್ತ್ರಗಳ ಅಭಿವೃದ್ಧಿಗೆ AERB ತೊಡಕಾಗುವುದೆಂದು ಅಣುಶಕ್ತಿ ಇಲಾಖೆ ಪರಿಗಣಿಸಿರುವುದು ಇದರಿಂದ ಸ್ಪಷ್ಟವಾಗುತ್ತದೆ.

1998ರಲ್ಲಿ ಕಲ್ಪಾಕಂ ಮರುಪರಿಷ್ಕರಣ ಸ್ಥಾವರ (Kalpakkam Reprocessing plant*) ಸಂಪೂರ್ಣ ಗೊಂಡಾಗ ಪ್ರಧಾನಿ ವಾಜಪೇಯಿಯವರು ಮತ್ತು ಅಣು ಇಲಾಖೆಯ ಅಧಿಕಾರಿಗಳು ಜಯಕಾರ ಹಾಕಿದ್ದರು. ದೇಶಕ್ಕೆ ಸ್ಥಾವರವನ್ನು ಸಮರ್ಪಿಸುತ್ತಾ ಪ್ರಧಾನಿಯವರು "ಸ್ಥಾವರವು ಸಂಪೂರ್ಣಗೊಂಡಿರುವುದು ಭಾರತದ ಅಣುಶಕ್ತಿ ಕಾರ್ಯಕ್ರಮದ ಇತಿಹಾಸದಲ್ಲಿ ಒಂದು ಮೈಲಿಗಲ್ಲು" ಎಂದು ಹೇಳಿದರು. ಬಾಬಾ ಅಣುಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಅನಿಲ್ ಕಾಕೋಡಕರ್ ಅವರು ಭಾರತದ ಅಣು ವಿದ್ಯುತ್ ಕಾರ್ಯಕ್ರಮದಲ್ಲಿ ಕಲ್ಪಾಕಂ ಸ್ಥಾವರದ ಮಹತ್ವವನ್ನು ಕುರಿತು ಒತ್ತಿಹೇಳಿದರು. ಅಲ್ಲಿನ ಯೋಜನಾ ವ್ಯವಸ್ಥಾಪಕರು ಕಸದಲ್ಲೂ ಸಂಪತ್ತನ್ನು ಸಾಧಿಸುವ ಸಾಮರ್ಥ್ಯವೆಂದು ಹೇಳಿದರು. ಕಲ್ಪಾಕಂ ಸ್ಥಾವರದ ಉದ್ದೇಶವೆಂದರೆ ವಿಕಿರಣ ತ್ಯಾಜ್ಯದಿಂದ ಪ್ಲುಟೋನಿಯಂ ಅನ್ನು ಬೇರ್ಪಡಿಸುವುದು. ಈ ಪ್ಲುಟೋನಿಯಂ ಅನ್ನು ವಿಶೇಷ ರಿಯಾಕ್ಟರುಗಳೆಂದು ಕರೆಯುವ ಬ್ರೀಡರ್ ರಿಯಾಕ್ಟರ್ (Breeder Reactors*)ಗಳಲ್ಲಿ ಇಂಧನವಾಗಿ ಬಳಸಲಾಗುವುದು. ಇದರಿಂದ ಹೆಚ್ಚಿನ ಪ್ಲುಟೋನಿಯಂ ಅನ್ನು ಪಡೆಯಬಹುದು. ಈ ಬ್ರೀಡರ್ ರಿಯಾಕ್ಟರ್‌ಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲಾಗುವುದೆಂದು ಅಣುಶಕ್ತಿ ಇಲಾಖೆ ಹೇಳುವುದನ್ನು ಕೆಲವೇ ಜನ ಗಂಭೀರವಾಗಿ ಪರಿಗಣಿಸುತ್ತಾರೆ. ಆ ರೀತಿಯ ರಿಯಾಕ್ಟರುಗಳಿಂದ ವಿದ್ಯುಚ್ಛಕ್ತಿಯನ್ನು ಸಮಾಧಾನಕರವಾಗಿ ಉತ್ಪಾದಿಸವುದು ಯಾವ ದೇಶಕ್ಕೂ ಸಾಧ್ಯವಾಗಿಲ್ಲ. ಕಾರಣ ಅಪಘಾತವಾಗುವ ಸಂಭವ ಹೆಚ್ಚು ಮತ್ತು ತಾಂತ್ರಿಕ ತೊಂದರೆಗಳು. ಆದರೆ ಬ್ರಿಡರ್ ರಿಯಾಕ್ಟರ್‌ಗಳಲ್ಲಿ ಪಡೆವ ಹೆಚ್ಚು ಪ್ಲುಟೋನಿಯಂ ಅನ್ನು ಅಣುಬಾಂಬ್ ತಯಾರಿಸಲು ಬಳಸಬಹುದು. ಈ ಅಪಾಯವನ್ನು ಅನೇಕ ದೇಶಗಳು ಗುರುತಿಸಿದ್ದವು. 1970ರಲ್ಲಿ ಅಮೆರಿಕದಲ್ಲಿ ಆ ರೀತಿಯ ರಿಯಾಕ್ಟರುಗಳ ಸ್ಥಾಪನೆಯನ್ನು ವಿರೋಧಿಸಿ ತೀವ್ರ ಪ್ರತಿಭಟನೆಗಳು ನಡೆದಿದ್ದವು ಮತ್ತು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದವು. ಆದರೆ ಈ ಗಂಭೀರ ಸಮಸ್ಯೆ ಕುರಿತು ಹೆಚ್ಚಿನ ಸಾರ್ವಜನಿಕರಿಗಿನ್ನು ತಿಳುವಳಿಕೆ ಇಲ್ಲ. ಇದರಿಂದಾಗಿ ಅಣು ಇಲಾಖೆಗೆ ಅಧಿಕ ಪ್ಲುಟೋನಿಯಂ ಉತ್ಪಾದನೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮುನ್ನಡೆಸುವ ಕಾರ್ಯ ಸುಲಭವಾಗಿದೆ. ಭಾರತದ ಅಣುಶಕ್ತಿ ಯೋಜನೆ ಮೂರು ಹಂತಗಳಲ್ಲಿ ಕೊನೆಯ ಎರಡು ಹಂತಗಳು ಬ್ರಿಡರ್ ರಿಯಾಕ್ಟರ್ ಗಳನ್ನು ಅವಲಂಭಿಸಿದೆ. ಆ ಕಾರಣ ಯೋಜನೆಯಲ್ಲಿರುವ ನಾಗರೀಕ ಮತ್ತು ಮಿಲಿಟರಿ ಉಪಯೋಗದ ಅಂಶಗಳ ನಡುವಿರುವ ನಿಕಟ ಸಂಪರ್ಕವನ್ನು ಗಮನಿಸುವುದು ಮುಖ್ಯ.

ಪೋಕ್ರಾನ್ 2ರ ನಂತರ ಅಣ್ವಸ್ತ್ರ ವಿರೋಧಿ ಚಳುವಳಿಯು ಅಣ್ವಸ್ತ್ರಗಳನ್ನು ಕುರಿತು ಬಹಳಷ್ಟು ಚರ್ಚಿಸಿದೆ. ಆದರೆ ಡೆಲಿವರಿ ಸಿಸ್ಟಂ (ಅಣ್ವಸ್ತ್ರಗಳನ್ನು ಹೊತ್ತೊಯ್ಯುವ ವ್ಯವಸ್ಥೆ) ಕುರಿತಂತೆ ಹೆಚ್ಚಿನ ಚರ್ಚೆಗಳಾಗಿಲ್ಲ. 150-1500 ಕಿ.ಮೀ. ಅಂತರದೊಳಗೆ ಅಣುಬಾಂಬ್‌ಗಳನ್ನು ಹೊತ್ತೊಯ್ಯುವಂತಹ ಹಲವಾರು ಯುದ್ಧ ವಿಮಾನಗಳನ್ನು ಭಾರತ ಹೊಂದಿದೆ. 1983ರಲ್ಲಿ ಪ್ರಾರಂಭವಾದ ಸಮಗ್ರ ಕ್ಷಿಪಣಿ ಅಭಿವೃದ್ಧಿ ಯೋಜನೆಯು ಅಣುಬಾಂಬ್‌ಗಳನ್ನು ಸಾಗಿಸುವ 5 ರೀತಿಯ ಕ್ಷಿಪಣಿಗಳನ್ನು ತಯಾರಿಸುವ ಗುರಿ ಇಟ್ಟುಕೊಂಡಿದೆ. 2500-3000 ಕಿ.ಮೀ. ಅಂತರದೊಳಗೆ ಪ್ರಯೋಗಿಸಬಹುದಾದ ಅಗ್ನಿ 2 ಕ್ಷಿಪಣಿಯನ್ನು 1999ರ ಏಪ್ರಿಲ್‌ನಲ್ಲಿ ಪರೀಕ್ಷಿಸಲಾಯಿತು. ಅದನ್ನು ಸಂಪೂರ್ಣ ಅಭಿವೃದ್ಧಿ ಪಡಿಸಿದರೆ ಚೈನಾದ ನಗರಗಳನ್ನು ನಾಶ ಪಡಿಸಬಹುದು. ಇದಾದ ನಂತರ ಅಗ್ನಿ ಮತ್ತು ಪೃಥ್ವಿ ಕ್ಷಿಪಣಿಗಳನ್ನು ತಯಾರಿಸಲಾಯಿತು. ಇವು ಭೂಮಿಯ (surface to surface) ಮೇಲೆ ಪ್ರಯೋಗಿಸುವಂತಹವು.

ಇನ್ನೂ ಹೆಚ್ಚು ಪ್ರಬಲವಾದ ಅಗ್ನಿ 2 ಮತ್ತೊಂದು ಕ್ಷಿಪಣಿ ಸೂರ್ಯವನ್ನು ತಯಾರಿಸುವ ಯೋಜನೆಯಿದೆ. ಹಾಗಾಗಿ ಕ್ಷಿಪಣಿಗಳನ್ನು ತಯಾರಿಸುವ, ಪರೀಕ್ಷಿಸುವ ಹೊಣೆ ಹೊತ್ತಿರುವ DRDO ಮತ್ತು DOSಗಳ ವೆಚ್ಚವನ್ನು ಅಧಿಕವಾಗಿ ಹೆಚ್ಚಿಸಿರುವುದು ಆಶ್ಚರ್ಯವೇನಲ್ಲ.

ಮೇಲೆ ಚರ್ಚಿಸಿರುವ ವಿಷಯಗಳಿಂದ, ಪೋಕ್ರಾನ್ 2ರ

ನಂತರ ಭಾರತದ ಆಳುವ ವರ್ಗ ಬೃಹತ್ ಅಣ್ವಸ್ತ್ರಗಳ ಪಡೆಗಳನ್ನು ನಿರ್ಮಿಸಲು ಭರದಿಂದ ಸಾಗುತ್ತಿರುವುದು ಸ್ಪಷ್ಟವಾಗುತ್ತದೆ. ಅಮೆರಿಕದ ಒತ್ತಡದಿಂದಾಗಿ, ಭಾರತ ಸರ್ಕಾರ ಪದೇ ಪದೇ ಸಿ.ಟಿ.ಬಿ.ಟಿ. ಒಪ್ಪಂದಕ್ಕೆ ಸಹಿ ಹಾಕುವುದಾಗಿ ಹೇಳುತ್ತಿದ್ದರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಭಾರತದಲ್ಲಿನ ಅಣ್ವಸ್ತ್ರ ವಿರೋಧಿ ಚಳುವಳಿಯು ಸಿ.ಟಿ.ಬಿ.ಟಿ. ಪರಿಣಾಮಗಳನ್ನು ಚರ್ಚಿಸುವುದು ಅತ್ಯಗತ್ಯ. ಆ ಮೂಲಕ ಈ ಒಪ್ಪಂದದಿಂದಷ್ಟೆ ಜಾಗತೀಕ ನಿಶ್ಯಸ್ತ್ರೀಕರಣ ಹೊಂದುವುದು ಸಾಧ್ಯವೆ ಎಂಬುದನ್ನು ಪರೀಕ್ಷಿಸಬೇಕು. ಕಳೆದೆರೆಡು ವರ್ಷಗಳಲ್ಲಿ ಅಣುಶಕ್ತಿ ಇಲಾಖೆಯು ಹಲವಾರು ನ್ಯೂಕ್ಲಿಯರ್ ರಿಯಾಕ್ಟರ್‌ಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಅವುಗಳಲ್ಲಿ ಕೂಡಂಕುಲಂ ಒಂದು. ಕನ್ಯಾಕುಮಾರಿ ಯಲ್ಲಿರುವ ಕೂಡಂಕುಲಂನಲ್ಲಿ ಸ್ಥಾಪಿಸಲಾಗುತ್ತಿರುವ ನ್ಯೂಕ್ಲಿಯರ್ ರಿಯಾಕ್ಟರ್ ಅನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲಾಗಿದೆ. ಆಂಧ್ರದ ಪೂರ್ವ ಗೋದಾವರಿ ಮತ್ತು ಪಶ್ಚಿಮ ಬಂಗಾಳದ ಸುಂದರ್‌ಬನದಲ್ಲಿಯೂ ನ್ಯೂಕ್ಲಿಯರ್ ರಿಯಾಕ್ಟರ್ ಅನ್ನು ಸ್ಥಾಪಿಸಲಾಗುತ್ತಿದೆ. 220 ಮೆಗಾವ್ಯಾಟ್ ಸಾಮರ್ಥ್ಯದ ರಿಯಾಕ್ಟರ್ ಕೈಗಾದಲ್ಲಿ ಕಾರ್ಯ ಆರಂಭಿಸಿದೆ. ಈಗಾಗಲೆ ಇರುವ ರಿಯಾಕ್ಟರುಗಳಲ್ಲಿ ಸುರಕ್ಷತೆಯ ತೊಂದರೆ, ಅಪಘಾತವಾಗುವ ಸಂಭವವಿದೆ.

ಒಟ್ಟಾರೆ ಪೊಕ್ರಾನ್ 2ರ ನಂತರ ಭಾರತದ ಅಣ್ವಶಕ್ತಿ ಯೋಜನೆಗಳು ಹೆಚ್ಚಿವೆ. ಇದು ಅಣ್ವಸ್ತ್ರ ಮತ್ತು ಅಣುಶಕ್ತಿ ವಿರೋಧಿ ಚಳುವಳಿಯ ಜವಾಬ್ದಾರಿಯನ್ನು ಹೆಚ್ಚಿಸಿವೆ. ಉಹಿಸಲೂ ಸಾಧ್ಯವಿಲ್ಲದ ಅನಾಹುತಗಳಿಂದ ಜನರನ್ನು ರಕ್ಷಿಸಲು ಈಗಿನ ಬೆಳವಣಿಗೆಯನ್ನು ತಡೆಯುವ ಪ್ರಯತ್ನಗಳನ್ನು ಚಳುವಳಿಯು ಮಾಡಬೇಕಿದೆ.

ಸೂರ್ಯಪ್ರಕಾಶ್

---

* ನ್ಯೂಕ್ಲಿಯರ್ ರಿಯಾಕ್ಟರ್ : ಇದೊಂದು ಅಣುಶಕ್ತಿ ಉತ್ಪಾದಿಸಲು ಬಳಸುವ ಸಲಕರಣೆ. ನ್ಯೂಕ್ಲಿಯರ್ ರಿಯಾಕ್ಟರ್‌ನಲ್ಲಿ ಸಾಮಾನ್ಯವಾಗಿ ಯುರೇನಿಯಂ ೨೩೫ ಮತ್ತು ಯುರೇನಿಯಂ ೨೩೮ಅನ್ನು ಇಂಧನವಾಗಿ ಬಳಸಲಾಗುತ್ತದೆ. ನ್ಯೂಕ್ಲಿಯರ್ ರಿಯಾಕ್ಟರ್ ಅಷ್ಟೇ ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದಿಸುವ ಸಾಧ್ಯವಿಲ್ಲ. ಅಣುಸ್ಥಾವರವು ನ್ಯೂಕ್ಲಿಯರ್ ರಿಯಾಕ್ಟರ್ ಮತ್ತು ವಿದ್ಯುತ್‌ಚ್ಛಕ್ತಿ ಉತ್ಪಾದನೆ ವ್ಯವಸ್ಥೆ ಎರಡನ್ನು ಹೊಂದಿರುತ್ತದೆ. ವಿದ್ಯುತ್‌ಚ್ಛಕ್ತಿ ಉತ್ಪಾದನೆ ಮಾಡದ ಹೊಂದಿರುತ್ತದೆ. ವಿದ್ಯುತ್‌ಚ್ಛಕ್ತಿ ಉತ್ಪಾದನೆ ಮಾಡದ ಅಣುಸ್ಥಾವರವನ್ನು ಪ್ರಯೋಗಿಕ ಅಥವಾ ಪರೀಕ್ಷಾ ರಿಯಾಕ್ಟರ್ ಎನ್ನುತ್ತಾರೆ.


* Re Processing Plant - ಯುರೇನಿಯಂ ಅನ್ನು ಪರಿಷ್ಕರಿಸಿದ ಮೇಲೆ ಸಿಗುವ ತ್ಯಾಜ್ಯದಲ್ಲಿರುವ ಪ್ಲುಟೋನಿಯಂ ಅನ್ನು ಬೇರ್ಪಡಿಸುವುದನ್ನು Reprocessing ಎನ್ನುತ್ತಾರೆ. ಇದು ಸಂಕೀರ್ಣ ತಂತ್ರಜ್ಞಾನವನ್ನೊಳಗೊಂಡಿದು, ಹೆಚ್ಚಿನ ವಿಕಿರಣ ಸೂಸುತ್ತದೆ.

* Breeder Reactor : ಈ ರಿಯಾಕ್ಟರ್‌ನಲ್ಲಿ ಹೆಚ್ಚೆಚ್ಚು ಪ್ಲುಟೋನಿಯಂ ಅನ್ನು ಉತ್ಪಾದಿಸಲಾಗುತ್ತದೆ. ಅತಿ ಹೆಚ್ಚಿನ ರೇಡಿಯೋ ವಿಕಿರಣ ಸೂಸುವುದರಿಂದ ಇದು ತುಂಬಾ ಅಪಾಯಕಾರಿ.

ನಾವು ಶಸ್ತ್ರಾಸ್ತ್ರಗಳನ್ನು ಬಳಸುವ ದಾರಿಗೆ ಇಳಿದಾಗ ನಾವೇ ಅಳಿದೆಯವರಾಗುತ್ತೇವೆ. ಶಸ್ತ್ರಗಳ ಮೇಲೆ ನೆಚ್ಚಿಗೆ ಇಡುವವರು ತಮ್ಮ ಅಂತಃಕರಣದ ಮೇಲೆ ನೆಚ್ಚಿಗೆ ಇಡಲಾರರು. ಅವರು ತಮ್ಮದೇ ಅಸ್ತ್ರಗಳಿಗೆ ಗುಲಾಮರಾಗುತ್ತಾರೆ. ಅವರಲ್ಲಿ ಸ್ವಂತ ಶಕ್ತಿಯೆಂಬುದೇ ಉಳಿದಿರುವುದಿಲ್ಲ.

- ರಾಮಮನೋಹರ್ ಲೋಹಿಯಾ

ಯಾರ ರಕ್ಷಣೆ ?



"ರಾಜಕೀಯ ದಾಸ್ಯದಿಂದ ಬಿಡುಗಡೆ ಪಡೆದಿದ್ದರೂ ನಮ್ಮ ಮಿಲಿಟರಿ ವೆಚ್ಚ ಹೆಚ್ಚಾಗಿದೆ. ಇನ್ನೂ ಹೆಚ್ಚಿಸುವುದಾಗಿ ಬೆದರಿಸುತ್ತಿದ್ದೇವೆ. ಆ ಬಗ್ಗೆ ಬಲುಹೆಮ್ಮೆ ನಮಗೆ! ಇದನ್ನು ವಿರೋಧಿಸುವ ಒಂದೇ ಒಂದು ದನಿಯೂ ನಮ್ಮ ಶಾಸನ ಸಭೆಗಳಲ್ಲಿ ಕೇಳಿಬಂದಿಲ್ಲ. ಪಶ್ಚಿಮದ ಥಳುಕನ್ನು ಅನುಕರಿಸುವ ಹುಚ್ಚು ಪ್ರಯತ್ನ ನಡೆಯುತ್ತಿರುವಾಗಲೂ ಭಾರತ ಈ ಸಾವಿನ ನೃತ್ಯವನ್ನು ಎದುರಿಸಿ ಬದುಕಬಲ್ಲದೆಂಬ ಭರವಸೆ ನನ್ನೊಳಗೆ ಹಾಗೂ ಇನ್ನು ಅನೇಕರೊಳಗೆ ಇದೆ." (ಹರಿಜನ ಪತ್ರಿಕೆ, ಡಿಸೆಂಬರ್ 1947)

"ಭಾರತ, ಜಗತ್ತಿನಲ್ಲಿ ಹಾಸ್ಯಾಸ್ಪದವಾಗುತ್ತಿದೆ. ನೀವು ಅಹಿಂಸೆಯ ಮೂಲಕ ಪಡೆದುಕೊಂಡ ಸ್ವಾತಂತ್ರ್ಯ ಎಲ್ಲಿ ಎಂದು ಜಗತ್ತು ಕೇಳುತ್ತಿದೆ? ನಾನು ಅವಮಾನದಿಂದ ತಲೆತಗ್ಗಿಸುವಂತಾಗಿದೆ. ಸ್ವತಂತ್ರ ಭಾರತವು ಜಗತ್ತಿಗೆ ಶಾಂತಿಯ ಪಾಠವನ್ನು ನೀಡುವುದೊ? ಅಥವಾ ಜಗತ್ತು ಈಗಾಗಲೇ ಬೇಸತ್ತು ಹೋಗಿರುವ ದ್ವೇಷ, ಹಿಂಸೆಯ ಪಾಠವನ್ನು ಹೇಳುವುದೋ?" (ಆಧಾರ : ಹರಿಜನ)

ರಾಷ್ಟ್ರಪಿತ ಮಹಾತ್ಮಗಾಂಧಿಯವರು ಹೇಳಿರುವ ಮಾತುಗಳಿವು. ಅವರು ಅನುಮಾನಿಸದಂತೆ ತಲೆತಗ್ಗಿಸುವ ದ್ವೇಷ ಹಿಂಸೆಯನ್ನು ಬಿತ್ತುವ ಕೆಲಸವನ್ನೇ ಈ ದೇಶದ ಆಳುವ ವರ್ಗ ಮಾಡುತ್ತಿದೆ. ಸರ್ಕಾರ ರಕ್ಷಣೆಗೆಂದು ಸುರಿಯುತ್ತಿರುವ ಹಣವನ್ನು ಗಮನಿಸಿದಾಗ ಗಾಂಧೀಜಿಯವರ ಅನುಮಾನ ಸ್ಪಷ್ಟವಾಗುತ್ತದೆ.

ಭಾರತದ ರಕ್ಷಣಾ ವೆಚ್ಚ (ಕೋಟಿಗಳಲ್ಲಿ)

ವರ್ಷ	ಮೊತ್ತ
1991-92	16,347
1992-93	17,582
1993-94	21,845
1994-95	23,245
1995-96	26,856
1996-97	29,505
1997-98	35,278
1998-99	39,897
1999-2000	48,504 ಪರಿಷ್ಕರಿಸಿದ ಅಂದಾಜು ವೆಚ್ಚ
2000-2001	58,587 ಅಂದಾಜು ವೆಚ್ಚ

ಭಾರತದ ಆಳುವ ವರ್ಗ, ಮತ್ತವರ ಹಣ, ಅಧಿಕಾರ ಹಂಚಿಕೊಳ್ಳುವ ಪಂಡಿತರು, ವಿಜ್ಞಾನಿಗಳು ತಮ್ಮ ಕೌಶಲ್ಯ ಬಳಸಿ ರಕ್ಷಣಾ ವೆಚ್ಚವನ್ನು, ಶಸ್ತ್ರಾಸ್ತ್ರಗಳ ರಫ್ತನ್ನು ಹೆಚ್ಚಿಸುವ ಅಗತ್ಯ ಕುರಿತು ಜನರನ್ನು ಮರುಳು ಮಾಡುತ್ತಲೇ ಇದ್ದಾರೆ. ನಿಜವೇನೆಂದರೆ ಶಸ್ತ್ರಾಸ್ತ್ರ ಮಾರಾಟ ಮಾಡುವ ಅಮೆರಿಕಾ, ಇಂಗ್ಲೇಂಡ್, ಫ್ರಾನ್ಸ್, ಜರ್ಮನಿ ಅಥವಾ ಸ್ವೀಡನ್ ಆಗಲಿ ಪಾಕಿಸ್ತಾನದ ಪರವೂ ಅಲ್ಲ ಭಾರತದ ಪರವೂ ಅಲ್ಲ. ಆ ದೇಶಗಳು ಶಸ್ತ್ರಾಸ್ತ್ರ ಖರೀದಿಸುವವರ

ಪರ. ಅವು ಭಾರತ, ಪಾಕಿಸ್ತಾನ ಎರಡಕ್ಕೂ ಶಸ್ತ್ರಾಸ್ತ್ರಗಳನ್ನು ಮಾರುತ್ತವೆ. ಇಂಗ್ಲೆಂಡ್ ಪಾಕಿಸ್ತಾನಕ್ಕೆ ಯುದ್ಧ ನಾವೆಗಳನ್ನು ಮಾರಿದೆ ಭಾರತಕ್ಕೆ ಸಮುದ್ರದಲ್ಲಿ ಬಳಸುವ ಶಸ್ತ್ರಾಸ್ತ್ರಗಳನ್ನು ಮಾರಿದೆ. ಜೋಫೋರ್ಸ್ ಕಂಪೆನಿ ಭಾರತಕ್ಕೆ ಪ್ರಖ್ಯಾತ ಬಂದೂಕಗಳನ್ನು ಮಾರಿದರೆ ಪಾಕಿಸ್ತಾನಕ್ಕೆಂದು ಸ್ಫೋಟಕಗಳನ್ನು ತಯಾರಿಸಿದೆ. 1988-92ರ ಅವಧಿಯಲ್ಲಿ ಸೋವಿಯತ್ ರಷ್ಯಾ 9.36 ಬಿಲಿಯನ್ ಡಾಲರ್ ಮೊತ್ತದ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ಮಾರಿದೆ. ಅಮೆರಿಕಾ 1.1 ಬಿಲಿಯನ್ ಡಾಲರ್ ಮೊತ್ತದ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನಕ್ಕೆ ಮಾರಿದೆ. 1945-1995ರ ಅವಧಿಯಲ್ಲಿ ನಡೆದ 100 ದೊಡ್ಡ ಘರ್ಷಣೆಗಳಲ್ಲಿ 20 ಮಿಲಿಯನ್‌ಗಿಂತಲೂ ಹೆಚ್ಚಿನ ಜನ ಸತ್ತಿದ್ದಾರೆ. ಅವರಲ್ಲಿ 1.5 ಲಕ್ಷ ಜನ ಮಾತ್ರ ಬಿಳಿಯರು ಉಳಿದವರು ಬಿಳಿ ರಾಷ್ಟ್ರಗಳು ಮಾಡಿದ ಶಸ್ತ್ರಾಸ್ತ್ರಗಳಿಂದ ಮಡಿದವರು. ರಕ್ಷಣಾ ವೆಚ್ಚದ ಹೆಚ್ಚಳದಿಂದ ಶಸ್ತ್ರಾಸ್ತ್ರಗಳ ಆಮದಿನಿಂದ ನಿಜಕ್ಕೂ ಲಾಭ ಪಡೆದವರೆಂದರೆ ಶಸ್ತ್ರಾಸ್ತ್ರ ಮಾರುವ ರಾಷ್ಟ್ರಗಳು, ಅವರ ದಳ್ಳಾಳಿಗಳು, ಬಡದೇಶಗಳನ್ನಾಳುವ ರಾಜಕಾರಣಿಗಳು, IDSA (Institute of defence studies & analysis) ಯಂತಹ ಸಂಸ್ಥೆಗಳು, ಆ ಸಂಸ್ಥೆಗಳ ಪಂಡಿತರುಗಳು. ಇದು ಇಂಡಿಯಾ ಪಾಕಿಸ್ತಾನ ಎರಡೂ ದೇಶಕ್ಕೆ ಅನ್ವಯಿಸುತ್ತವೆ. ಈ ಜನ ಅಮೆರಿಕ ಯೂರೋಪಿನ ಶಸ್ತ್ರಾಸ್ತ್ರ ಮಾರಾಟ ಮಾಡುವವರು ಅನುಭವಿಸುವ ಎಲ್ಲಾ ಐಷಾರಾಮಗಳನ್ನು ಅನುಭವಿಸುತ್ತಾರೆ. ಆದರೆ ನಾಡಿನ ಜನ ಕನಿಷ್ಟ ಆರೋಗ್ಯ ಸೇವೆ, ನೀರು, ಊಟ, ಶಿಕ್ಷಣದಂತಹ ಮೂಲಭೂತ ಅಗತ್ಯಗಳು ಇಲ್ಲದೆ ಬದುಕುತ್ತಿದ್ದಾರೆ.

ರಕ್ಷಣಾ ವೆಚ್ಚದ ಹೆಚ್ಚಳ ಕುರಿತು ಮಾತನಾಡುವ ರಾಜಕಾರಣಿಗಳು, ಪಂಡಿತರು, ವ್ಯಾಪಾರಿಗಳು, ಆಡಳಿತಗಾರರು, ವಾಣಿಜ್ಯೋದ್ಯಮಿಗಳು ಮಹಾನ್ ದೇಶ ಭಕ್ತರೇನಲ್ಲ. ರಕ್ಷಣಾ ವೆಚ್ಚದ ಹೆಚ್ಚಳದ ಜೊತೆಗೆ ಅವರನ್ನು ಸಾಕುವ ವೆಚ್ಚವೂ ದಿನೇ ದಿನೇ ಹೆಚ್ಚುತ್ತಿದೆ. ದಾರಿದ್ರ್ಯದಲ್ಲಿ ಬದುಕುತ್ತಿರುವ 500 ಮಿಲಿಯನ್‌ಗಿಂತಲೂ ಹೆಚ್ಚಿನ ಜನರಿಗೆ ಮೂಲಭೂತ ಅಗತ್ಯಗಳನ್ನು ಕಳೆದ 50 ವರ್ಷಗಳಲ್ಲಿ ಒದಗಿಸಿಲ್ಲ ಎಂಬ ಬಗ್ಗೆ 'ದೇಶಪ್ರೇಮಿ'ಗಳಿಗೆ ನಾಚಿಕೆಯೂ ಇಲ್ಲ, ದೇಶದ ಭದ್ರತೆಗೆ ಆತಂಕವಿದೆ, ಯಾವುದೇ ಸಂದರ್ಭವನ್ನೆದುರಿಸಲು ರಾಷ್ಟ್ರ ಸಜ್ಜಾಗಿರಬೇಕು, ಅದಕ್ಕಾಗಿ ಜನತೆಯ ಅಭಿವೃದ್ಧಿಯನ್ನು ಬದಿಗಿಟ್ಟು ರಕ್ಷಣಾ ವೆಚ್ಚ ಭರಿಸಬೇಕೆಂದು ಆವೇಶದಿಂದ ಹೊಳಿಡುವ ರಾಜಕಾರಣಿಗಳು, ಪತ್ರಿಕೋದ್ಯಮಿಗಳು, ಆಡಳಿತಗಾರರು, ಪಂಡಿತರುಗಳು ಯಾವ ತ್ಯಾಗಮಾಡಿದ್ದಾರೆ? ರಾಷ್ಟ್ರಪ್ರೇಮದ ಬಗ್ಗೆ ಮಾತನಾಡುವ ಈ ಜನರೆಲ್ಲ-

* ವಾಸಿಸುವುದು ಹವಾನಿಯಂತ್ರಿತ ಬಂಗ್ಲೆಗಳಲ್ಲಿ
* ಓಡಾಡುವುದು ದೇಶಿ, ವಿದೇಶಿ ಕಾರುಗಳಲ್ಲಿ, ಹಾರಾಡುವುದು ವಿಮಾನಗಳಲ್ಲಿ
* ತೊಡುವುದು ದುಬಾರಿ ಬಟ್ಟೆಗಳನ್ನು
* ತಮ್ಮ ಮಕ್ಕಳನ್ನು ಕಳಿಸುವುದು ಪ್ರತಿಷ್ಠಿತ ಶಾಲೆಗಳಿಗೆ, ಉಚ್ಚ ಶಿಕ್ಷಣಕ್ಕೆಂದು ಕಳಿಸುವುದು ವಿದೇಶಕ್ಕೆ
* ಕುಡಿಯುವುದು ಕೊಕೋ ಕೋಲಾ, ಪೆಪ್ಸಿ ಅಥವಾ ಸ್ವದೇಶಿ ಕೋಲಾಗಳನ್ನು
* ಕೆಮ್ಮು ನೆಗಡಿಗೂ ಆಶ್ರಯಿಸುವುದು ಸುಸಜ್ಜಿತ ಆಸ್ಪತ್ರೆ, ನರ್ಸಿಂಗ್ ಹೋಂಗಳನ್ನು, ಪರಿಣಿತ ವೈದ್ಯರನ್ನು,

ಇವರ ಕುಟುಂಬದ ವಾರ್ಷಿಕ ವೆಚ್ಚ ಮಾಮೂಲಿ ಜನರ ವಾರ್ಷಿಕ ವೆಚ್ಚಕ್ಕಿಂತ 50-100 ಪಟ್ಟಿಗಿಂತ ಹೆಚ್ಚು. ಅಮೇರಿಕ, ಯೂರೋಪಿನ ಜೀವನ ಶೈಲಿಗಿಂತ ಭಿನ್ನವಾಗಿಲ್ಲದ ಜೀವನ ನಡೆಸುವ ಈ ಜನ ಯಾರ ಅಭಿವೃದ್ಧಿಯನ್ನು ಬದಿಗಿಟ್ಟು ದೇಶ ರಕ್ಷಿಸಬೇಕೆನ್ನುತ್ತಾರೆ?

9-8-95ರಂದು ಪಾರ್ಲಿಮೆಂಟಿನಲ್ಲಿ ನೀಡಿದ ಮಾಹಿತಿಯಂತೆ 117429 ವಾಸಸ್ಥಳಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. 1989-93ರ ಅವಧಿಯಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ 150 ಲಕ್ಷ ಮಕ್ಕಳು ಅಪೌಷ್ಟಿಕತೆ, ಶುದ್ಧ ಕುಡಿವ ನೀರಿನ ಕೊರತೆ, ಮೂಲಭೂತ ಆರೋಗ್ಯ ವ್ಯವಸ್ಥೆಯ ಕೊರತೆಯಿಂದ ಸತ್ತರು. 700 ಮಿಲಿಯನ್‌ಗಿಂತಲೂ ಹೆಚ್ಚಿನ ಜನಕ್ಕೆ ಯಾವುದೇ ಭಾರತೀಯ ಭಾಷೆಯನ್ನು ಓದಲು ಬರೆಯಲು ಬಾರದು. 1994-95ರಲ್ಲಿ ಶಿಕ್ಷಣಕ್ಕೆಂದು ಖರ್ಚು ಮಾಡಿದ್ದು 4409 ಕೋಟಿ. ರಕ್ಷಣಾ ವೆಚ್ಚಕ್ಕೆಂದು ಖರ್ಚು ಮಾಡಿದ್ದು 23500 ಕೋಟಿ. ಜಗತ್ತಿನಲ್ಲಿ ಅತಿ ಹೆಚ್ಚಿನ ಅನಕ್ಷರಸ್ಥರಿರುವ ದೇಶವೆಂದರೆ ಭಾರತ! 1991ರ ಜನಗಣತಿಯ ಅಂಕಿ ಅಂಶದ ಪ್ರಕಾರ ಕೇವಲ 16% ಮನೆಗಳಿಗಷ್ಟೆ ವಿದ್ಯುಚ್ಛಕ್ತಿ, ಶುದ್ಧನೀರು, ನೈರ್ಮಲ್ಯದ ವ್ಯವಸ್ಥೆ ಇರುವುದು. ಕೋಟ್ಯಾಂತರ ಜನ ಚಿಂದಿ ಯುಟ್ಟು ಫುಟ್‌ಪಾತಿನಲ್ಲಿ, ಕೊಳಚೆಗೇರಿಗಳಲ್ಲಿ ವಾಸಿಸುತ್ತಾರೆ.

ಈ ಜನರ ಏಳಿಗೆಯನ್ನು ಬದಿಗಿಟ್ಟು ದೇಶವನ್ನು ರಕ್ಷಿಸಬೇಕೆನ್ನುವವರು ಸತ್ಯವನ್ನು ಮರೆಮಾಚಿ ಒಂದು ದೇಶದ ವಿರುದ್ಧ ಮತ್ತೊಂದು ದೇಶವನ್ನು, ಒಂದು ಧರ್ಮದ ವಿರುದ್ಧ ಮತ್ತೊಂದು ಧರ್ಮವನ್ನು, ಒಂದು ಭಾಷೆಯ ವಿರುದ್ಧ ಮತ್ತೊಂದು ಭಾಷೆಯನ್ನು ಎತ್ತಿಕಟ್ಟುವ ಕೆಲಸವನ್ನು ನಿರಂತರವಾಗಿ

ಮಾಡುತ್ತಿದ್ದಾರೆ. ಆದರೆ ಯಾವುತ್ತೂ ಶ್ರೀಮಂತರ ವಿರುದ್ಧ ಬಡವರನ್ನು, ಶೋಷಿಸುವವರ ವಿರುದ್ಧ ಶೋಷಿತರನ್ನು ಎತ್ತಿಕಟ್ಟುವುದಿಲ್ಲ.

ಹಸಿವು, ಬಡತನದಿಂದ ನರಳುವ ಜನರ ಏಳಿಗೆಯನ್ನೆ ಬಲಿನೀಡಿ ದೇಶ ಪ್ರೇಮ ಮೆರೆಯುವ ಬದಲು ತಮ್ಮ ಐಷಾರಾಮಿ ಕೊಳ್ಳುಬಾಕ ಜೀವನ ಶೈಲಿಯನ್ನು ಬಿಟ್ಟುಕೊಡುವ ಬಗ್ಗೆ ಯೋಚಿಸುವುದೇ ಇಲ್ಲ. ದೇಶಕ್ಕಾಗಿ ಈ ತ್ಯಾಗಗಳನ್ನು ಮಾಡಲು ಅವರು ಸಿದ್ಧರಿದ್ದಾರೆಯೇ?

* ವೈಯಕ್ತಿಕ ಕೆಲಸಕ್ಕಾಗಲಿ, ಸಾರ್ವಜನಿಕ ಕೆಲಸಕ್ಕಾಗಲಿ ಕಾರಗಳನ್ನು ಬಳಸದೆ ಇರಲು
* ಹವಾನಿಯಂತ್ರಣ, ಕಲರ್ ಟಿ.ವಿ. ಸೆಲ್‌ಫೋನುಗಳು, ಪೀಠೋಪಕರಣಗಳು ಇತ್ಯಾದಿ ಸುಖಭೋಗಳನ್ನು ಬಿಡಲು
* ಓಡಾಟಕ್ಕೆ ಹವಾನಿಯಂತ್ರಿತ ಪ್ರಥಮದರ್ಜೆ ರೈಲ್ವೆ ಸೀಟು, ವಿಮಾನಗಳನ್ನು ಬಿಡಲು
* ವರ್ಷಕ್ಕೆ 50000 ಕ್ಕಿಂತ ಹೆಚ್ಚು ಕುಟುಂಬಕ್ಕೊಂದು ಖರ್ಚು ಮಾಡುವುದಿಲ್ಲವೆಂದು (ಇದು ಶೇ. 50ಕ್ಕಿಂತ ಹೆಚ್ಚಿನ ಭಾರತೀಯರ ವಾರ್ಷಿಕ ಖರ್ಚಿಗಿಂತ ನಾಲ್ಕೈದು ಪಟ್ಟು ಹೆಚ್ಚು).
* ತಲಾ 20 ಮೀಟರ್‌ಗಿಂತ ಹೆಚ್ಚಿನ ಬಟ್ಟೆಯನ್ನು ಉಪಯೋಗಿಸುವುದಿಲ್ಲವೆಂದು
* ತಮ್ಮ 14 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳನ್ನು ಶಾಲೆ, ಕಾಲೇಜಿಗೆ ಕಳಿಸುವುದಿಲ್ಲವೆಂದು (ಶೇ. 70ರಷ್ಟು ಕುಟುಂಬಗಳು ತಮ್ಮ 6-14 ವಯೋಮಿತಿಯ ಮಕ್ಕಳನ್ನು ಶಾಲೆಗೆ ಕಳಿಸುವ ಪರಿಸ್ಥಿತಿಯಲಿಲ್ಲ)
* 600 ಕಿ.ವಾ.ಗಿಂತ ಹೆಚ್ಚಿನ ವಿದ್ಯುತ್‌ಚ್ಛಕ್ತಿಯನ್ನು ಉಪಯೋಗಿಸುವುದಿಲ್ಲವೆಂದು (10 ಕೋಟಿಗಿಂತಲು ಹೆಚ್ಚಿನ ಕುಟುಂಬಗಳು ವರ್ಷಕ್ಕೆ 100 ಕಿ.ವ್ಯಾ. ವಿದ್ಯುತ್‌ಚ್ಛಕ್ತಿಯನ್ನು ಉಪಯೋಗಿಸುವುದಿಲ್ಲ)

ಈ ಶೇ 5% ಶ್ರೀಮಂತ ಜನ ಈ ಪ್ರಮಾಣ ಮಾಡಿ ಅದರಂತೆ ನಡೆದುಕೊಳ್ಳಬಲ್ಲರೆ?

ಪಾಕಿಸ್ತಾನಕ್ಕೆ ಅಮೆರಿಕಾ ಶಸ್ತ್ರಾಸ್ತ್ರ ಸರಬರಾಜು ಮಾಡಿರುವುದರಿಂದ ಆ ಕಾರಣ ಭಾರತವು ರಕ್ಷಣೆಗಾಗಿ ಹೆಚ್ಚು ವ್ಯಯಿಸಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳ ಧುರೀಣರು ಕೂಗೆಬ್ಬಿಸಿದರು. ಶಸ್ತ್ರಾಸ್ತ್ರ ಪೈಪೋಟಿಯಲ್ಲಿ ಮಾತ್ರ ಪಾಕಿಸ್ತಾನವನ್ನು ಮೀರಿಸಬೇಕೆನ್ನುವವರು ಉಳಿದ ವಿಷಯಗಳಲ್ಲಿ ಯಾಕೆ ಪೈಪೋಟಿ ನಡೆಸಲಿಚ್ಛಿಸುವುದಿಲ್ಲ?

* 1987ರಲ್ಲಿ ಭಾರತ 3200 ಮಿಲಿಯನ್ ಪೌಂಡ್ ಮೊತ್ತದ ಶಸ್ತ್ರಾಸ್ತ್ರವನ್ನುಆಮದು ಮಾಡಿಕೊಂಡಿತು. ಅದೇ ಸಮಯದಲ್ಲಿ ಪಾಕಿಸ್ತಾನ ಆಮದು ಮಾಡಿಕೊಂಡ ಶಸ್ತ್ರಾಸ್ತ್ರಗಳ ಮೊತ್ತ 150 ಮಿಲಿಯನ್ ಪೌಂಡ್.
* 1989-93ರ ಅವಧಿಯಲ್ಲಿ ಭಾರತ ಆಮದು ಮಾಡಿಕೊಂಡ ಶಸ್ತ್ರಾಸ್ತ್ರಗಳ ಮೊತ್ತ 3.5 ಬಿಲಿಯನ್ ಡಾಲರ್. ಇದೇ ಅವಧಿಯಲ್ಲಿ ಪಾಕಿಸ್ತಾನ ಆಮದು ಮಾಡಿಕೊಂಡ ಶಸ್ತ್ರಾಸ್ತ್ರಗಳ ಮೊತ್ತ 1.5 ಬಿಲಿಯನ್.
* ಭಾರತದಲ್ಲಿ 88% ಗರ್ಭಿಣಿ ಮಹಿಳೆಯರು ರಕ್ತಹೀನತೆ ಯಿಂದ ನರಳಿದರೆ ಪಾಕಿಸ್ತಾನದಲ್ಲಿ ರಕ್ತ ಹೀನತೆಯಿಂದ ಬಳಲುವ ಗರ್ಭಿಣಿ ಮಹಿಳೆಯರ ಸಂಖ್ಯೆ ಶೇ. 57.
* 1990ರಲ್ಲಿ ಜನಿಸಿದ ಶಿಶುಗಳಲ್ಲಿ ಶೇ. 33 ಅಗತ್ಯ ತೂಕಕ್ಕಿಂತ ಕಡಿಮೆ ತೂಕದವು. ಪಾಕಿಸ್ತಾನದಲ್ಲಿ ಶೇ. 25 ಶಿಶುಗಳು ಅಗತ್ಯ ತೂಕಕ್ಕಿಂತ ಕಡಿಮೆ ತೂಕದವು. ಹಾಗೆಯೇ ಭಾರತದಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ 69%ರಷ್ಟು ಮಕ್ಕಳ ತೂಕ ಅತಿ ಕಡಿಮೆ. ಪಾಕಿಸ್ತಾನದಲ್ಲಿ ಶೇ. 40ರಷ್ಟು.
* ನೈರ್ಮಲ್ಯದ ವ್ಯವಸ್ಥೆಯುಳ್ಳ ಜನರ ಸಂಖ್ಯೆ ಪಾಕಿಸ್ತಾನದಲ್ಲಿ 38% ಆದರೆ ಭಾರತದಲ್ಲಿ 27%
* 1982ರಲ್ಲಿ ಒಟ್ಟು ಆಂತರಿಕ ಉತ್ಪನ್ನದ 4.3%ರಷ್ಟನ್ನು ಮಾತ್ರ, ಸಾಮಾಜಿಕ ಭದ್ರತೆ, ವಸತಿ ವ್ಯವಸ್ಥೆಗೆ ವಿನಿಯೋಗಿಸಿದ್ದು. ಅದೇ ವರ್ಷ ಪಾಕಿಸ್ತಾನ ವಿನಿಯೋಗಿಸಿದ್ದು ಒಟ್ಟು ಆಂತರಿಕ ಉತ್ಪನ್ನದ 6.8%ರಷ್ಟು.
* ಭಾರತ 1986ರಲ್ಲಿ ಒಟ್ಟು ಆಂತರಿಕ ಉತ್ಪನ್ನದ (G.D.P) 1.9% ಅನ್ನು ಶಿಕ್ಷಣಕ್ಕೆ ನೀಡಿದರೆ ಪಾಕಿಸ್ತಾನ ಅದೇ ವರ್ಷ ಶಿಕ್ಷಣಕ್ಕೆಂದು ವ್ಯಯಿಸಿದ್ದು ಒಟ್ಟು ಆಂತರಿಕ ಉತ್ಪನ್ನದ 2.2% ರಷ್ಟನ್ನು.

ಭಾರತದಲ್ಲಿ ಬಡತನ, ಅಜ್ಞಾನ, ಅನಾರೋಗ್ಯದ ಮುಖ್ಯ ಕಾರಣವೆಂದರೆ ಸಂಪನ್ಮೂಲಗಳ ಹಂಚಿಕೆಯಲ್ಲಿರುವ ತಾರತಮ್ಯ, ಬೇಕಂತಲೆ ಕೆಳಗಿನ 50% ಜನಸಂಖ್ಯೆಯನ್ನು ಕಡೆಗಣಿಸಿರುವುದು. ಕುಡಿವ ನೀರು, ಆಹಾರ, ವಸತಿ, ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ, ನೈರ್ಮಲ್ಯಗಳಂತಹ ಮೂಲಭೂತ ಅಗತ್ಯಗಳನ್ನು ನೀಡದಿರುವುದಕ್ಕೆ ಕೊಡುವ ಕಾರಣವೆಂದರೆ ಸಂಪನ್ಮೂಲ ಕೊರತೆ. ಆದರೆ ಕಳೆದ 10 ವರ್ಷಗಳಿಂದ ರಕ್ಷಣಾ ವೆಚ್ಚ ಮಾತ್ರ ಏರುತ್ತಲೆ ಇದೆ. ಇಲ್ಲದಿರುವ ಶತ್ರುವನ್ನು ಸೃಷ್ಟಿಸಿ ಭಾರತ, ಪಾಕಿಸ್ತಾನ

ಸರ್ಕಾರಗಳೆರಡೂ ಜನರನ್ನು ವಂಚಿಸುತ್ತಿವೆ. ಭಾರತದ ಆಳುವ ವರ್ಗಕ್ಕೆ ಪ್ರತಿಷ್ಠಿತರಿಗೆ ಪಾಕಿಸ್ತಾನ ಶತ್ರುವಾಗಿ ಬೇಕು ಪಾಕಿಸ್ತಾನದ ಆಳುವ ವರ್ಗಕ್ಕೆ, ಪತ್ರಿಷ್ಠಿತರಿಗೆ ಭಾರತವು ಶತ್ರುವಾಗಿ ಬೇಕು ಮತ್ತು ಇಂಗ್ಲೇಂಡ್, ಅಮೆರಿಕ, ಫ್ರಾನ್ಸ್, ರಷ್ಯಾಗಳಿಗೆ ಶಸ್ತ್ರಾಸ್ತ್ರ ಮಾರಲು ಪಾಕಿಸ್ತಾನ ಭಾರತ ಯಾವಾಗಲೂ ಗುದ್ದಾಡುವುದು ಬೇಕು.

ಶಸ್ತ್ರಾಸ್ತ್ರ ಪೈಪೋಟಿ ಅನಿವಾರ್ಯವೆಂದು ಹಣ ಸುರಿಯುತ್ತಲೆ ಇದ್ದರೂ ರಕ್ಷಣೆಗಾಗಿ ನಾವು ಮಾಡುತ್ತಿರುವ ಖರ್ಚು ಅತ್ಯಲ್ಪವೆಂದು ಹೇಳುವುದು ಸುಳ್ಳೆನ್ನುವುದು ಕೆಳಗಿನ ಅಂಕಿ ಅಂಶ ಗಮನಿಸಿದರೆ ಹೊಳೆಯುತ್ತದೆ.

ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವ ದೇಶಗಳು (1987 - 1991)

ಭಾರತ	3512	ಮಿಲಿಯನ್ ಡಾಲರ್	ವಾರ್ಷಿಕ ಅಂದಾಜು ವೆಚ್ಚ
ಸೌದಿಅರೇಬಿಯಾ	2119	-"-	-"-
ಇರಾಕ್	2069	-"-	-"-
ಅಫ್‌ಘಾನಿಸ್ತಾನ	1686	-"-	-"-
ಟರ್ಕಿ	1277	-"-	-"-
ಇಜಿಪ್ಟ್	1092	-"-	-"-
ಪಾಕಿಸ್ತಾನ	460	-"-	-"-
ಚೈನಾ	159	-"-	-"-

ಶಸ್ತ್ರಾಸ್ತ್ರ ಖರೀದಿಯಲ್ಲಿ, ಅತಿಹೆಚ್ಚು ಬಡತನ ಹೊಂದಿರುವುದರಲ್ಲಿ ಭಾರತ ದೇಶ ನಂಬರ್ 1

ರಕ್ಷಣಾ ವೆಚ್ಚ ಅನಿವಾರ್ಯವೇ ಆದಲ್ಲಿ ಅದರ ಖರ್ಚನ್ನು ಅಭಿವೃದ್ಧಿ ಕಾರ್ಯಗಳಿಗೆ ತಡೆಯಾಗದಂತೆ ಭರಿಸಲು ಸಾಧ್ಯವಿದೆ. ಹೇಗೆಂದರೆ -

ನಮ್ಮ ದೇಶದ ರಾಷ್ಟ್ರಪತಿಗಳ ಖರ್ಚು ಒಂದು ದಿನಕ್ಕೆ ಅಂದಾಜು ಒಂದು ಕೋಟಿ (ಇದರಲ್ಲಿ ರಾಷ್ಟ್ರಪತಿಗಳ ಪ್ರಯಾಣ, ರಾಷ್ಟ್ರಪತಿ ಭವನದ ಖರ್ಚು, ಅವರ ದೂರವಾಣಿ, ವಿದ್ಯುತ್‌ಚ್ಛಕ್ತಿ ಬಿಲ್‌ಗಳು, ದೇಶಿ-ವಿದೇಶಿ ಗಣ್ಯರ ಅತಿಥಿ ಸತ್ಕಾರ, ರಾಷ್ಟ್ರಪತಿಗಳ ಸಿಬ್ಬಂದಿ, ರಕ್ಷಣಾ ಪಡೆಯವರು ಇತ್ಯಾದಿ ಸೇರಿದೆ. ಅದು 1995 ಮಾರುಕಟ್ಟೆ ದರದಂತೆ) ಈ ಖರ್ಚಿನಲ್ಲಿ 1993 ರಲ್ಲಿ ಅಪೌಷ್ಠಿಕತೆ ಅನಾರೋಗ್ಯದಿಂದ ಸತ್ತ 32 ಲಕ್ಷ ಮಕ್ಕಳಲ್ಲಿ 12 ಲಕ್ಷ ಮಕ್ಕಳಿಗೆ ವರ್ಷಕ್ಕೆ ಸರಾಸರಿ 3000 ಖರ್ಚು ಮಾಡಿದ್ದರೆ ಉಳಿಸಬಹುದಿತ್ತು. ಅಂದರೆ ರಾಷ್ಟ್ರಪತಿಗಳ ವಾರ್ಷಿಕ ಆದಾಯ 365 ಕೋಟಿಯಲ್ಲಿ 360 ಕೋಟಿ ಖರ್ಚು ಮಾಡಿ 12 ಲಕ್ಷ ಮಕ್ಕಳ ಜೀವ ಉಳಿಸಿ, ರಾಷ್ಟ್ರಪತಿ ಮತ್ತವರ ಕುಟುಂಬಕ್ಕೆ 5 ಕೋಟಿ ಖರ್ಚು ಮಾಡಬಹುದಾಗಿತ್ತು. ನಮ್ಮಂತಹ ಬಡದೇಶದ ರಾಷ್ಟ್ರಪತಿಗೆ 5 ಕೋಟಿ ಕಡಿಮೆ ಮೊತ್ತವೇನಲ್ಲ. ಇದು 88 ಮಿಲಿಯನ್ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ 10000 ರೂ.ಗೆ ಹೋಲಿಸಿದರೆ 5000 ಪಟ್ಟು ಹೆಚ್ಚಿನದು.

NCAER (National Council for applied Economic Research)ನ ಅಧ್ಯಯನದ ಪ್ರಕಾರ ಭಾರತದ ಸುಮಾರು 6 ಲಕ್ಷ ಕುಟುಂಬಗಳ ವಾರ್ಷಿಕ ಆದಾಯ ಅಥವಾ ಖರ್ಚು 10 ಲಕ್ಷಕ್ಕಿಂತ ಹೆಚ್ಚು. ಸುಮಾರು 75000 ಕುಟುಂಬಗಳ ವಾರ್ಷಿಕ ಆದಾಯ ಅಥವಾ ಖರ್ಚು 50 ಲಕ್ಷಕ್ಕಿಂತ ಹೆಚ್ಚು. ಈ 50 ಲಕ್ಷಕ್ಕಿಂತಲೂ ಹೆಚ್ಚಿನ ಆದಾಯವಿರುವವರಲ್ಲಿ 70000 ಕುಟುಂಬಗಳನ್ನು ವರ್ಷಕ್ಕೆ 50000 ಕ್ಕಿಂತ ಹೆಚ್ಚು ಖರ್ಚು ಮಾಡಲು ಬಿಡದಿದ್ದರೆ ವರ್ಷಕ್ಕೆ ಸುಮಾರು 35000 ಕೋಟಿ ರೂ.ಗಳನ್ನು ಉಳಿಸಬಹುದು. 10 ಲಕ್ಷ ವಾರ್ಷಿಕ ಆದಾಯವಿರುವ 5 ಲಕ್ಷ ಕುಟುಂಬಗಳನ್ನು ವಾರ್ಷಿಕ ಆದಾಯ 35000ಕ್ಕಿಂತ ಹೆಚ್ಚಾಗದಂತೆ ನೋಡಿಕೊಂಡರೆ 50000 ಕೋಟಿ ರೂ. ಉಳಿಸಬಹುದು. ಹೀಗೆ ಪಡೆಯುವ ಒಟ್ಟು 85500 ಕೋಟಿ ರೂ.ಗಳ ಆದಾಯವನ್ನು ರಕ್ಷಣೆಗೆ ಬೇಕೆನ್ನುವ ಹೆಚ್ಚಿನ ಸಂಪನ್ಮೂಲಕ್ಕೆ ಬಳಸಬಹುದು. ಈ ಬಗ್ಗೆ ಯಾವ ಜನನಾಯಕರು, ಪಂಡಿತರುಗಳು ಮಾತನಾಡುವುದಿಲ್ಲ.

ದೇಶವೆಂದರೆ ಸುತ್ತಳತೆಯಲ್ಲ. ಅಲ್ಲಿ ವಾಸಿಸುವ ಜನರಿಂದಾಗಿ ದೇಶವಾಗುತ್ತದೆ. ಈ ಜನರೆ ಹಸಿವು ಬಡತನದಲ್ಲಿ ನರಳುತ್ತಿರುವಾಗ ದೇಶಿ ಅಗ್ನಿ, ಪೃಥ್ವಿ ಕ್ಷಿಪಣಿಗಳನ್ನು ತಯಾರಿಸುವುದರಲ್ಲಿ, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಖರೀದಿಸುವುದರಲ್ಲಿ ಅರ್ಥವಿದೆಯೆ? ಸ್ಥಳೀಯವಾಗಿ ತಯಾರಿಸಿರಲಿ, ಆಮದು ಮಾಡಿಕೊಂಡಿರಲಿ ಅವು ಮಾಡುವ ಕೆಲಸವೊಂದೇ - ಮನುಷ್ಯರನ್ನು ನಾಶಮಾಡುವುದು. ನಾಶವಾಗುವವರು ಪಾಕಿಸ್ತಾನದ ಅಥವಾ ಭಾರತದ ಆಳುವ, ಸಂತುಷ್ಟ ಜನರಲ್ಲ, ಬಡಜನತೆ. ಪಾಕಿಸ್ತಾನದೊಂದಿಗೆ ನಡೆದಿರುವ ಯುದ್ಧಗಳಲ್ಲಿ ಎರಡೂ ಕಡೆ ಒಬ್ಬನೆ ಒಬ್ಬ ರಾಜಕಾರಣಿ, ವಾಣಿಜೋದ್ಯಮಿ, ಆಡಳಿತಗಾರ, ಪಂಡಿತರು ಅಥವಾ ರಕ್ಷಣಾ ತಜ್ಞರೊ, ರಾಷ್ಟ್ರೀಯ ದಿನಪತ್ರಿಕೆಯ ಸಂಪಾದಕರೊ ಸತ್ತಿಲ್ಲ ದೇಶದ ಸುತ್ತಳತೆ ಮುಖ್ಯವಾಗಿದೆಯೇ ಹೊರತು ಆ ದೇಶದ ಜನತೆಯಲ್ಲ. ಸೋಗಲಾಡಿಗಳ ಸುಳ್ಳು ದೇಶಪ್ರೇಮದಿಂದಾಗಿ ಹೀನಾಯ ಬದುಕು ನಡೆಸುತ್ತಿರುವವರು, ಪ್ರಾಣ ಕಳೆದು ಕೊಳ್ಳುತ್ತಿರುವವರು ಬಡವರು.

ಆಧಾರ : ಜಸ್‌ವೀರ್‌ಸಿಂಗ್ ಅವರ ಕಿರು ಪುಸ್ತಿಕೆ
'In Whose defence'
ಕನ್ನಡಕ್ಕೆ : ಸರಸ್ವತಿ ದು.

ಜಾಗತಿಕ ಅಣ್ವಸ್ತ್ರೀಕರಣ ಮತ್ತು ದಕ್ಷಿಣ ಏಶಿಯಾದಲ್ಲಿ ಅದರ ಪರಿಣಾಮಗಳು

ನಿಶ್ಶಸ್ತ್ರೀಕರಣದ ಬಗ್ಗೆ ಬೊಬ್ಬೆ ಹೊಡೆಯುತ್ತ ಜಗತ್ತಿನಾದ್ಯಂತ ತನ್ನ ಹಿಡಿತವನ್ನು ಸಾಧಿಸಲು ಅಮೆರಿಕಾ ಮಾಡುತ್ತಿರುವ ಪ್ರಯತ್ನಗಳ ಅಪಾಯವನ್ನು ಕುರಿತು ತಮ್ಮ ಅಭಿಪ್ರಾಯವನ್ನು ಪ್ರಸಾದ್ ವೇಣುಗೋಪಾಲ್ ಅವರು ಮಾನಸದೊಂದಿಗೆ ಹಂಚಿಕೊಂಡಿದ್ದಾರೆ. ಅಣ್ವಸ್ತ್ರೀಕರಣದ ವಿರುದ್ಧದ ಹೋರಾಟವು ತೀವ್ರವಾಗುತ್ತಿರುವ ಸಂದರ್ಭದಲ್ಲಿ ಅಮೆರಿಕದ ಆಕ್ರಮಣಕಾರಿ ಮಿಲಿಟರಿ ಆಸಕ್ತಿಗಳನ್ನು ಗಮನಿಸುವುದು ಮುಖ್ಯವಾದ್ದರಿಂದ ಲೇಖನವನ್ನು ಪ್ರಕಟಿಸಿದ್ದೇವೆ. ಪ್ರಸಾದ್ ಅವರು ಡೆಟ್ರಾಯಿಟ್ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರೊಫೆಸರ್ ಆಗಿದ್ದಾರೆ. ಎಡಪಂಥೀಯ ವಿಚಾರಧಾರೆಯ ಬಗ್ಗೆ ಒಲವಿರುವ ಅವರು ಪ್ರಗತಿಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ.

ಲೇಖನ ಕುರಿತು ಪ್ರತಿಕ್ರಿಯೆಗಳನ್ನು ಮಾನಸ ನಿರೀಕ್ಷಿಸುತ್ತದೆ.



1998ರಲ್ಲಿ ಭಾರತ-ಪಾಕಿಸ್ತಾನ ಅಣ್ವಸ್ತ್ರ ಪರೀಕ್ಷೆ ನಡೆಸಿದ ನಂತರ ಭಾರತ-ಪಾಕಿಸ್ತಾನದ ನಡುವೆ ಅಣ್ವಸ್ತ್ರ ಪೈಪೋಟಿ ನಡೆಯಬಹುದು, ಅಣ್ವಸ್ತ್ರ ಯುದ್ಧವಾಗಬಹುದೆಂಬ ಅಪಾಯ ಕುರಿತಂತೆ ಜಗತ್ತಿನಾದ್ಯಂತ ಕಳವಳವೇರ್ಪಟ್ಟಿತು. ಎರಡೂ ದೇಶಗಳಲ್ಲಿ ಶಾಂತಿಗಾಗಿ ಹೋರಾಟ ನಡೆಸುತ್ತಿರುವವರು ಉಪ-ಖಂಡದಲ್ಲಿ ಹೆಚ್ಚುತ್ತಿರುವ ಮಿಲಿಟರೀಕರಣ ಕುರಿತಂತೆ ಚರ್ಚಿಸುವ, ಅರಿವು ಮೂಡಿಸುವ ಕೆಲಸಗಳನ್ನು ಮಾಡಿದರು. ಕೆಲವರು, ಭಾರತ ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ (CTBT)* ಮತ್ತು ಅಣ್ವಸ್ತ್ರ ಪ್ರಸರಣಾ ನಿಷೇಧ ಒಪ್ಪಂದ (NPT)* ಗಳಿಗೆ ಕೂಡಲೆ ಸಹಿಹಾಕಬೇಕೆಂದು ಸಲಹೆ ಮಾಡಿದರು ಮತ್ತು ಕೆಲವರು ಎರಡೂ ದೇಶಗಳಲ್ಲಿ ಆಗಬಹುದಾದ ಆಕಸ್ಮಿಕಗಳ ನಿಯಂತ್ರಣಕ್ಕೆ ಒತ್ತು ನೀಡಿದರು. ಇನ್ನೂ ಕೆಲವರು ಆಫ್ರಿಕಾ, ದ. ಅಮೆರಿಕ ಮತ್ತು ಮಧ್ಯ ಏಶಿಯಾ ದಲ್ಲಿ ಮಾಡಿದರೀತಿ ಹಿಂದೂ ಮಹಾಸಾಗರದ ವಲಯವನ್ನು ಅಣ್ವಸ್ತ್ರ ಮುಕ್ತವಲಯವನ್ನಾಗಿ ಘೋಷಿಸಬೇಕೆಂದು ಒತ್ತಾಯಿಸಿದರು.

ಇತ್ತೀಚಿನ ದಿನಗಳಲ್ಲಿ C.T.B.T.ಗೆ ಸಹಿಹಾಕಬೇಕೆನ್ನುವುದು ಹೆಚ್ಚಿನ ಗಮನ ಸೆಳೆಯುತ್ತಿದೆ, ಕಾರಣ ಭಾರತ-ಪಾಕಿಸ್ತಾನಗಳೆರಡೂ ಶೋಕಿಗಾಗಿ ಸಿ.ಟಿ.ಬಿ.ಟಿ.ಗೆ ಸಹಿ ಹಾಕುತ್ತೇವೆನ್ನುತ್ತಿರುವುದು. ಇದು ಸುಲಭ ಸಾಧ್ಯವಾಗಿಬಿಡಬಹುದೇನೋ ಎಂಬ ನಂಬಿಕೆ ಹುಟ್ಟಿಸಲಾಗಿದೆ. ಇದನ್ನು ಕುರಿತಂತೆ ಅಣ್ವಸ್ತ್ರ ವಿರೋಧಿ ಗುಂಪುಗಳು ಎಚ್ಚರಿಕೆಯಿಂದಿರಬೇಕು. ಯಾಕೆಂದರೆ ಅಣ್ವಸ್ತ್ರೀಕರಣಕ್ಕೆ ಸಂಬಂಧಿಸಿದ ಚರ್ಚೆಗಳು ಮತ್ತು ಅಣ್ವಸ್ತ್ರೀಕರಣವನ್ನು ವಿರೋಧಿಸುವ ಪ್ರಯತ್ನಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು ಏಶಿಯಾದಲ್ಲಿ ಬದಲಾಗುತ್ತಿರುವ ಅಣ್ವಸ್ತ್ರ ಮತ್ತು ಮಿಲಿಟರಿಕರಣದ ಸ್ಥಿತಿಯ ಚೌಕಟ್ಟಿನಲ್ಲಿ ನೋಡಿದಾಗ ಮಾತ್ರ. ಈ ಮಿಲಿಟರೀಕರಣದ ಹಿಂದೆ ಅಮೆರಿಕದ ಆರ್ಥಿಕ ಮತ್ತು ಮಿಲಿಟರಿ ಆಸಕ್ತಿಗಳು ಕೆಲಸ ಮಾಡುತ್ತಿವೆ. ಈ ಬದಲಾವಣೆಗಳು ಉಪಖಂಡದಲ್ಲಿ ಅಣ್ವಸ್ತ್ರ ಪ್ರಶ್ನೆಯನ್ನೇ ಬದಲಾಯಿಸಿ ಬಿಡಬಹುದು.

ಏಶಿಯಾದಲ್ಲಿ ಅಮೆರಿಕದ ಪ್ರಯತ್ನಗಳು ಅದರ ಮೂರು ಸಂಚುಗಳನ್ನು ತಿಳಿಸುತ್ತದೆ. 1. ದಕ್ಷಿಣ ಮತ್ತು ದಕ್ಷಿಣ ಪೂರ್ವ ಏಶಿಯಾದಲ್ಲಿ ಅಮೆರಿಕದ ಮಿಲಿಟರಿ ಅಧಿಪತ್ಯ ಸ್ಥಾಪಿಸುವುದು, 2. ನ್ಯಾಟೊದ (North atlantic treaty organisation - ಇದೊಂದು ಮಿಲಿಟರಿ ಒಕ್ಕೂಟವಾಗಿದ್ದು ಅಮೆರಿಕ, ಪಶ್ಚಿಮ ಯೂರೋಪಿನ ರಾಷ್ಟ್ರಗಳು ಮತ್ತು ಇತ್ತೀಚೆಗೆ ಪೂರ್ವ ಯೂರೋಪಿನ ಕೆಲ ರಾಷ್ಟ್ರಗಳನ್ನೊಳಗೊಂಡಿದೆ.) ಪಾತ್ರವನ್ನು ಆಕ್ರಮಣಕಾರಿ ನ್ಯೂಕ್ಲಿಯರ್ ಯೋಜನೆ ಮೂಲಕ ಹೆಚ್ಚಿಸುವುದು. 3. ಚೀನಾ ಮಿಲಿಟರಿ ಪ್ರಾಬಲ್ಯವನ್ನು ನಿಗ್ರಹಿಸುವುದು. ನ್ಯಾಟೋದ ಮುಖ್ಯ ಕಛೇರಿಗಳಿರುವ ವಾಶಿಂಗ್‌ಟನ್ ಮತ್ತು ಬ್ರಸಲ್ಸನಲ್ಲಿ ನ್ಯೂಕ್ಲಿಯರ್ ಪ್ರಶ್ನೆಗೆ ಸಂಬಂಧಿಸಿದಂತೆ ತೆಗೆದುಕೊಂಡ ನಿರ್ಧಾರಗಳು ಇದುವರೆಗಿನ ಎಲ್ಲಾ ಅಂತರರಾಷ್ಟ್ರೀಯ ಒಪ್ಪಂದಗಳನ್ನು (C.T.B.T., N.P.T.,* A.B.M.T. ಇತ್ಯಾದಿ) ನಿರ್ನಾಮ ಮಾಡುವಂತಿವೆ. ಅಲ್ಲದೆ ಇಡೀ ಏಶಿಯಾ ಖಂಡದಲ್ಲಿ ಶೀತಲ ಸಮರ ಹುಟ್ಟಿಹಾಕಿಬಿಡುತ್ತದೆ.

ನ್ಯಾಟೊ ಮತ್ತು ನ್ಯೂಕ್ಲಿಯರ್ ಪ್ರಶ್ನೆ

ಜಾಗತಿಕ ಮಟ್ಟದಲ್ಲಿರುವ ಒಂದೇ ಒಂದು ಮಿಲಿಟರಿ ಮೈತ್ರಿಕೂಟವಾಗಿರುವ ನ್ಯಾಟೊ ಇತ್ತೀಚಿನ ದಿನಗಳಲ್ಲಿ ಶೀಘ್ರವಾಗಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದೆ. ಸೋವಿಯತ್ ರಷ್ಯಾ ಮಂಚೂಣಿಯಲ್ಲಿದ್ದ ವಾರ್ಸಾ ಒಪ್ಪಂದಕ್ಕೆ ವಿರೋಧವಾಗಿ ನ್ಯಾಟೊ ಪ್ರಾರಂಭವಾಯ್ತು. ಯುಗೋಸ್ಲಾವಿಯ ವಿರುದ್ಧ ನಡೆದ ಯುದ್ಧವು ನ್ಯಾಟೊದ ನಿರ್ಧಾರವಾಗಿತ್ತು. ಈ ಯುದ್ಧವು ನ್ಯಾಟೊವನ್ನು ಪ್ರತಿರೋಧಿ ಮಿಲಿಟರಿ ಶಕ್ತಿಯನ್ನಾಗಿ ಪರಿವರ್ತಿಸಿತು. ರಷ್ಯಾವನ್ನು ಮಟ್ಟಹಾಕಲು ಪಶ್ಚಿಮ ಯೂರೋಪಿನಲ್ಲಿ ತನ್ನ ಸದಸ್ಯತ್ವ ಹೆಚ್ಚಿಸಿಕೊಂಡಿದ್ದಲ್ಲದೆ ಮಧ್ಯ ಏಶಿಯಾದಲ್ಲಿ ಶಾಂತಿಗಾಗಿ ಪಾಲುಗಾರಿಕೆ ಕಾರ್ಯಕ್ರಮವನ್ನು ನ್ಯಾಟೊ ಪ್ರಾರಂಭಿಸಿತು. ಈ ಯೋಜನೆಯಿಂದಾಗಿ ಮಧ್ಯ ಏಶಿಯಾದ ಕಜಾಕಿಸ್ತಾನ ಮತ್ತು ಉಜ್‌ಬೇಕಿಸ್ತಾನ ದೇಶಗಳು ರಷ್ಯಾದ ಅಣ್ವಸ್ತ್ರಗಳನ್ನು ಕೈಬಿಟ್ಟು ಅಮೆರಿಕ ಮತ್ತು ನ್ಯಾಟೋದ ರಕ್ಷಣಾ ಸಹಕಾರ ಒಪ್ಪಂದವನ್ನು ಒಪ್ಪಿಕೊಂಡವು. ಈ ಒಪ್ಪಂದವು ಶಸ್ತ್ರಾಸ್ತ್ರಗಳ ವರ್ಗಾವಣೆ, ತಂತ್ರಜ್ಞಾನ ಮತ್ತು ತರಬೇತಿಯನ್ನು ಒಳಗೊಂಡಿದೆ. ಜೊತೆ ಜೊತೆಯಲ್ಲೆ ಅಮೆರಿಕ ಮತ್ತು ನ್ಯಾಟೊದ ಆರ್ಥಿಕ ಮತ್ತು ಮಿಲಿಟರಿ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವುದಾಗಿದೆ. ಇತ್ತೀಚೆಗೆ ಕಜಾಕಿಸ್ತಾನದಲ್ಲಿ ನ್ಯಾಟೊದೊಂದಿಗೆ

---

* C.T.B.T. - Comprenensive test bam treaty.

* N.P.T. - Nuclear non-prolifiration treaty.

A.B.M.T. - Anti Ballistic Missile treaty (ಚಾಲನೆಗೊಂಡು ಬರುತ್ತಿರುವ ಕ್ಷಿಪಣಿಗಳನ್ನು ಹೊಡೆದುರುಳಿಸುವ ಕ್ಷಿಪಣಿಗಳ ನಿಷೇಧಿಸುವ ಒಪ್ಪಂದ)

ನಡೆದ ಎಂಟು ದೇಶಗಳ 'ಶಾಂತಿ ಸ್ಥಾಪನೆ' ಸಪ್ತಾಹದಲ್ಲಿ ಅಮೆರಿಕದ ಜನರಲ್ ಮತ್ತು 600 ಜನರ ಮಿಲಿಟರಿ ಪಡೆಯನ್ನು ನಾಟಕೀಯವಾಗಿ ಬರಮಾಡಿಕೊಳ್ಳಲಾಯಿತು. ಎರಡೂ ದೇಶಗಳು 1999 ಡಿಸೆಂಬರ್‌ನಲ್ಲಿ "ರಕ್ಷಣಾ ಸಹಕಾರ ಯೋಜನೆ -2000ಗೆ ಸಹಿ ಹಾಕಿದರು. ಈ ರೀತಿಯ ಯೋಜನೆ ಉಜ್‌ಬೇಕಿಸ್ತಾನ್, ಮಂಗೋಲಿಯಾ ಮತ್ತಿತರ ಗಣರಾಜ್ಯಗಳಲ್ಲಿ ಜಾರಿಗೆ ಬಂದು ಮಧ್ಯ ಏಶಿಯಾ ದಲ್ಲಿ ಅಮೆರಿಕ/ನ್ಯಾಟೊದ ಇರುವನ್ನು ಹೆಚ್ಚಿಸಿದೆ.

ನ್ಯಾಟೊ ತನ್ನ ಬದಲಾದ ನ್ಯೂಕ್ಲಿಯರ್ ನೀತಿಯ ಮೂಲಕ ಆಕ್ರಮಣಕಾರಿ ಮತ್ತು ವಿಸ್ತರಣವಾದಿ ಮಿಲಿಟರಿ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಒಂದು ತಂತ್ರವಾಗಿ 1991ರಲ್ಲಿ ನ್ಯೂಕ್ಲಿಯರ್ ನೀತಿಯನ್ನು ಪ್ರಾರಂಭಿಸಲಾಯ್ತು. ಮುಂದೆ 1996ರಲ್ಲಿ ಮತ್ತು 2000ದಲ್ಲಿ ತಿದ್ದುಪಡಿ ಮಾಡಲಾಯ್ತು. MC400/2 ಎಂದು ಕರೆಯಲಾಗುವ ಫೆಬ್ರವರಿ 2000ದಲ್ಲಿ ಮಾಡಿದ ತಿದ್ದುಪಡಿಯು, ಮೈತ್ರಿಕೂಟದ ವಲಯದಲ್ಲಿ ಶಾಂತಿ ಸಮಯದ ಅಣ್ವಸ್ತ್ರ ಪಡೆಯ ಸ್ಥಾಪನೆ ಮತ್ತು ನಿಗ್ರಹ, ಚಾಲನೆ ಮತ್ತು ಸಲಹೆ ವ್ಯವಸ್ಥೆಯನ್ನೊಳಗೊಂಡಿದೆ. ಅಣ್ವಸ್ತ್ರವಿಲ್ಲದಿರುವ ದೇಶಗಳೊಂದಿಗೆ ಮಾಡಿಕೊಂಡಿರುವ ಈ ಅಣ್ವಸ್ತ್ರ ಹಂಚಿಕೊಳ್ಳುವ ಒಪ್ಪಂದವು ಅಣ್ವಸ್ತ್ರ ಪ್ರಸರಣಾ ನಿಷೇಧ ಒಪ್ಪಂದದ (N.P.T). ಆರ್ಟಿಕಲ್ 1 ಮತ್ತು 2ರ ಉಲ್ಲಂಘನೆಯಾಗಿವೆ. ಆರ್ಟಿಕಲ್ 1 ಮತ್ತು 2 ಅಣ್ವಸ್ತ್ರ ರಾಷ್ಟ್ರಗಳು, ಅಣ್ವಸ್ತ್ರವಿಲ್ಲದ ರಾಷ್ಟ್ರಗಳಿಗೆ ಅಣ್ವಸ್ತ್ರ ತಂತ್ರಜ್ಞಾನ ಸಾಗಣೆ, ಅಣ್ವಸ್ತ್ರ ಹೂಡಿಕೆಯನ್ನು ನಿಷೇಧಿಸುತ್ತದೆ ಮತ್ತು ಅಣ್ವಸ್ತ್ರವಿಲ್ಲದ ರಾಷ್ಟ್ರಗಳು ಅಣ್ವಸ್ತ್ರ ತಂತ್ರಜ್ಞಾನ, ಹೂಡಿಕೆಯನ್ನು ತರಿಸಿಕೊಳ್ಳುವುದನ್ನು ನಿಷೇಧಿಸುತ್ತದೆ. ಈ ರೀತಿಯ ವ್ಯವಸ್ಥೆಯು ದಕ್ಷಿಣ ಏಶಿಯಾದಲ್ಲಿನ ನ್ಯಾಟೋದ ಇತರ ಸದಸ್ಯ ರಾಷ್ಟ್ರಗಳಿಗೂ ವಿಸ್ತಾರಗೊಂಡರೆ ಇಡೀ ವಲಯವೇ ಅತಂತ್ರಗೊಳ್ಳಬಹುದು.

ಈ ವರ್ಷ ಡಿಸೆಂಬರ್‌ನಲ್ಲಿ ನಡೆಯಲಿರುವ ನ್ಯಾಟೊದ ಸಭೆಯಲ್ಲಿ Mc400, 2ಚರ್ಚೆಯಾಗಲಿದ್ದು, ಅಲ್ಲಿ ಅಣ್ವಸ್ತ್ರಗಳ್ನು ತಯಾರಿಸಬಹುದೆಂಬ ಅನುಮಾನವಿರುವ ರಾಷ್ಟ್ರಗಳ ವಿರುದ್ಧ ಅಣ್ವಸ್ತ್ರಗಳನ್ನು ಗುರಿಯಾಗಿಡುವುದರ ಬಗ್ಗೆ ನಿರ್ಧಾರವಾಗಲಿದೆ. ಇದರ ಜೊತೆಗೆ ಅಣ್ವಸ್ತ್ರ ಯುದ್ಧದಲ್ಲಿ ಮೊದಲಿಗೆ ಅಣ್ವಸ್ತ್ರ ಪ್ರಯೋಗಿಸಬಾರದೆನ್ನುವ ನೀತಿಯನ್ನು ನ್ಯಾಟೊ ವಿರೋಧಿಸುವುದು ಅತ್ಯಂತ ಅಪಾಯಕಾರಿಯಾಗಿದೆ. ಇದು ಅಣ್ವಸ್ತ್ರಗಳಿಲ್ಲದ ಕದನದಲ್ಲೂ ಅಣ್ವಸ್ತ್ರ ಉಪಯೋಗಿಸುವ ಅಪಾಯಕಾರಿ ಸಾಧ್ಯತೆಯನ್ನು ಸೂಚಿಸುತ್ತದೆ. ಇವೆಲ್ಲವೂ ನ್ಯಾಟೊದ ನ್ಯೂಕ್ಲಿಯರ್ ನೀತಿಯೂ ಅಮೆರಿಕದ ನ್ಯೂಕ್ಲಿಯರ್ ತಂತ್ರಕ್ಕೆ ಪೂರಕವಾಗಿರುವುದನ್ನು ತಿಳಿಸುತ್ತದೆ.

ಏಪ್ರಿಲ್ ತಿಂಗಳಿನಲ್ಲಿ N.P.Tಯ ಪುನರಾವಲೋಕನ ಸಮಾವೇಶದಲ್ಲಿ ಜಾಗತೀಕ ಅಣ್ವಸ್ತ್ರ ನಿಶ್ಯಸ್ತ್ರೀಕರಣ ಕುರಿತಂತೆ ಕಾಲಾವಧಿಯನ್ನು ನಿರ್ಧರಿಸುವುದು ಸಾಧ್ಯವಾಗಲಿಲ್ಲ. ಹಾಗಾಗಿ N.P.Tಯ ಆರ್ಟಿಕಲ್ 6ನ್ನು ಎಲ್ಲಾ ದೊಡ್ಡ ಅಣ್ವಸ್ತ್ರ ಶಕ್ತಿಗಳು ಮುರಿಯುವುದು ಮುಂದುವರೆಯುತ್ತಿದೆ. ಆರ್ಟಿಕಲ್ 6 ನಿಧಾನವಾಗಿ ನಿಗದಿತ ಸಮಯದೊಳಗೆ ನಿಶ್ಯಸ್ತ್ರೀಕರಣವಾಗ ಬೇಕೆಂಬುದನ್ನು ಹೇಳುತ್ತದೆ. C.T.B.T.ಯನ್ನು ಪ್ರಮಾಣಿ ಕರಿಸುವುದನ್ನು ವಿರೋಧಿಸುವ ಮೂಲಕ ಅಮೆರಿಕ ಆ ಒಪ್ಪಂದಕ್ಕೂ ವಿಪತ್ತು ತಂದಿದೆ. ಒಟ್ಟಾರೆ ಈ ಎಲ್ಲಾ ಬೆಳವಣಿಗೆಗಳು ಜಗತ್ತಿನಾದ್ಯಂತದ ನಿಶ್ಯಸ್ತ್ರೀಕರಣ ಪ್ರಯತ್ನಕ್ಕೆ ಅಡ್ಡಿಯಾಗಿದೆ. ಇದರ ಪರಿಣಾಮ ಅಪಾಯಕಾರಿ.

ಎದುರಾಳಿ ಚೈನಾ

ಇತ್ತೀಚಿನ ವರ್ಷಗಳಲ್ಲಿ ಚೈನಾ ಅಮೆರಿಕ ಸಂಬಂಧ ಏರಿಳಿತ ಕಂಡಿದೆ. ತೀವ್ರತರ ರಾಜಕೀಯ ಭಿನ್ನಾಭಿಪ್ರಾಯಗಳ ಜೊತೆಗೆ ಎರಡು ದೇಶಗಳಲ್ಲಿರುವ ಗಂಡಾಂತರಕಾರಿಯಾದ ವಿಷಯವೆಂದರೆ ಸಂಕೀರ್ಣವಾದ ಕ್ಷಿಪಣಿ ತಂತ್ರಜ್ಞಾನ ಮತ್ತು ಶತ್ರು ಕ್ಷಿಪಣಿಯನ್ನು ಹಾರುತ್ತಿರುವಾಗಲೆ ಹೊಡೆದುರುಳಿಸುವ ವಿಧಾನಗಳು. ಎರಡೂ ದೇಶಗಳು ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆ (Missile technology Control Regime) ಯನ್ನು ಉಲ್ಲಂಘಿಸಿವೆಯಾದರೂ ಭಾರತ ಹೆಚ್ಚಿನ ಒತ್ತು ನೀಡಿದ್ದು ಚೈನಾ, ಪಾಕಿಸ್ತಾನಕ್ಕೆ ಕ್ಷಿಪಣಿಗಳನ್ನು ಮಾರಾಟ ಮಾಡಿದ್ದನ್ನು.

ಅಮೆರಿಕ 10 ಬಿಲಿಯನ್ ಡಾಲರ್‌ಗಳನ್ನು ಕ್ಷಿಪಣಿಗಳನ್ನು ಹೊಡೆದುರುಳಿಸುವ ತಂತ್ರಕ್ಕೆ (Anti missile defence) ಖರ್ಚು ಮಾಡುತ್ತಿವೆ. ಈ ವ್ಯವಸ್ಥೆಯನ್ನು ಥಿಯೇಟರ್ ಮಿಸೈಲ್ ಡಿಫೆನ್ಸ್ (TMD) ಎಂದು ಕರೆಯ ಲಾಗಿದೆ. ಅಮೆರಿಕದ ಪ್ರಾಂತ್ಯದೊಳಗೆ ನಡೆಸಲಾಗುತ್ತಿರುವ ಇದನ್ನು 2005ರ ಹೊತ್ತಿಗೆ ಜಪಾನ್, ದ.ಕೊರಿಯಾ, ತೈವಾನ್ ಮತ್ತಿತರ ದಕ್ಷಿಣ ಪೂರ್ವ ರಾಷ್ಟ್ರಗಳಿಗೆ ಮಾರಾಟ ಮಾಡುವ ಯೋಜನೆಯಿದೆ. 3000 ಕಿ.ಮಿ. ರೇಡಿಯಸ್ (Radius)ನೊಳಗೆ ಶತ್ರು ಕ್ಷಿಪಣಿಗಳನ್ನು ಹಾರುತ್ತಿರುವಾಗಲೆ ಹೊಡೆದುರುಳಿಸುವ ವಿಧಾನವನ್ನು ಕಂಡು ಹಿಡಿಯುವುದು T.M.D. ವ್ಯವಸ್ಥೆಯ ಉದ್ದೇಶವಾಗಿದೆ. ಈ ವ್ಯವಸ್ಥೆಗೆ ಸಂಬಂಧಪಟ್ಟ ಸಂಶೋಧನೆಗೆ ಪರಸ್ಪರ ಸಹಕಾರ ನೀಡುವ ಒಪ್ಪಂದವನ್ನು ಅಮೆರಿಕ ಮತ್ತು ಜಪಾನ್ ಮಾಡಿಕೊಂಡಿದೆ. ಇದಕ್ಕಾಗಿ ಜಪಾನ್ 20-30 ಬಿಲಿಯನ್ ಯೆನ್ ಖರ್ಚು ಮಾಡಲಿದೆ. ಅಮೆರಿಕಾದ ಯುದ್ಧಕ್ಕೆ ಜಪಾನನ್ನು ಎಳೆಯುವ ಅಪಾಯಕಾರಿ ನಡೆ ಇದೆಂದು ಜಪಾನ್ ಕಮ್ಯುನಿಸ್ಟ್ ಪಕ್ಷದ ನಾಯಕರು ಹೇಳಿದ್ದಾರೆ. ಚೈನಾ ಕೂಡ T.M.D. ವ್ಯವಸ್ಥೆಯನ್ನು ತೈವಾನಿಗೆ ಮಾರಾಟ ಮಾಡುವುದು ಜಗತ್ತಿನ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಹಾಳುಗೆಡವಿ ಹೊಸಶೀತಲ ಸಮರಕ್ಕೆ ದಾರಿಯಾಗುವುದೆಂದು ಹೇಳಿದೆ.

ಅಮೆರಿಕದ ಮಿಲಿಟರಿ ಚಟುವಟಿಕೆ ಮತ್ತು ಶಸ್ತ್ರಾಸ್ತ್ರ ಮಾರಾಟವು ಅಪಾಯಕಾರಿ ಸ್ಥಿತಿಯನ್ನು ಹೆಚ್ಚಿಸುತ್ತಿದೆ. ಅಮೆರಿಕದ ಯೋಜನೆಗಳನ್ನು ಕುರಿತು ಹೇಳುತ್ತಾ ಅಮೆರಿಕದ ರಕ್ಷಣಾ ಇಲಾಖೆಯ ವಕ್ತಾರ "ಇಡೀ ದಕ್ಷಿಣ ಪೂರ್ವ ಏಶಿಯಾದ ಮಿಲಿಟರಿಯೊಂದಿಗಿನ ಸಂಬಂಧ ಹೆಚ್ಚುವುದು" ಎಂಬ ಹೇಳಿಕೆ ನೀಡಿದ್ದಾರೆ. ಸಿಂಗಪೂರ್, ಇಂಡೋನೇಶಿಯಾ, ಜಪಾನ್, ತೈವಾನ್ ಮತ್ತು ಭಾರತ, ಹಿಂದೂ ಮಹಾಸಾಗರದಲ್ಲಿ ಮತ್ತು ದಕ್ಷಿಣ ಚೈನಾ ಸಮುದ್ರದಲ್ಲಿ ಅಮೆರಿಕದ ನೌಕಪಡೆಯೊಂದಿಗಿನ ಜಂಟಿ ನೌಕಾ ಪ್ರಯೋಗಕ್ಕೆ ಸಹಕರಿಸಿವೆ. 1998ರಲ್ಲಿ ಅಮೆರಿಕಾ 25 ಮಿಲಿಯನ್ ಡಾಲರ್‌ನಷ್ಟು ಕ್ಷಿಪಣಿಗಳನ್ನು ತೈಲೆಂಡ್ ಮತ್ತು ಜಪಾನಿಗೆ ಮಾರಿದೆ. ಅಮೆರಿಕದಿಂದ ಹೆಚ್ಚು ಶಸ್ತ್ರಾಸ್ತ್ರ ಆಮದು ಮಾಡಿಕೊಳ್ಳುವ ದೇಶಗಳಲ್ಲಿ ತೈವಾನ್ ಒಂದು. ಶಸ್ತ್ರಾಸ್ತ್ರ ಮಾರಾಟದಲ್ಲಿ ಅಮೆರಿಕ ಮುಂದಿದೆ.

ಅಮೆರಿಕದ ರಾಷ್ಟ್ರೀಯ ಕ್ಷಿಪಣಿ ರಕ್ಷಣಾ ಯೋಜನೆ (National Missle Defense)ಯನ್ನು ರಷ್ಯಾ ಮತ್ತು ಚೈನಾ ವಿರೋಧಿಸಿವೆ. ಎರಡೂ ದೇಶಗಳು ಜಂಟಿಯಾಗಿ ಮಾರ್ಚಿ ತಿಂಗಳಿನಲ್ಲಿ ಹೇಳಿಕೆ ನೀಡಿವೆ. ಅಮೆರಿಕಾದ ಅಲಾಸ್ಕ ಮತ್ತು ಹವಾಯಿಯಲ್ಲಿ ಕ್ಷಿಪಣಿಗಳನ್ನು ಹೊಡೆದುರುಳಿಸುವ ವ್ಯವಸ್ಥೆಯನ್ನು ಮಾಡುತ್ತಿರುವುದು ಭದ್ರತೆ ಮತ್ತು ದೃಢತೆಗೆ ಧಕ್ಕೆ ತರುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಇತ್ತೀಚಿನ ಪರೀಕ್ಷೆಗಳು ವಿಫಲವಾಗಿರುವುದು NMDಯನ್ನು ವಿರೋಧಿಸುವಂತರಿಗೆ ಉಸಿರಾಡುವಂತೆ ಮಾಡಿದೆ. N.M.D. ವ್ಯವಸ್ಥೆಯ ಅಳವಡಿಕೆಯಾದಲ್ಲಿ 1972ರಲ್ಲಿ ಅಮೆರಿಕ ಮತ್ತು ರಷ್ಯಾ ಸಹಿ ಮಾಡಿರುವ ABMT ಒಪ್ಪಂದವನ್ನು ರದ್ದು ಪಡಿಸುತ್ತದೆ.

ದಕ್ಷಿಣ ಏಶಿಯಾದಲ್ಲಿನ ಪರಿಣಾಮಗಳು

ಮೇಲೆ ಚರ್ಚಿಸಲಾಗಿರುವ ವಿಷಯಗಳು ಅಮೆರಿಕ - ನ್ಯಾಟೊ ನೀತಿಯು ಈಗಿರುವ ಅಣ್ವಸ್ತ್ರ ಮತ್ತು ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣಗಳನ್ನು ಮುರಿಯುವುದಲ್ಲದೆ ದಕ್ಷಿಣ ಮತ್ತು ದಕ್ಷಿಣ ಪೂರ್ವ ಏಶಿಯಾದಲ್ಲಿ ಚೈನಾ ವಿರೋಧಿ ಕೂಟವನ್ನು ಸ್ಥಾಪಿಸುವುದನ್ನು ಸ್ಪಷ್ಟ ಪಡಿಸುತ್ತವೆ. ಇದು ಯಾವುದೇ ಅಣ್ವಸ್ತ್ರ ಸಂಬಂಧಿ ಚರ್ಚೆಗೆ ಮತ್ತು ಭಾರತ, ಪಾಕಿಸ್ತಾನದಲ್ಲಿ ಹೆಚ್ಚುತ್ತಿರುವ ಅಣ್ವಸ್ತ್ರೀಕರಣದ ಮೇಲೆ ಪರಿಣಾಮ ಬೀರುತ್ತವೆ. ಭಾರತದ ಅಣ್ವಸ್ತ್ರ ಕಾರ್ಯಕ್ರಮವು ಚೈನಾ ವಿರುದ್ಧ ಭಾರತ-ಅಮೆರಿಕ ಮೈತ್ರಿಯ ಭಾಗವಾಗಿದೆ ಎಂಬುದು ಅಜಸ್ ಅಹ್ಮದ್ ಮತ್ತು ಇನ್ನೂ ಅನೇಕ ಲೇಖಕರ ಅಭಿಪ್ರಾಯವಾಗಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಶಾಂತಿ ಮತ್ತು ನಿಶ್ಶಸ್ತ್ರೀಕರಣ ಹೋರಾಟಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

C.T.B.T ಒಪ್ಪಂದವೆ ಮುರಿದು ಬೀಳುವ ಅಪಾಯವಿರುವಾಗ ಸಹಿ ಹಾಕಬೇಕೆಂಬ ಪ್ರಶ್ನೆ ಇತ್ಯರ್ಥವಾಗದು. ಬೇರೆ ಆಯ್ಕೆಗಳ ಬಗ್ಗೆಯೂ ಅಂತರರಾಷ್ಟ್ರೀಯ ಮಟ್ಟದಲ್ಲಷ್ಟೆ ಅಲ್ಲದೆ ಪ್ರಾಂತೀಯ ದೃಷ್ಟಿಕೋನದಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ. ಉದಾಹರಣೆಗೆ ಭಾರತದ ರಕ್ಷಣಾ ವೆಚ್ಚ ಅರ್ಧದಷ್ಟು ಕಡಿಮೆ ಮಾಡಲು ಒತ್ತಾಯಿಸಬೇಕು. ಇದೆ ಪ್ರಯತ್ನವನ್ನು ಪಾಕಿಸ್ತಾನದಲ್ಲೂ ಮಾಡಲು ಒತ್ತಾಯಿಸಬೇಕು. ಅಣ್ವಸ್ತ್ರಗಳಲ್ಲದೆ, ಕ್ಷಿಪಣಿ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲಾ ಸಂಶೋಧನೆಗಳನ್ನು ನಿಲ್ಲಿಸಬೇಕು. ಗಡಿ ಸಂಬಂಧಿ ವಿಷಯಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸುವುದನ್ನು ಪ್ರೋತ್ಸಾಹಿಸ ಬೇಕು. ಚೈನಾ, ಪಾಕಿಸ್ತಾನ ಗಡಿಭದ್ರತಾ ಪಡೆಗಳನ್ನು ಕಡಿಮೆ ಗೊಳಿಸಬೇಕು. ಇದಲ್ಲದೆ ಅಣ್ವಸ್ತ್ರ ಮುಕ್ತವಲಯ ಸ್ಥಾಪನೆ, ಹಿಂದು ಮಹಾಸಾಗರದಲ್ಲಿ ಮತ್ತು ದ. ಚೈನಾ ಸಮುದ್ರದಲ್ಲಿ ಶಾಂತಿವಲಯ ಸ್ಥಾಪನೆಗೆ ಒತ್ತಾಯಿಸುವುದು ಬಹುಮುಖ್ಯ. ಇವು ಯಶಸ್ವಿಯಾದಲ್ಲಿ ಶಾಂತಿ ಮತ್ತು ದೃಢತೆಯನ್ನು ಕಾಯ್ದುಕೊಳ್ಳುವುದು ಸರಳವಾಗುತ್ತದೆ ಮತ್ತು ಏಶಿಯಾದಲ್ಲಿ ಅಮೆರಿಕಾ - ನ್ಯಾಟೊದ ಮಿಲಿಟರಿ ಪ್ರಾಬಲ್ಯದ ಮಹತ್ವಾಕಾಂಕ್ಷೆಯನ್ನು ಮುರಿಯಬಹುದು. ಅಂತರರಾಷ್ಟ್ರೀಯ ಒಪ್ಪಂದ ಅಥವಾ ಜಾಗತೀಕ ನಿಶ್ಶಸ್ತ್ರೀಕರಣದ ಪ್ರಯತ್ನಗಳನ್ನಷ್ಟೆ ಸಂಪೂರ್ಣವಾಗಿ ನಂಬಿಕೊಳ್ಳುವುದರಿಂದ ಏಶಿಯಾದಲ್ಲಿ ಹೆಚ್ಚುತ್ತಿರುವ ಮಿಲಿಟರೀಕರಣ, ಅದೃಢತೆಯನ್ನು ತಡೆಯಲು ಸಾಧ್ಯವಿಲ್ಲ.

●

ಈ ಸಂಚಿಕೆ ಪ್ರಕಟಿಸಲು ಧನ ಸಹಾಯ ಮಾಡಿದ ಪ್ರಸಾದ್ ವೇಣುಗೋಪಾಲ್, ಮಾಯಾ ಯಾಜ್ಞಿಕ್, ಬಾನು ದಾಸ್, ಸಂಜಯ್ ಬಿಶ್ವಾಸ್, ಕಾಮ್ರೇಡ್ ಬಾಲಕೃಷ್ಣ, ವಿಶ್ವಂಭರ ಪತಿಯವರುಗಳನ್ನು ಮತ್ತು ಈ ಸಂಚಿಕೆ ಚಿತ್ರಗಳನ್ನು ಬರೆದುಕೊಟ್ಟ, ಮತ್ತು ಒದಗಿಸಿದ ವಿಶ್ವಂಭರ ಪತಿ, ಶಶಿ ಹಾಗು ಅಣುಶಕ್ತಿ ಪತ್ರಿಕೆ, ಹ್ಯಾಂಡ್ ಬುಕ್ ಫಾರ್ ವಿಮೆನ್ ಆನ್ ನ್ಯೂಕ್ಲಿಯರ್ ಮೆಂಟಾಲಿಟಿಯವರನ್ನು, ಕಂಫರ್ಟ್ ವುಮೆನ್ ಕುರಿತ ಮಾಹಿತಿ ಒದಗಿಸಿದ ವಿಮೋಚನಾ ವೇದಿಕೆಯವರನ್ನು ಮಾನಸ ಕೃತಜ್ಞತೆಯಿಂದ ನೆನೆಯುತ್ತದೆ.

ಅಣ್ವಸ್ತ್ರ ವಿರೋಧಿ ವೇದಿಕೆ - ಬೆಂಗಳೂರು

1998ರ ಮೇ ನಲ್ಲಿ ಭಾರತ ಸರ್ಕಾರ ನಡೆಸಿದ ಪರೀಕ್ಷಾರ್ಥ ಅಣ್ವಸ್ತ್ರ ಸ್ಫೋಟಗಳನ್ನು ವಿರೋಧಿಸಿ ದೇಶಾದ್ಯಂತ ಹಲವಾರು ಪ್ರತಿಭಟನೆಗಳು ನಡೆದವು. ಸರ್ವನಾಶಕಾರಿ ಬಾಂಬ್‌ಗಳನ್ನು ಭದ್ರತೆಗೆ ಮತ್ತು ಬೆದರಿಕೆ ತಂತ್ರವಾಗಿ ಉಪಯೋಗಿಸುತ್ತಿರುವುದಾಗಿ ಸರ್ಕಾರ ಸಮರ್ಥಿಸಿಕೊಂಡಿತು. ಪೋಕ್ರಾನ್‌ನಲ್ಲಿ ನಡೆಸಿದ ಸ್ಫೋಟದ ನಂತರ ನಡೆದ ಕಾರ್ಗಿಲ್ ಯುದ್ಧ, ರಕ್ಷಣಾ ವೆಚ್ಚದ ಹೆಚ್ಚಳ, ಜಾರಿಗೆ ತರುತ್ತಿರುವ ನ್ಯೂಕಿಯರ್ ಕರಡು ಇವೆಲ್ಲವೂ ಆಘಾತಕಾರಿ ಬೆಳವಣಿಗೆಗಳಾಗಿವೆ. ಈ ಸಂದರ್ಭದಲ್ಲಿ ದೇಶಾದ್ಯಂತ ನಡೆದ ಅಣ್ವಸ್ತ್ರ ವಿರೋಧಿ ಚಳುವಳಿಯ Network ಅನ್ನು ಬೆಳಸಿ ರಾಷ್ಟ್ರೀಯ ಮಟ್ಟದ ವೇದಿಕೆಯನ್ನು ಕಟ್ಟುವ ಅಗತ್ಯ ಕಂಡು ಬಂತು. ಆ ಹಿನ್ನೆಲೆಯಲ್ಲಿ ಅಣ್ವಸ್ತ್ರೀಕರಣ ವಿರೋಧಿ ವೇದಿಕೆ, ಬೆಂಗಳೂರು ಪ್ರಾರಂಭವಾಯಿತು. ವೇದಿಕೆಯು ವ್ಯಕ್ತಿಗಳು, ಮಹಿಳಾ ಗುಂಪುಗಳು, ವಿಜ್ಞಾನ ಗುಂಪುಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇನ್ನಿತರ ಪ್ರಗತಿಪರ, ಜನಪರ ಗುಂಪುಗಳನ್ನೊಳಗೊಂಡಿದೆ. ವೇದಿಕೆಯು ಮೇ 24ರಂದು ನಡೆದ ಪತ್ರಿಕಾ ಗೋಷ್ಠಿಯ ಸಂದರ್ಭದಲ್ಲಿ ಔಪಚಾರಿಕವಾಗಿ ಪ್ರಾರಂಭವಾಯಿತು. ಜೂನ್ 10ರಂದು ಸಾರ್ವಜನಿಕ ಸಭೆಯನ್ನು ಕರೆಯಲಾಗಿತ್ತು. ಆ ಸಭೆಯಲ್ಲಿ ವೇದಿಕೆಯು ತನ್ನ ಮುಂದಿನ ಕಾರ್ಯಕ್ರಮಗಳನ್ನು ಪ್ರಕಟಿಸಿ ಆ ದಿನವೇ ಸಹಿ ಸಂಗ್ರಹಣಾ ಆಂದೋಲನವನ್ನು ಪ್ರಾರಂಭಿಸಿತು. ಅಣ್ವಸ್ತ್ರ ಕಾರ್ಯಕ್ರಮಗಳನ್ನು ಸರ್ಕಾರಗಳು ಸಂಪೂರ್ಣವಾಗಿ ಕೈಬಿಡಬೇಕೆನ್ನುವ ಉದ್ದೇಶವನ್ನು ಹೊಂದಿರುವ ವೇದಿಕೆಯು ಆ ನಿಟ್ಟಿನಲ್ಲಿ ಒತ್ತಡ ತರಲು ಜನಾಭಿಪ್ರಾಯಗಳನ್ನು ಒಟ್ಟುಮಾಡಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

* ಹಳ್ಳಿ ಮತ್ತು ನಗರಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕ ಸಂಘಟನೆಗಳು, ಮಹಿಳಾ, ದಲಿತ ಮತ್ತು ಇತರೆ ಜನಪರ ಸಂಘಟನೆಗಳೊಂದಿಗೆ ವಿಷಯ ಕುರಿತು ಸಂವಾದ ಏರ್ಪಡಿಸುವುದು.
* ಕನ್ನಡ ಮತ್ತು ಇಂಗ್ಲೀಷಿನಲ್ಲಿ ಆಡಿಯೋ-ವಿಶುವಲ್ (ದೃಶ್ಯ-ಶ್ರವ್ಯ) ಮತ್ತು ಮುದ್ರಿತ ಸಾಮಗ್ರಿಗಳನ್ನು ಸಿದ್ಧಪಡಿಸುವುದು.
* ಸಾರ್ವಜನಿಕ ಸಭೆ, ರ‍್ಯಾಲಿ, ಬೀದಿನಾಟಕ, ವಸ್ತುಪ್ರದರ್ಶನ, ಸ್ಲೈಡ್‌ಶೋ ಮತ್ತು ಫಿಲ್ಮ್‌ಶೋ -ಇವುಗಳ ಮೂಲಕ ಮಾಹಿತಿ ಪ್ರಸರಣ ಮಾಡುವುದು.

ವೇದಿಕೆಯ ನಂಬಿಕೆಗಳು

* ಭಾರತ ಅಣ್ವಸ್ತ್ರ ದೇಶವಾಗಕೂಡದು.
* ಭಾರತದ ಅಣ್ವಸ್ತ್ರ ಕಾರ್ಯಕ್ರಮಗಳು ಸಂಪೂರ್ಣವಾಗಿ ನಿಲ್ಲಬೇಕು.
* ನೆರೆಹೊರೆಯ ದೇಶಗಳೊಂದಿಗೆ ಸೌಹಾರ್ದಯುತ ಸಂಬಂಧಕ್ಕೆ ಪ್ರಯತ್ನಿಸಬೇಕು.
* ಅಣುಶಕ್ತಿ ಕಾಯ್ದೆಯನ್ನು ನಿಷೇಧಿಸಿ, ಅಣುಸಂಬಂಧಿ ಮಾಹಿತಿಯನ್ನು ಜನತೆಯೊಂದಿಗೆ ಹಂಚಿಕೊಳ್ಳಬೇಕು.
* ರಕ್ಷಣಾ ವೆಚ್ಚವನ್ನು ಕಡಿತಗೊಳಿಸಿ ಅಗತ್ಯವಿರುವ ಪ್ರಾಥಮಿಕ ಶಿಕ್ಷಣ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಕ್ಷೇತ್ರಕ್ಕೆ ಮಾಡುವ ವೆಚ್ಚವನ್ನು ಹೆಚ್ಚಿಸಬೇಕು.
* ಜಾಗತೀಕ ಮಟ್ಟದ ಅಣ್ವಸ್ತ್ರ ನಿಷೇಧ ಮತ್ತು ಶಾಂತಿ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕು.

ಈ ಮೇಲಿನ ನಂಬಿಕೆಗಳನ್ನು ಒಪ್ಪಿಕೊಳ್ಳುವ ಯಾವುದೇ ವ್ಯಕ್ತಿ (ಜಾತಿ, ಜನಾಂಗ, ಲಿಂಗ, ವಯಸ್ಸು, ಲೈಂಗಿಕತೆ ಅಂಗವಿಕಲತೆ ಭೇದವಿಲ್ಲದೆ)ಯೂ ವೇದಿಕೆಗೆ ಬರಬಹುದು.


ರಾಷ್ಟ್ರೀಯ ಮಟ್ಟದಲ್ಲಿ ಅಣ್ವಸ್ತ್ರ ವಿರೋಧಿ ವೇದಿಕೆಯನ್ನು ಕಟ್ಟುವ ಪ್ರಯತ್ನವಾಗಿ ದೆಹಲಿಯಲ್ಲಿ ನವೆಂಬರ್ 11 ರಿಂದ 13ರವರೆಗೆ ರಾಷ್ಟ್ರೀಯ ಸಮಾವೇಶವನ್ನು ನಡೆಸಲಾಗುತ್ತಿದೆ. ಮೂರು ದಿನಗಳ ಸಮಾವೇಶದಲ್ಲಿ ಅಣ್ವಸ್ತ್ರ ನಿಷೇಧದ ನೈತಿಕ, ರಾಜಕೀಯ ಮತ್ತು ಕಾನೂನಿನ ಆಯಾಮಗಳು, ದಕ್ಷಿಣ ಏಶಿಯಾದಲ್ಲಿನ ನ್ಯೂಕ್ಲಿಯರ್ ಅಪಾಯ, ಅಣ್ವಸ್ತ್ರಗಳ ಸಾಮಾಜಿಕ, ಆರ್ಥಿಕ, ರಾಜಕೀಯ ವೆಚ್ಚ, ಅಣುಶಕ್ತಿ ಮತ್ತು ಅಣ್ವಸ್ತ್ರಗಳು, ಕೋಮುವಾದ, ಸೆಕ್ಯೇರಿಯನ್ ಪಾಲಿಟಿಕ್ಸ್ ಮತ್ತು ನ್ಯೂಕ್ಲಿಯರಿಸಂ, ಮಹಿಳೆ ಮತ್ತು ಮಿಲಿಟರಿ ಮೌಲ್ಯಗಳು, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಣ್ವಸ್ತ್ರ ಮತ್ತು ನೈತಿಕತೆ ಮತ್ತು ಇನ್ನಿತರ ಸಂಬಂಧಪಟ್ಟ ವಿಷಯಗಳನ್ನು ಕುರಿತು ಚರ್ಚೆಯಾಗಲಿದೆ. ಮತ್ತು ರಾಷ್ಟ್ರೀಯ ಸಮನ್ವಯ ಸಮಿತಿಯನ್ನು ಚುನಾಯಿಸಲಾಗುವುದು. ಮುಂದೆ ಹಮ್ಮಿಕೊಳ್ಳಬೇಕಾಗಿರುವ ಕಾರ್ಯಕ್ರಮಗಳನ್ನು ನಿರ್ಧರಿಸಲಾಗುವುದು.

●

ಶಸ್ತ್ರ ಶ್ರೇಷ್ಠವಲ್ಲ, ಜೀವ ಶ್ರೇಷ್ಠ, ಯುದ್ಧ ಬೇಡ ಬುದ್ಧ ಸಾಲಿ

ನೀವೆಲ್ಲ ಶಾಲೆಗೆ ಹೊರಟಿದ್ದ ಚಂದದ ಹುಡುಗಿಯರೆ?

ಓ ಹುಡುಗಿಯರೇ
ಕಣ್ಣೀರು ಜಿನುಗಿ ಬರಲು ತಾಣವೇ ಇಲ್ಲ ಅಳುತ್ತೀರ
ಪದಗಳನಾಡಲು ತುಟಿಯೇ ಇಲ್ಲ ಅರಚುತ್ತೀರ
ಬೆರಳುಗಳ ಮೇಲೆ ತೊಗಲೇ ಇಲ್ಲ ತಡಕಾಡುತ್ತೀರ



ಓ ಹುಡುಗಿಯರೇ
ರಕ್ತ ಜಿನುಗುವ, ಜಿಗುಟು ಬೆವರು, ಕೀವಿನ
ನಿಮ್ಮ ಅಂಗಾಂಗದೊಳಗೆಂತದೊ ನಡುಕ
ಊದಿ ಬಿರುಕು ಬಿಟ್ಟ, ಕಣ್ಣೊಳಗೆ ಮಿಂಚು
ಉಬ್ಬರಿಸಿದ ಹೊಟ್ಟೆ, ಹಿಡಿದುಕೊಂಡಿರುವುದು
ಕಾಚಾದ ಎಲಾಸ್ಟಿಕ್ ಮಾತ್ರ
ಗುಪ್ತಾಂಗವೆಲ್ಲ ಬಯಲು, ನೀವು ನಾಚಿಕೆಯಾಚೆ
ಈಗ ಸ್ವಲ್ಪ ಸಮಯದ ಹಿಂದೆ
ನೀವೆಲ್ಲ ಶಾಲೆಗೆ ಹೊರಟ ಚಂದದ ಹುಡುಗಿಯರು
ಹಿರೋಶಿಮಾದ ಉರಿಸಿದ ಜ್ವಾಲೆ
ನಿಮ್ಮ ನೀವಾಗಿಸಲಿಲ್ಲ.

ನುಗ್ಗಿ ಓಡಿದಿರಿ, ಒಬ್ಬರ ಮೇಲೊಬ್ಬರು ಬಿದ್ದು ತೆವಳಿದಿರಿ
ತತ್ತ್ವಾಡಿ ಬಂದಿರಿ ಈ ಹುಲ್ಲು ನೆಲವರಿಸಿ
ಸೋತು ನೆಲಕ್ಕೊರಗಿದ ತಲೆಯ ಮೇಲೆ ಹಿಡಿಕೊದಲು
ಯಾಕೆ ನಿಮಗೆ ಈ ಸಂಕಟ
ನಿಮಗೆ ತಿಳಿಯದು ನಿಮ್ಮ ಸ್ಥಿತಿ
ಮನುಷ್ಯ ರೂಪದಿಂದೆಷ್ಟು ದೂರ ನೀವು?
ಇಂದು ಬೆಳಗು ನಿಮ್ಮ ಅಪ್ಪ-ಅವ್ವಂದಿರಾಗಿದ್ದ
ಅಣ್ಣತಂಗಿಯರಾಗಿದ್ದವರ ಬಗ್ಗೆ
ಚಿಂತಿಸುವಿರಿ ಸುಮ್ಮನೆ
ಈಗಿನ ನಿಮ್ಮನ್ನು ಬಲ್ಲರೆ ಅವರು?

ನೀವು ಉಂಡು, ಮಲಗಿ, ಎದ್ದ ಮನೆಗಳ ಬಗ್ಗೆ ಚಿಂತಿಸುತ್ತಿರಿ
ಅಲ್ಲಿ ಬೇಲಿಯ ಗುಲಾಬಿಗಳು ಹರಿದು ಬೂದಿಯಾದ ಮೇಲೆನಾದವು?
ಮೆಲ್ಲಗೆ ಸ್ತಬ್ಧರಾದ ಗೆಳೆಯರ ಮೇಲೊರಗಿ ಚಿಂತಿಸುತ್ತಲೇ ಇದ್ದೀರಿ
ನೀವು ಹುಡುಗಿಯರಾಗಿದ್ದು ಯಾವಗೆಂದು?
ನೀವು ಮನುಷ್ಯ ರೂಪದಲ್ಲಿದ್ದುದು ಯಾವಾಗೆಂದು?

ಟೊಗೆ ಸಾಂಕಿ ಚಿ
ಕೃಪೆ : ಅಣುಶಕ್ತಿ ಪತ್ರಿಕೆ

ಒಂದು ಅಣುಬಾಂಬ್ = 3,40,000 ಪ್ರಾಥಮಿಕ ಶಾಲೆಗಳು ಅಥವಾ 68,000 ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ



REGD No. CPMG/KA/BGE/289/2000

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067